# ಪಂಚಮ

ಸಂಪುಟ—10
ಸಂಚಿಕೆ—21-24
ನವೆಂಬರ್/ಡಿಸೆಂಬರ್, 1986
ಬೆಲೆ–1 ರೂ.





# ಅಂಬೇಡ್ಕರ್ ಸ್ಮರಣೆ : ಜಿಲ್ಲಾ ಸಮಾವೇಶ

ನೀ ಹೋದ ಮರು ದಿನ
ಮೊದಲಂಗೆ ನಂಬದುಕು
ಆಗ್ಯಾದ್ಯೋ ಬಾಬಾಸಾಹೇಬ ...
ನಿನ್ನಂಗ ದುಡಿವವರು
ಕಳಕಳಿಯ ಪಡುವವರು
ಇನ್ನು ತನ ಬರಲಿಲ್ಲ ಒಬ್ಬ...

ಬಲಿಯುತ್ತಿರುವ ಬಿಸಿಲನ್ನೂ ಮೀರಿ ಹಸಿರೆಲೆಗಳ ನಡುವಿಂದ ಹಾಡು ಕೇಳಿ ಬರುತ್ತಿತ್ತು. ಮೌನ ಮೆರವಣಿಗೆಯಲ್ಲಿ ನಡೆದು ಬಂದಿದ್ದ ಸಾವಿರಾರು ದಲಿತರು ಕಬ್ಬನ್ ಪಾರ್ಕ್‌ನ ಎನ್.ಜಿ.ಓ. ಸಭಾಂಗಣದ 'ಬೋಳ ಬಂಡೆಪ್ಪ' ವೇದಿಕೆಯಲ್ಲಿ ನೆರೆದು ಹಾಡಿಗೆ ಮೈಯೆಲ್ಲಾ ಕಿವಿಯಾಗಿದ್ದರು. ದೂರ ದೂರುಗಳಿಂದ ಬಂದಿದ್ದ ಅವರ ಮಾಸಿದ ಮುಖಗಳಲ್ಲಿ ಇನ್ನೂ ಬತ್ತದ ಸ್ಫೂರ್ತಿಯ ಕಳೆ. ಅಗಲಿದ ನಾಯಕನ ಆಶಯಗಳಿಗೆ ಚಿಗುರು ಬರಿಸುವ ಕನಸು.

ಹಾಡು ಮುಗಿಯಿತು. ಕಾರ್ಯಕ್ರಮ ಪ್ರಾರಂಭವಾಯಿತು. ಸಮಾವೇಶ ಅಗಲಿದ ಗೆಳೆಯ ಬೋಳ ಬಂಡೆಪ್ಪ ಅವರಿಗೆ ಗೌರವ ಸಲ್ಲಿಸಲು ಎದ್ದು ನಿಂತು ಎರಡು ನಿಮಿಷಗಳ ಮೌನ ಆಚರಿಸಿತು.

ಬಾಬಾ ಸಾಹೇಬ್ ಅಂಬೇಡ್ಕರರ ಸ್ಮರಣೆಯ ದಿನದ ಜಿಲ್ಲಾ ಸಮ್ಮೇಳನದ ಉದ್ಘಾಟನೆ ಮಾಡಿದ್ದು ಇಂದೂಧರ ಹೊನ್ನಾಪುರ. "ನಿಜವಾದ ನಾಯಕನ ಸ್ಮರಣೆ ಅರ್ಥಪೂರ್ಣ ಅನಿಸಿಕೊಳ್ಳುವುದು ಆತ ಅಗಲಿದ ನಂತರವೂ ಜನ ಆತನ ತತ್ವಗಳ ಈಡೇರಿಕೆಗೆ ಶ್ರಮಿಸಿದಾಗ ಮಾತ್ರ. ಸದಾ ಸ್ವಾಭಿಮಾನಿಗಳಾಗಿರುವಂತೆ ಅಂಬೇಡ್ಕರ್ ಬೋಧಿಸಿದರು. ದ್ವೇಷದಿಂದ ಏನನ್ನೂ ಸಾಧಿಸಲಾಗದು. ಯಾರೂ ಇಂಥಿಂಥ ಜಾತಿಯಲ್ಲಿಯೇ ಹುಟ್ಟಬೇಕು ಎಂದು ಕೇಳಿಕೊಂಡು ಹುಟ್ಟುವುದಿಲ್ಲ. ತಪ್ಪು ಹುಟ್ಟಿದ ಮಗುವಿನದಲ್ಲ. ಜಾತೀಯತೆ ಕಲಿಸುವ ಸಮಾಜದ್ದು. ಆದ್ದರಿಂದ ಮೇಲ್ಜಾತಿಯವರ ಮನಸ್ಸನ್ನು ತಿದ್ದುವ ಹೊಣೆಯೂ ದ.ಸಂ.ಸ.ದ ಮೇಲಿದೆ" ಎಂದು ಜವಾಬ್ದಾರಿಯನ್ನು ನೆನಪು ಮಾಡಿಕೊಟ್ಟರು.

ಆ ನಂತರ ಸಮಾರಂಭಕ್ಕೆ ಆಕಸ್ಮಿಕ ಅತಿಥಿಗಳಾಗಿ ಬಂದವರು ಪಶ್ಚಿಮ ಬಂಗಾಳದ ದಲಿತ ನಾಯಕ ನರೇಂದ್ರದಾಸ್. ಅವರು ಉತ್ತರ ಬಂಗಾಲ್–ತಪಶೀಲಿ ಜಾತಿ ಆದಿವಾಸಿ ಛಾತ್ರ ಸಂಘಟನೆಯ ಕಾರ್ಯದರ್ಶಿ. ದಲಿತರನ್ನು ಬೀದಿಗೆ ದೂಡಲಿರುವ ಮುಖ್ಯಮಂತ್ರಿ ಹೆಗಡೆಯವರ ಹಸಿರುಪಟ್ಟಿ ನೀತಿಯನ್ನು ಖಂಡಿಸಿ ಆತಂಕ ವ್ಯಕ್ತಪಡಿಸಿದರು.

ಆ ನಂತರ ಮಾತನಾಡಿದವರು ದಲಿತ ಕವಿ ಸಿದ್ದಲಿಂಗಯ್ಯ. ತಮ್ಮ ಎಂದಿನ ಚುರುಕು ವ್ಯಂಗ್ಯದ ಮಾತಿನ ಮೊನೆಯ ಮೂಲಕ ದಲಿತರು ತಮಗೆ ಅರಿವಾಗದಂತೆ ಹೇಗೆ ದಲಿತ ವಿರೋಧಿ ಮೌಲ್ಯಗಳಿಗೆ ಬಲಿಯಾಗಿದ್ದಾರೆ ಎಂಬುದನ್ನು ಅನೇಕ ನಿದರ್ಶನಗಳ ಮೂಲಕ ಸಿದ್ದಲಿಂಗಯ್ಯ ನಿರೂಪಿಸಿದರು.

ಉಳ್ಳವರ ಮೌಲ್ಯಗಳಿಗೆ ಜೋತುಬಿದ್ದು ಆಚರಿಸುವ ಅರ್ಥ ಹೀನ ಹಬ್ಬಗಳನ್ನು ಕೈ ಬಿಡುವಂತೆ, ಹಾಗೂ ಮೂಢನಂಬಿಕೆಗೆ ಬಲಿಯಾಗದಂತೆ ಎಚ್ಚರಿಸಿದರು. "ದಲಿತರನ್ನು ಈ ರೀತಿಯ ಸಾಂಸ್ಕೃತಿಕ ದಾಸ್ಯದಿಂದ ಬಿಡುಗಡೆ ಮಾಡದ ಹೊರತು ದಲಿತರ ವಿಮೋಚನೆ ಅಸಾಧ್ಯ" ಎಂದು ಅವರು ಅಭಿಪ್ರಾಯಪಟ್ಟರು.

ಡಾ। ಬಾಬಾಸಾಹೇಬರ ಧೀಮಂತ ವ್ಯಕ್ತಿತ್ವದ ಬಗ್ಗೆ ಪ್ರಸ್ತಾಪಿಸಿದ ಮುನಿಯಲ್ಲಪ್ಪ ಚಾರಿತ್ರಿಕ ಬಿಕ್ಕಟ್ಟಿನ ಸಂದರ್ಭಗಳಲ್ಲೂ ಬಾಬಾಸಾಹೇಬರು ಹೇಗೆ ದಲಿತ ಜನಾಂಗದ ಹಿತಾಸಕ್ತಿ ಕಾಪಾಡಿದರು ಎಂಬುದನ್ನು ಒತ್ತಿ ಹೇಳಿದರು. ಒಂದು ಕಡೆ ಗಾಂಧಿ ಮತ್ತು ಕಾಂಗ್ರೆಸ್ ಇನ್ನೊಂದು ಕಡೆ ಸನಾತನ ಹಿಂದೂಗಳನ್ನು ಸಮರ್ಥವಾಗಿ ನಿಭಾಯಿಸಿದ ಮಹಾನ್‌ವ್ಯಕ್ತಿ ಎಂದವರು ಅಂಬೇಡ್ಕರರನ್ನು ಬಣ್ಣಿಸಿದರು.

ಆ ನಂತರ ಹಸಿರು ಪಟ್ಟಿಯ ವ್ಯಾಪ್ತಿಯಲ್ಲಿ ಬರುವ ದಲಿತರಿಗೆ ನಿವೇಶನ, ಜನತಾಮನೆ, ಬಗರ್‌ಹುಕುಂ ಸಕ್ರಮಗೊಳಿಸುವುದು ಮುಂತಾದ ಆರು ಬೇಡಿಕೆಗಳಿದ್ದ ನಿರ್ಣಯಗಳನ್ನು ಸರ್ವಾನುಮತದಿಂದ ಸಭೆ ಅನುಮೋದಿಸಿತು. ಬೇಡಿಕೆಗಳು ಈಡೇರದಿದ್ದರೆ ಜಿಲ್ಲಾ ಪರಿಷತ್ ಮತ್ತು ಮಂಡಲ ಪಂಚಾಯ್ತಿ ಚುನಾವಣೆಗೆ ಬರುವ ಸಚಿವರ ವಿರುದ್ಧ ಶಾಂತಿಯುತ ಪ್ರತಿಭಟನೆ ಮಾಡಲು ಸಭೆ ತೀರ್ಮಾನಿಸಿತು. ಆರ್. ಮುನಿಯಪ್ಪ ಸ್ವಾಗತಿಸಿ ಚಂದ್ರಶೇಖರಸ್ವಾಮಿ ವಂದಿಸಿದರು.

# ಮಾರ್ಕ್ಸ್, ಫುಲೆ, ಅಂಬೇಡ್ಕರ್ ಚಿಂತನೆಗಳೇ ಸಮಗ್ರ ಕ್ರಾಂತಿಗೆ ತಳಹದಿ

—ಶರದ್ ಪಾಟೀಲ್

**ಶರದ್ ಪಾಟೀಲ್ ಹಿರಿಯ ಕಮ್ಯುನಿಸ್ಟ್ ನಾಯಕರು. ತಮ್ಮ ಸೈದ್ಧಾಂತಿಕ ಭಿನ್ನಾಭಿಪ್ರಾಯದಿಂದಾಗಿ ಸಿ.ಪಿ.ಐ.(ಎಂ) ಪಕ್ಷದಿಂದ ಉಚ್ಚಾಟಿತರಾದವರು.**

**ಭಾರತದ ನೆಲದಲ್ಲಿ ಇಲ್ಲಿನದೇ ಆದ ಚಾರಿತ್ರಿಕ ಅಂಶಗಳ ಮೇಲೆ ಕಮ್ಯುನಿಸ್ಟ್ ಸಿದ್ಧಾಂತ ರೂಪುಗೊಳ್ಳಲೇಬೇಕೆಂದು ಆಶಿಸಿದವರು. ಈ ದಿಕ್ಕಿನಲ್ಲಿ ಯಾವು . ಸಿದ್ಧಾಂತ ಸಾಮಾಜಿಕ, ಅನಿಷ್ಟವಾದ ಜಾತಿ ಮತ್ತು ಬ್ರಾಹ್ಮಣ-ಬ್ರಾಹ್ಮಣೇತರ ಅಂಶಗಳನ್ನು ಅವಶ್ಯವಾಗಿ ಒಳಗೊಳ್ಳಬೇಕೆಂಬ ಖಚಿತ ಅಭಿಪ್ರಾಯ ಉಳ್ಳವರು.**

**ಮಾರ್ಕ್ಸ್, ಜ್ಯೋತಿ ಬಾಫುಲೆ, ಡಾ|| ಅಂಬೇಡ್ಕರ್‌ರವರ ಚಿಂತನೆಗಳ ಎರಕದಿಂದ ಹುಟ್ಟಿಕೊಳ್ಳುವ ಸಿದ್ಧಾಂತ ಮಾತ್ರ ಭಾರತದ ನೆಲಕ್ಕೆ ಸೂಕ್ತ ಸಿದ್ಧಾಂತವಾಗುತ್ತದೆ ಎನ್ನುವ ಅಚಲ ವಿಶ್ವಾಸ ಇವರದು.**

**ಸಿ.ಪಿ.ಎಂ. ನಿಂದ ಹೊರಬಂದ ಮೇಲೆ ಸತ್ಯಶೋಧಕ ಕಮ್ಯುನಿಸ್ಟ್ ಪಕ್ಷವನ್ನು ಕಟ್ಟಿ ಅದರ ಅಧ್ಯಕ್ಷರಾಗಿದ್ದಾರೆ.**

**ದಲಿತ ಸಂಘರ್ಷ ಸಮಿತಿಯು ಕೆಮ್ಮಣ್ಣು ಗುಂಡಿಯಲ್ಲಿ ನಡೆಸಿದ ಕಾರ್ಯಕರ್ತರ ಶಿಬಿರದಲ್ಲಿ ಶರದ್ ಪಾಟೀಲ್ ಅವರು ಮಂಡಿಸಿದ ಪ್ರಬಂಧವನ್ನು ಬಿ. ಗಂಗಾಧರ ಮೂರ್ತಿ ಅವರು ಅನುವಾದಿಸಿ ಕೊಟ್ಟಿದ್ದಾರೆ.**

1934 ರಲ್ಲಿ ಸ್ಥಾಪನೆಗೊಂಡ ಭಾರತ ಕಮ್ಯುನಿಸ್ಟ್ ಪಕ್ಷವು ಪ್ರಾರಂಭದಿಂದಲೂ 1942 ರವರೆಗೂ ಅಸ್ತಿತ್ವದಲ್ಲಿದ್ದ ಕಮ್ಯುನಿಸ್ಟ್ ಅಂತರ್‌ರಾಷ್ಟ್ರೀಯ ಕೂಟವನ್ನು ಅವಲಂಬಿಸಿತ್ತು. ಆದ್ದರಿಂದ ಅದರ ಗೊತ್ತುಗುರಿಗಳು ಕಾಲಕಾಲಕ್ಕೆ ಕಮ್ಯುನಿಸ್ಟ್ ಅಂತರ್‌ರಾಷ್ಟ್ರೀಯ ಕೂಟವು ರೂಪಿಸಿದ ಸಾಮಾನ್ಯ ನಿಯಮಗಳಿಗೆ ಒಳಪಟ್ಟಿತ್ತು. ತನ್ನದೇ ಆದ ನಿಲುವು ಮತ್ತು ನಿಯಮಗಳನ್ನು 1942 ರ ನಂತರ ರೂಪಿಸಿದ ಹೊಣೆಗಾರಿಕೆ ಭಾರತ ಕಮ್ಯುನಿಸ್ಟ್ ಪಕ್ಷದ್ದಾಗಿದೆ. ಆದರೂ ಸ್ಟಾಲಿನ್ ಮರಣದವರೆಗೆ (1953) ಸೋವಿಯತ್ ಯೂನಿಯನ್ ಕಮ್ಯುನಿಸ್ಟ್ (ಬೋಲ್ಷೆವಿಕ್) ಪಕ್ಷದ ಮೇಲಿನ ಅವಲಂಬನೆಯನ್ನು ಅದು ಮುಂದುವರೆಸಿತು.

ವಿಶಿಷ್ಟವಲ್ಲದ ಅವಲಂಬನೆಯು ಸಾಮಾನ್ಯವಾಗಿ ನಿರ್ಧಾರಗಳ ಮೇಲೆ ಪ್ರಭಾವ ಬೀರುವ ರೀತಿಯದ್ದಾಗಿರುವುದಿಲ್ಲ. ಮಗುವು ಹಿರಿಯರ ಮಾರ್ಗದರ್ಶನದಲ್ಲಿ ಬೆಳೆಯಬೇಕಾಗುತ್ತದೆ. ಅವಲಂಬನೆ ಮತ್ತು ಅನುಕರಣೆಯಿಂದ ಸ್ವಾವಲಂಬನೆಯತ್ತ ಅದು ಹೆಜ್ಜೆ ಹಾಕಬೇಕಾಗುತ್ತದೆ. ಹಾಗೆಯೇ ಕ್ರಾಂತಿಕಾರಿ ತತ್ವಗಳು ಮತ್ತು ವಿಜ್ಞಾನದ ಮೇಲೆ ಹಿಡಿತವನ್ನು ಸಾಧಿಸುವುದರ ಮೂಲಕ ಪ್ರಜಾಪ್ರಭುತ್ವವಾದಿ ಕ್ರಾಂತಿಗಳನ್ನು ಸಫಲಗೊಳಿಸಿದ ಸಿ. ಪಿ. ಎಸ್. ಯು (ಬೋಲ್ಷೆವಿಕ್) ತಾತ್ವಿಕವಾಗಿ ಪಕ್ವಗೊಳ್ಳದ ಮತ್ತು ಬೆಳವಣಿಗೆಯ ಹಂತದಲ್ಲಿದ್ದ ವಿಶ್ವದ ಇನ್ನಿತರ ಕಮ್ಯುನಿಸ್ಟ್ ಪಕ್ಷಗಳಿಗೆ ಮಾರ್ಗದರ್ಶಿಯಾದದ್ದು ಸಹಜವೇ.

ಸೃಜನಶೀಲತೆಯ ರೆಕ್ಕೆಗಳು ಬಲಿಯುವ ಪೂರ್ವಸ್ಥಿತಿಯೇ ಅನುಕರಣೆ. ಪ್ರಬುದ್ಧತೆ ಸೃಜನಶೀಲತೆಗೆ ಮತ್ತೊಂದು ಹೆಸರು. ಮಾರ್ಕ್ಸ್‌ವಾದ ಲೆನಿನ್‌ವಾದಗಳ ಆಳವಾದ ಜ್ಞಾನವನ್ನು ಪಡೆಯುವುದರ ಜೊತೆಗೆ ಆಯಾದೇಶದ ಸಮಾಜವನ್ನು ಸರಿಯಾದ ರೀತಿಯಲ್ಲಿ ಅರ್ಥಮಾಡಿಕೊಳ್ಳುವ ಕಮ್ಯುನಿಸ್ಟ್ ಪಕ್ಷವನ್ನು ಪ್ರಬುದ್ಧ ಪಕ್ಷವೆನ್ನಬಹುದು. ಚೀನಾದ ಸಮಾಜವನ್ನು ಸೂಕ್ತರೀತಿಯಲ್ಲಿ ಅಭ್ಯಾಸ ಮಾಡಿದ್ದರಿಂದಲೇ ಅಲ್ಲಿನ ಕ್ರಾಂತಿಗೆ ಬೇಕಾದ ಯುಕ್ತಿ ಮತ್ತು ತಂತ್ರಗಳನ್ನು ಕಂಡ ಕೊಳ್ಳಲು ಮಾವೋಗೆ ಸಾಧ್ಯವಾಯಿತು. ಗತಿತಾರ್ಕಿಕ ಮತ್ತು ಚಾರಿತ್ರಿಕ ಭೌತವಾದಗಳ ತಾತ್ವಿಕ ಚಿಂತನೆ ಹಾಗೂ ಮೂರ್ತ ಮತ್ತು ಅಮೂರ್ತ ಚಿಂತನೆಗಳನ್ನು ಪರಿಣಾಮಕಾರಿಯಾಗಿ ಬೆಳೆಸಲು ಬೇಕಾಗಿರುವ ಮಾರ್ಕ್ಸ್‌ವಾದ ಲೆನಿನ್‌ವಾದದ ಅಭಿಜಾತಕೃತಿಗಳು ಆಯಾ ದೇಶದ ವಸ್ತುನಿಷ್ಠ ಅಭ್ಯಾಸಕ್ಕೆ ಅವಶ್ಯ ಸಾಧನಗಳು. ಆದರೆ ಈ ಸಾಧನಗಳೇ ಅಧ್ಯಯನದ ಸ್ಥಾನವನ್ನು ಆಕ್ರಮಿಸಲಾರವು.

ಸ್ವಾತಂತ್ರ್ಯ ಪೂರ್ವ ಕಾಲ - ಕಮ್ಯುನಿಸ್ಟ್ ಪಕ್ಷಗಳ ಮುಂದಾಳತ್ವದಲ್ಲಿ ಕ್ರಾಂತಿಯ ಸಫಲತೆಯನ್ನು ಕಂಡ ದೇಶಗಳೆಲ್ಲವೂ ವರ್ಗವ್ಯವಸ್ಥೆಯ ಸಮಾಜಗಳಾಗಿದ್ದವು. ಹೀಗಾಗಿ ಈ ಸಾಧನಗಳ ಪ್ರಾಮುಖ್ಯತೆಯು ಅಲ್ಲಿನ ಸಂದರ್ಭದಲ್ಲಿ ಸಂದೇಹಾತೀತವಾಗಿತ್ತು. ಆದರೆ ಈ ಸಾಧನಗಳ ಪರಿಣಾಮಕಾರಿಕ ಗುಣಗಳನ್ನು ಸ್ವೀಕರಿಸುವಲ್ಲಿ ಭಾರತ ಕಮ್ಯುನಿಸ್ಟ್ ಪಕ್ಷವು ವಿವೇಚನಾರಹಿತವಾಗಿ ಎಡವಿತು. ಭಾರತವು ವರ್ಗಸಮಾಜವೆಂದು ತಿಳಿದು ಈ ಸಂದರ್ಭವನ್ನು ವಿಶ್ಲೇಷಿಸತೊಡಗಿತು.

ಜಾತಿ ಪದ್ಧತಿಯ ನಾಶವೇ ಭಾರತದಲ್ಲಿ ಸಮಾಜವಾದಿ ಕ್ರಾಂತಿಯ ಪೂರ್ವಭಾವಿ ಷರತ್ತು ಎಂಬುದು ಅಂಬೇಡ್ಕರ್ ಅವರ ವಾದವಾಗಿತ್ತು. ಅವರು 1936 ರಲ್ಲಿ ಪ್ರಕಟವಾದ ತಮ್ಮ 'ಜಾತಿ ವಿನಾಶ' ಕೃತಿಯಲ್ಲಿ ಇದನ್ನು ವಿಶ್ಲೇಷಿಸಿದರು. ಇದು ಭಾರತೀಯ ಸಮಾಜವಾದಿ ಕ್ರಾಂತಿಯ ವಿಚಾರಗಳಿಗೆ ಮೂಲಭೂತವಾದ ಕಾಣಿಕೆಯಾಗಿತ್ತು. ಆದರೂ ವರ್ಗಾಧಾರಿತ ಅಭ್ಯಾಸಕ್ರಮದಿಂದ ಅವರು ದೂರ ಸರಿದಿರಲಿಲ್ಲ. 'ಜಾತಿ ಕವುಚಿಕೊಂಡ ವರ್ಗ' ಎಂಬ ಪ್ರಸಿದ್ಧ ಹೇಳಿಕೆಯು 'ಭಾರತದಲ್ಲಿ ಜಾತಿಗಳು' (1946) ಎನ್ನುವ ಅವರ ಲೇಖನದಲ್ಲಿ ಕಾಣಿಸಿಕೊಂಡಿತು. ಅದು ಅವರ ಸ್ವಂತ ಪರಿಕಲ್ಪನೆಯಾಗಿರದೆ 1901 ರಲ್ಲಿ ಎಸ್. ವಿ. ಕೇತ್ಕರ್ ಅವರ 'ಭಾರತದ ಜಾತಿಗಳ ಇತಿಹಾಸ' (ಸಂ 1, ಪು28) ಎಂಬ ಗ್ರಂಥದಲ್ಲಿ ಬಳಸಿದ ಪರಿಕಲ್ಪನೆಯಾಗಿತ್ತು.

ಇತರ ದೇಶಗಳಂತೆ ಭಾರತವೂ ಸಹ ಪ್ರಾರಂಭದಲ್ಲಿ ವರ್ಗಸಮಾಜವಾಗಿದ್ದು ಕಾಲಕ್ರಮದಲ್ಲಿ ಜಾತಿ ಸಮಾಜವಾಗಿ ಜಡ ವ್ಯವಸ್ಥೆಯ ರೂಪ ತಳೆಯಿತು ಎಂಬ ವಿಚಾರವನ್ನು ಘೋಷಿಸಹೊರಟ ಪರಿಕಲ್ಪನೆ ಇದಾಗಿತ್ತು. ಕಮ್ಯುನಿಸ್ಟ್ ಪಕ್ಷದ ಏಕೈಕ ಪುರಾತತ್ವ ಸಿದ್ಧಾಂತಕಾರರಾದ ಎಸ್. ಎ. ಡಾಂಗೆಯವರು ತಮ್ಮ ಮಾರ್ಗರೂಪಕ 'ಭಾರತ : ಆದಿ ಸಮತಾವಾದದಿಂದ ಗುಲಾಮಗಿರಿಯವರೆಗೆ' (1949) ಎಂಬ ಗ್ರಂಥದಲ್ಲಿ ವರ್ಣ ಮತ್ತು ಜಾತಿಗಳು ವರ್ಗಕ್ಕೆ ಸಮಾನವೆಂದು (ಪು 105) ಹೇಳಿದರು. ವರ್ಗ ವ್ಯವಸ್ಥೆಯೇ ಶೋಷಣೆ ಮತ್ತು ಪ್ರಭುತ್ವಗಳ ಏಕೈಕ ಸಂಸ್ಥೆ ಎನ್ನುವ ಮಾರ್ಕ್ಸ್‌ನ ಪ್ರತಿಪಾದನೆಯನ್ನು ಈ ವಿಶ್ಲೇಷಣೆ (ನೋಡಿ : ಸಮತಾ–2/1983) ಆಧರಿಸಿತ್ತು.

ಭಾರತೀಯ ಕ್ರಾಂತಿಯ ಸಮಸ್ಯೆ ಎಂದರೆ ಮೂಲತಃ ಪುರಾತತ್ವ ಸಮಸ್ಯೆಯೇ ಆಗಿದೆ. ಆದರೆ ಬ್ರಾಹ್ಮಣೇತರ ಮತ್ತು ದಲಿತ ಚಳವಳಿಗಳ ಮಾರ್ಗದರ್ಶಕರಾರೂ ಗಂಭೀರ ರೀತಿಯಲ್ಲಿ ಪುರಾತತ್ವವನ್ನು ಅಧ್ಯಯನ ಮಾಡುವ ಗೋಜಿಗೆ ಹೋಗಲಿಲ್ಲ. ಕೆ.ಪಿ.

ಜಯಸ್ವಾಲ್. ಅವರ ಉದಾಹರಣೆಯೊಂದನ್ನು ಬಿಟ್ಟರೆ ಮಿಕ್ಕೆಲ್ಲವೂ ಮೇಲ್ಜಾತಿ ವಿದ್ವಾಂಸರಿಂದ ರೂಪಿಸಲ್ಪಟ್ಟ ಪುರಾತತ್ವ ಅಧ್ಯಯನಕ್ಕೇ ಜೋತು ಬೀಳಬೇಕಾಯಿತು.

ಭಾರತೀಯ ಕಮ್ಯುನಿಸ್ಟ್ ಚಳುವಳಿಯು ಈ ಸೈದ್ಧಾಂತಿಕ ಪರಿಮಿತಿಯ ವಾಸ್ತವದೊಳಗೆ ಹೋರಾಟ ನಡೆಸಬೇಕಾಯಿತು. ಈ ವಸ್ತುಸ್ಥಿತಿಯ ಜೊತೆಗೆ ವ್ಯಕ್ತಿಗಳ ಮಟ್ಟದಲ್ಲಿದ್ದ ಈ ಸಂದರ್ಭದ ಮಿತಿಯೆಂದರೆ-ಮೇಲ್ಜಾತಿಯ ಬುದ್ಧಿಜೀವಿಗಳು ಈ ಚಳವಳಿಯ ಮುಂಚೂಣಿಯಲ್ಲಿದ್ದುದು. ಜಾತಿ ವ್ಯವಸ್ಥೆಯ ವಿರುದ್ಧ ಹೋರಾಡಲು ಅವರಿಗೆ ಬೌದ್ಧಿಕ ಮಟ್ಟದಲ್ಲಿನ ಪಟ್ಟಭದ್ರ ಹಿತಾಸಕ್ತಿಗಳು ತೊಡಕಾಗಿದ್ದವು. ಜಾತಿವಿರೋಧಿ ಹೋರಾಟಕ್ಕೂ ಮತೀಯ ಗಲಭೆಗಳಿಗೂ ಇರುವ ವ್ಯತ್ಯಾಸವನ್ನು ಅವರಿಗೆ ಗುರುತಿಸಲಾಗಲಿಲ್ಲ. ಆದ್ದರಿಂದಲೇ ಅವರ ದೃಷ್ಟಿಯಲ್ಲಿ ಜಾತಿಕೇಂದ್ರಿತ ಹೋರಾಟವು ವರ್ಗಹೋರಾಟವನ್ನು ದುರ್ಬಲ/ಛಿದ್ರಗೊಳಿಸುವಂತಹದ್ದಾಗಿತ್ತು.

ಗಾಂಧೀಜಿ ವಿಚಾರಧಾರೆಗೆ ಬದಲಾಗಿ ತಿಲಕರ ವಿಚಾರ ಧಾರೆಯನ್ನು ಭಾರತ ಕಮ್ಯುನಿಸ್ಟ್ ಪಕ್ಷವು ಪ್ರೋತ್ಸಾಹಿಸಿದ್ದು ಗೊತ್ತಿರುವ ಸಂಗತಿ. ಅದು ತಿಲಕರ ರಾಷ್ಟ್ರೀಯ ವಾದವನ್ನು ಸಮಾಜವಾದೀ ರಾಷ್ಟ್ರೀಯ ವಾದವೆಂದು ಕರೆದು ಗಾಂಧೀಜಿಯ ನಿಲುವನ್ನು ವರ್ಗ ಹೊಂದಾಣಿಕೆಯದೆಂದು ತಿರಸ್ಕರಿಸಿತು. ಆದರೆ ತಿಲಕರ ರಾಷ್ಟ್ರೀಯವಾದವು ಜಾತಿಪದ್ಧತಿಯ ಮಿತಿಯಿಂದ ಕೂಡಿದ್ದು ಗಾಂಧೀಜಿ ನಿಲುವು ಕನಿಷ್ಠಮಟ್ಟದಲ್ಲಾದರೂ ಜಾತಿವಿರೋಧಿಯಾಗಿತ್ತು ಎನ್ನುವ ವಿಚಾರವನ್ನು ಅದು ಮನಗಾಣಲಿಲ್ಲ. ಮಹಾರಾಷ್ಟ್ರದ ಕೇಶವರಾವ್ ಜಾಧವ್ ಅವರ ನೇತೃತ್ವದ ಬ್ರಾಹ್ಮಣೇತರ ಚಳುವಳಿಯು 1930ರಲ್ಲಿ ನ್ಯಾಷನಲ್ ಕಾಂಗ್ರೆಸ್‌ನಲ್ಲಿ ವಿಲೀನವಾಗಲು ಗಾಂಧಿವಾದಿ ಎನ್.ವಿ. ಗಾಡ್ಗಿಲ್‌ರಂತಹವರು ಕಾರಣರಾದರು. ಇದು ಸಾಧ್ಯವಾದುದು ಗಾಂಧೀಜಿಯವರ ಜಾತಿವಿರೋಧಿ ನಿಲುವಿನಿಂದಾಗಿಯೇ. ಅಂದಿನಿಂದ ಮಹಾರಾಷ್ಟ್ರ ಕಾಂಗ್ರೆಸ್ ತಿಲಕ್ ಮತ್ತು ಗಾಂಧಿವಾದಿ ಬ್ರಾಹ್ಮಣರ ಹಿಡಿತದಲ್ಲಿದ್ದು ಕೋಮುವಾದಿಯಾಗುವುದರ ಜೊತೆಗೆ ಜಾತಿವಾದಿಯೂ ಆಗಿದೆ. ಆದರೆ ಬ್ರಾಹ್ಮಣೇತರ ಚಳವಳಿಯು ತನ್ನ ಜಾತಿ ವಿರೋಧಿ ನೀತಿಯಿಂದಾಗಿ ಜಾತ್ಯಾತೀತವಾಗಿದೆ. ಭಾರತದಲ್ಲಿ ಎಂತಹ ಎಡ/ಮತ್ತು ಮಾರ್ಕ್ಸ್‌ವಾದಿಯಾಗಿರಲಿ ಅವನು ಜಾತಿವಿರೋಧಿಯಾಗದಿದ್ದರೆ ಜಾತ್ಯಾತೀತನಾಗುವುದು ಸಾಧ್ಯವಿಲ್ಲ.

ಭಾರತ ಕಮ್ಯುನಿಸ್ಟ್ ಪಕ್ಷವು ಪ್ರಮುಖವಾಗಿ ಕೈಗಾರಿಕಾ ಕಾರ್ಮಿಕರ ಪಕ್ಷವಾಗಿ. ಅದರಲ್ಲೂ ಮುಂಬಯಿ ಗಿರಣಿ ಕಾರ್ಮಿಕರ ಪಕ್ಷವಾಗಿ ಬೆಳೆದು ಬಂತು. (1950ರವರೆಗೂ ಅದರ ಕೇಂದ್ರವು ಮುಂಬಯಿ ನಗರದಲ್ಲಿತ್ತು.) ಈ ಕಮ್ಯುನಿಸ್ಟ್ ಕಾರ್ಮಿಕ ಸಂಘಟನೆಯು ಎಸ್.ಎಂ. ಜೋಷಿಯಂತಹ ಸಮಾಜವಾದಿ ನಾಯಕರುಗಳ ನೇತೃತ್ವದಲ್ಲಿದ್ದ ಕಾರ್ಮಿಕ ಸಂಘಟನೆಗೆ ಸಮಾನಾಂತರವಾಗಿ ಬೆಳೆದು ಬಂತು ಎನ್ನುವುದು ಎಲ್ಲರಿಗೂ ಗೊತ್ತಿರುವ ವಿಷಯ. ಇದರ ವಿರುದ್ಧವಷ್ಟೇ ಅಲ್ಲದೆ ಅದು ಬ್ರಾಹ್ಮಣೇತರ ಚಳುವಳಿಯ ಅಂಗವಾಗಿದ್ದ ಕಾರ್ಮಿಕ ಸಂಘಟನೆಯೊಂದರ ವಿರುದ್ಧವೂ ಹೋರಾಡಬೇಕಾಗಿತ್ತು ಎನ್ನುವುದು ಬಹಳ ಮಂದಿಗೆ ತಿಳಿದಿಲ್ಲ. 19ನೇ ಶತಮಾನದ 40ರ ದಶಕದ ಭಾರತದಲ್ಲಿ ಬ್ರಾಹ್ಮಣೇತರ ಚಳುವಳಿಯನ್ನು ಪ್ರಾರಂಭಿಸಿದ ಜ್ಯೋತಿಬಾ ಫುಲೆಯವರ ಸಹವರ್ತಿಯಾಗಿದ್ದ ಎನ್.ಎಂ. ಲೋಖಂಡೆಯವರು ಭಾರತ ಕಾರ್ಮಿಕ ವರ್ಗದ ಚಳವಳಿಯನ್ನು ರೂಪಿಸಿದವರಾಗಿದ್ದರು. ಆರ್.ಪಿ. ದತ್ತರು ತಮ್ಮ India Today ಗ್ರಂಥದಲ್ಲಿ ಈ ಅಂಶವನ್ನು ಗಮನಿಸುತ್ತಾರಾದರೂ ಅದನ್ನು ಕಾರ್ಮಿಕ ಚಳುವಳಿ ಎಂದು ಕರೆಯಲು ನಿರಾಕರಿಸುತ್ತಾರೆ.

"ಭಾರತ ಕಾರ್ಮಿಕ ಚಳವಳಿಯ ಪ್ರಾರಂಭದ ಹಂತವಾಗಿ ಭಾರತೀಯ ಕಾರ್ಮಿಕವರ್ಗದ ಚರಿತ್ರೆಯಲ್ಲಿ ತಮ್ಮದೇ ಪಾತ್ರ ವಹಿಸಿದ ಲೋಖಂಡೆಯವರ ಚಟುವಟಿಕೆಗಳ ಚಿತ್ರವು ದಾರಿ ತಪ್ಪಿಸುವಂತಹುದು... 'ಬಾಂಬೆ ಗಿರಣಿಕೈಗಳ ಸಂಘ'ವು ಯಾವುದೇ ಅರ್ಥದಲ್ಲಿ ಕಾರ್ಮಿಕ ಸಂಘಟನೆಯಾಗಿರಲಿಲ್ಲ. ಅದಕ್ಕೆ ಸದಸ್ಯತ್ವವಾಗಲೀ. ನಿಧಿಯಾಗಲೀ ಅಥವಾ ನಿಯಮಗಳಾಗಲೀ ಇರಲಿಲ್ಲ. ಲೋಖಂಡೆಯವರು ಕಾರ್ಮಿಕರ ಪರವಾದ ಶಾಸನಗಳನ್ನು ಮತ್ತು ಕಾರ್ಮಿಕ ಕಲ್ಯಾಣವನ್ನು ಗಮನದಲ್ಲಿಟ್ಟುಕೊಂಡಿದ್ದ ಸಮಾಜ ಸೇವಕ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದ್ದವರಾಗಿದ್ದರೇ ಹೊರತು ಕಾರ್ಮಿಕ ಚಳವಳಿಯ ನೇತಾರರಾಗಿರಲಿಲ್ಲ". (ಪು. 331)

ಸಂವಿಧಾನ, ಸದಸ್ಯತ್ವ ಹಾಗೂ ನಿಧಿ ಇವುಗಳು ಮಾತ್ರವೇ ಕಾರ್ಮಿಕ ಚಳುವಳಿಯ ಅಥವಾ ಸಂಘಟನೆಯ ನಿರ್ಣಾಯಕ ಅಂಶಗಳೇ ? ಇಲ್ಲಿನ ವಾಸ್ತವ ಅಂಶವೆಂದರೆ ಭಾರತದ ಪ್ರಥಮ ಕಾರ್ಮಿಕ ಚಳುವಳಿಯು ರಾಷ್ಟ್ರೀಯ ಚಳುವಳಿಯ ಅಂಗವಾಗಿರಲಿಲ್ಲ. ಬದಲಾಗಿ ಅದು ಜಾತಿವಿರೋಧಿ ಚಳುವಳಿಯ ಅಂಗವಾಗಿದ್ದು ಕಾರ್ಮಿಕರನ್ನು ಬ್ರಾಹ್ಮಣೇತರ ಶೂದ್ರಸಮುದಾಯಗಳ ಸಂಘಟನೆಯಾಗಿತ್ತು. ಈ ಕಾರಣದಿಂದಲೇ ಇದನ್ನು ಕಾರ್ಮಿಕ ಚಳುವಳಿಯೆಂದು ಒಪ್ಪಲು ಅವರು ತಯಾರಿರಲಿಲ್ಲ. ಅಂಬೇಡ್ಕರ್ ಭಾರತ ಕೈಗಾರಿಕಾ ಕಾರ್ಮಿಕರನ್ನು ಒಂದೇ ಲಕ್ಷಣವಿರುವ ವರ್ಗ ಎಂದು ಕರೆಯಲು ನಿರಾಕರಿಸಿದ್ದೂ ಅಲ್ಲದೆ ಈ ದೇಶದ ಸಂದರ್ಭದಲ್ಲಿ ಕಾರ್ಮಿಕವರ್ಗವು ಜಾತಿಗಳಿಂದ ಆಂತರಿಕವಾಗಿಯೇ ವಿಭಜಿಸಲ್ಪಟ್ಟದ್ದು ಎನ್ನುತ್ತಾರೆ. ಈ ಮಾತನ್ನು ನಾವು ನೆನಪಿನಲ್ಲಿಡಬೇಕಾದುದು ಮುಖ್ಯ. ಡಾ॥ ಘನಶ್ಯಾಮ ಷಾರಂತಹ ಮಾರ್ಕ್ಸ್‌ವಾದಿ ಸಮಾಜ ವಿಜ್ಞಾನಿಗಳೂ ಕೂಡ ಭಾರತೀಯ ಸಮಾಜವು ಒಂದೇ ಲಕ್ಷಣವುಳ್ಳ ವರ್ಗಗಳನ್ನು ರೂಪಿಸಬೇಕಾಗಿದೆ ಎನ್ನುವ ಅಭಿಪ್ರಾಯವನ್ನು ತಳೆಯುತ್ತಾರೆ.

1930ರವರೆಗೆ ಪ್ರಬಲ ಬೆಳವಣಿಗೆಯನ್ನು ಬ್ರಾಹ್ಮಣೇತರ ರೈತಚಳುವಳಿಯು ಪಡೆಯುತ್ತಾ ಹೋದರೂ ಮೊದಲ ಮಹಾಯುದ್ಧದ ಬಳಿಕ ಬ್ರಾಹ್ಮಣೇತರ ಕಾರ್ಮಿಕ ಚಳುವಳಿಯು ತನ್ನ ಪ್ರಖರತೆಯ ಮಟ್ಟವನ್ನು ಕಾಪಾಡಿಕೊಳ್ಳಲು ಸಾಧ್ಯವಾಗಲಿಲ್ಲ. ರಷ್ಯಾ ಮಹಾಕ್ರಾಂತಿಯನ್ನು ಮೊದಲಿಗೆ ಸ್ವಾಗತಿಸಿದ್ದು ಈ ಸಂಘಟನೆಯೇ ಆದರೂ ಕಮ್ಯುನಿಸ್ಟ್ ಮುಂದಾಳುಗಳು ಈಗಲೂ ತಿಲಕರೇ ಇದರ ಪ್ರೇರಕ ಶಕ್ತಿಯಾಗಿದ್ದರು ಎನ್ನುತ್ತಾರೆ. ಬ್ರಾಹ್ಮಣೇತರ ಚಳುವಳಿಯನ್ನು ಜನಾಂದೋಲನವಾಗಿ ಮಾರ್ಪಡಿಸಿದ ಕೊಲ್ಲಾಪುರದ ಸಾಹು ಮಹಾರಾಜರು ಬಾಂಬೆ ಕಾರ್ಮಿಕರ 24-11-1918ರ ಸಾರ್ವಜನಿಕ ಸಭೆಯಲ್ಲಿ ರಷ್ಯಾ ಮಹಾಕ್ರಾಂತಿಯನ್ನು ಸ್ವಾಗತಿಸಿದರು.

ಆಧುನಿಕ ಕೈಗಾರಿಕೆಯು ಕಾರ್ಖಾನೆಗಳ ಛಾವಣಿಯ ಅಡಿಯಲ್ಲಾದರೂ ಬ್ರಾಹ್ಮಣೇತರ ಜಾತಿಗಳ ಕಾರ್ಮಿಕರನ್ನು ಒಂದುಗೂಡಿಸಿರುವ ವಾಸ್ತವವನ್ನು ಅರ್ಥಮಾಡಿಕೊಳ್ಳಲು ಬ್ರಾಹ್ಮಣೇತರ ಚಳುವಳಿಯು ವಿಫಲವಾದರೆ. ಕಾರ್ಖಾನೆಯಿಂದ ತಮ್ಮ ವಾಸದ ಪ್ರದೇಶಗಳಿಗೆ ಹಿಂದಿರುಗಿದ ಕೂಡಲೇ ಅವರು ಕೈಗಾರಿಕಾ ಕಾರ್ಮಿಕವರ್ಗವಾಗಿರುವುದು ಸಾಧ್ಯವಿಲ್ಲವೆನ್ನುವ ಅಂಶವನ್ನು ಅರ್ಥಮಾಡಿಕೊಳ್ಳುವಲ್ಲಿ ಕಮ್ಯುನಿಸ್ಟರು ವಿಫಲರಾದರು. ವರ್ಗವ್ಯವಸ್ಥೆಯ ನೂತನ ಆರ್ಥಿಕ ವಾಸ್ತವತೆ ಮತ್ತು ಜಾತಿಯ–ಪ್ರಾಚೀನ ಸಾಮಾಜಿಕ–ವಾಸ್ತವತೆಗಳ ವಿರೋಧಾತ್ಮಕ ಗುಣಗಳನ್ನು ಮೈಗೂಡಿಸಿಕೊಂಡ ಅಭಿವ್ಯಕ್ತಿಯಾಗಿ ಭಾರತೀಯ ಕೈಗಾರಿಕಾ ಕಾರ್ಮಿಕರನ್ನು ಪರಿಗಣಿಸಲಿಲ್ಲ. ಬ್ರಾಹ್ಮಣೇತರ ಕಾರ್ಮಿಕ ಚಳುವಳಿಯ ಬಗ್ಗೆ ನೇತಾರರ ದೃಷ್ಟಿಕೋನವನ್ನು ತಳೆದ ಕಮ್ಯುನಿಸ್ಟರು ಈ ವೈರುಧ್ಯವನ್ನು ಬಗೆಹರಿಸುವಲ್ಲಿ ಪ್ರಾಚೀನವೂ ಮೂಲಭೂತವೂ ಆದ ಜಾತಿವ್ಯವಸ್ಥೆಯ ವಾಸ್ತವತೆಯನ್ನು ನಿರಾಕರಿಸಿದರು; ವರ್ಗವ್ಯವಸ್ಥೆಯ ನೂತನ ವಾಸ್ತವತೆಯೇ ಏಕಮಾತ್ರ ಭಾರತೀಯ ವಾಸ್ತವತೆ ಎಂದು ಹೇಳತೊಡಗಿದರು.

23–4–28ರಲ್ಲಿ ಮುಂಬಯಿ ಗಿರಣಿ ಕಾರ್ಮಿಕರು ಪ್ರಾರಂಭಿಸಿದ 'ಮುಷ್ಕರದಲ್ಲಿ ಈ ವೈರುಧ್ಯಮಯ ಭಾರತೀಯ ವಾಸ್ತವಿಕತೆಯೊಂದಿಗಿನ ಘರ್ಷಣೆಯು ಅಭಿವ್ಯಕ್ತಗೊಂಡಿತು. ಅಲ್ಲಿಯವರೆಗೆ ಹೆಚ್ಚು ಸಂಬಳವು ದೊರಕುತ್ತಿದ್ದ ನೇಯ್ಗೆ ವಿಭಾಗಕ್ಕೆ ಅಸ್ಪೃಶ್ಯರನ್ನು ನೇಮಿಸುತ್ತಿರಲಿಲ್ಲ. ಈ ವಿಭಾಗಕ್ಕೆ ಅಸ್ಪೃಶ್ಯ

**ಅಂಬೇಡ್ಕರ್ ಭಾರತ ಕೈಗಾರಿಕಾ ಕಾರ್ಮಿಕರನ್ನು ಒಂದೇ ಲಕ್ಷಣವಿರುವ ವರ್ಗ ಎಂದು ಕರೆಯಲು ನಿರಾಕರಿಸಿದ್ದೂ ಅಲ್ಲದೆ ಈ ದೇಶದ ಸಂದರ್ಭದಲ್ಲಿ ಕಾರ್ಮಿಕ ವರ್ಗವು ಜಾತಿಗಳಿಂದ ಆಂತರಿಕವಾಗಿಯೇ ವಿಭಜಿಸಲ್ಪಟ್ಟದ್ದು ಎನ್ನುತ್ತಾರೆ. ಈ ಮಾತನ್ನು ನಾವು ನೆನಪಿನಲ್ಲಿಡಬೇಕಾದದ್ದು ಮುಖ್ಯ.**

# ಸಿರಿಗನ್ನಡಂ ಗೆಲ್ಗೆ ಸಿರಿಗನ್ನಡಂ ಬಾಳ್ಗೆ

ಭವ್ಯ ಪರಂಪರೆಯ ಸಂಕೇತ, ಕರ್ನಾಟಕ ಪ್ರಾಕೃತಿಕ ಹಾಗೂ ಸಾಂಸ್ಕೃತಿಕ ಸಂಪತ್ತಿನ ಆಗರ, ಕಲಾ ಸರಸ್ವತಿ ನೆಲೆಸಿರುವ ಪುಣ್ಯ ಭೂಮಿಕೆ ಎರಡು ಸಹಸ್ರ ವರ್ಷಗಳಿಗೂ ಮೀರಿದ ವೈಭವಯುತ ಇತಿಹಾಸವುಳ್ಳ ಪುಣ್ಯ ಭೂಮಿ. ಇಂತಹ ಪವಿತ್ರ ಭೂಮಿಯ ಭಾಷೆ ಕನ್ನಡ. ಇದೊಂದು ಕಾವ್ಯ ಭಾಷೆ. ಇದರ ಪುನರುತ್ಥಾನವೇ ನಮ್ಮ ತಪಸ್ಸು. ಕನ್ನಡ ನಾಡು ತನ್ನ ಭವ್ಯ ಪರಂಪರೆಯನ್ನುಳಿಸಿಕೊಳ್ಳಲು ಕರ್ನಾಟಕ ಸರ್ಕಾರವು ಹಲವಾರು ಯೋಜನೆಗಳನ್ನು ಕೈಗೊಂಡಿದೆ. ಈ ಕಾರ್ಯಕ್ರಮಗಳು ಕನ್ನಡ ಅಭಿವೃದ್ಧಿ ಹಾಗೂ ಸಾಹಿತ್ಯ ಮತ್ತು ಸಾಂಸ್ಕೃತಿಕ ಚಟುವಟಿಕೆಗಳನ್ನು ಕುರಿತು ರೂಪಿಸಿರುವಂಥವು.

**ಕನ್ನಡ ಅಭಿವೃದ್ಧಿ :** ಕನ್ನಡವನ್ನು ಆಡಳಿತದ ಎಲ್ಲ ಹಂತಗಳಲ್ಲಿಯೂ ಪರಿಣಾಮಕಾರಿಯಾಗಿ ಬಳಕೆಗೆ ತರಲು ಸರ್ಕಾರ ಕೈಗೊಂಡಿರುವ ಯೋಜನೆಗಳು.

* ಸರ್ಕಾರದ ಅಧಿಕಾರಿಗಳಿಗೆ, ನೌಕರರಿಗೆ ತಮ್ಮ ದೈನಂದಿನ ಆಡಳಿತ ವ್ಯವಹಾರದಲ್ಲಿ ಕನ್ನಡವನ್ನು ಸಮರ್ಥವಾಗಿ ಬಳಸಲು ಆರು ದಿನಗಳ ಕಾರ್ಯ ಶಿಬಿರ.

* ಕನ್ನಡ ಬಾರದ ಸರ್ಕಾರಿ ಅಧಿಕಾರಿಗಳಿಗೆ, ನೌಕರರಿಗೆ ಅಂಚೆ ಮೂಲಕ ಕನ್ನಡ ಕಲಿಸುವ ಒಂದು ವರ್ಷದ ಯೋಜನೆ.

* ಸಾರ್ವಜನಿಕ ಉದ್ದಿಮೆಗಳ ಕನ್ನಡ ಸಿಬ್ಬಂದಿಗೆ ಸ್ಥಳೀಯ ಸಂಘ ಸಂಸ್ಥೆಗಳ ಸಹಾಯದಿಂದ ಕನ್ನಡ ಕಲಿಸುವ ಆರು ತಿಂಗಳ ಯೋಜನೆ.

* ನೆರೆರಾಜ್ಯಗಳ ವಿಶ್ವವಿದ್ಯಾಲಯಗಳಲ್ಲಿ ಕನ್ನಡ ಸಂಶೋಧನೆಯಲ್ಲಿ ತೊಡಗಿರುವ ವಿದ್ಯಾರ್ಥಿಗಳಿಗೆ ಶಿಷ್ಯವೇತನ.

* ಕನ್ನಡ ಭಾಷೆಯನ್ನು ಆಡಳಿತ ಭಾಷೆಯಾಗಿ ಸಮರ್ಥವಾಗಿ ಬಳಸಲು ಪ್ರತಿ ಇಲಾಖೆಗೂ ತನ್ನದೇ ಆದ ಪಾರಿಭಾಷಿಕ ಶಬ್ದಕೋಶ, ಕೈಪಿಡಿ, ಸಿವಿಲ್ ಸೇವಾ ನಿಯಮಾವಳಿ, ಆರ್ಥಿಕ ಸಂಹಿತೆ, ಖಜಾನೆ ಸಂಹಿತೆ ಮುಂತಾದ ಆಡಳಿತ ಸಾಹಿತ್ಯದ ಪರಿಷ್ಕರಣ.

* ಕನ್ನಡ ಭಾಷೆಯಲ್ಲಿ ಭಾರತದ ಸಂವಿಧಾನ, ರಾಜ್ಯ ಅಧಿನಿಯಮಗಳು, ಕಾನೂನು ಪುಸ್ತಕಗಳು ಮುಂತಾದುವುಗಳ ಪ್ರಕಟಣೆ.

* ಸರ್ಕಾರಿ ಇಲಾಖೆಗಳ ಇಂಗ್ಲಿಷ್ ಬೆರಳಚ್ಚುಗಾರರಿಗೆ ಹಾಗೂ ಶೀಘ್ರಲಿಪಿಗಾರರಿಗೆ ಕನ್ನಡ ಬೆರಳಚ್ಚು ಹಾಗೂ ಶೀಘ್ರಲಿಪಿಯಲ್ಲಿ ತರಬೇತಿ.

* ನಿರುದ್ಯೋಗಿ ಕನ್ನಡ ಬೆರಳಚ್ಚುಗಾರರಿಗೆ 'ಜಾಬ್ ಟೈಪಿಂಗ್'ಗಾಗಿ ಕನ್ನಡ ಬೆರಳಚ್ಚು ಯಂತ್ರ ಖರೀದಿಸಲು ಸಾಲದ ನೆರವು.

* ಪದವಿ ಮಟ್ಟದಲ್ಲಿ ಕನ್ನಡ ಮಾಧ್ಯಮ ತೆಗೆದುಕೊಂಡು ಓದುವ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿ ವೇತನ.

* ಕೆಎಎಸ್, ಐಎಎಸ್, ಎಂಬಿಬಿಎಸ್, ಎಲ್‌ಎಲ್‌ಬಿ ಮುಂತಾದ ಪರೀಕ್ಷೆಗಳಲ್ಲಿ ಕನ್ನಡವನ್ನು ಬಳಸಿ ಉತ್ತೀರ್ಣರಾದವರಿಗೆ ಬಹುಮಾನ.

* ಶ್ರೀಸಾಮಾನ್ಯರಿಗೆ ಅರ್ಥವಾಗುವಂಥ ಸರಳ ಆಡಳಿತ ಕನ್ನಡ ಭಾಷೆಯ ಬಳಕೆಗಾಗಿ ಕನ್ನಡ ಭಾಷಾಂತರ ಸರಳೀಕರಣ ಸಮಿತಿ.

* ಕನ್ನಡ ಭಾಷೆಯನ್ನು ಆಡಳಿತ ಭಾಷೆಯಾಗಿ ಅನುಷ್ಠಾನಕ್ಕೆ ತರಲು ಕನ್ನಡ ಕಾವಲು ಸಮಿತಿ.

## ಸಾಹಿತ್ಯ ಮತ್ತು ಸಂಸ್ಕೃತಿ ಚಟುವಟಿಕೆಗಳು :

ಕರ್ನಾಟಕ ಸರ್ಕಾರದ ವತಿಯಲ್ಲಿ ಸ್ಥಾಪಿತವಾಗಿರುವ ವಿವಿಧ ಅಕಾಡೆಮಿಗಳಾದ ಕರ್ನಾಟಕ ಸಾಹಿತ್ಯ ಅಕಾಡೆಮಿ, ಸಂಗೀತ ನೃತ್ಯ ಅಕಾಡೆಮಿ, ಲಲಿತಕಲಾ ಅಕಾಡೆಮಿ, ನಾಟಕ ಅಕಾಡೆಮಿ, ಜಾನಪದ ಮತ್ತು ಯಕ್ಷಗಾನ ಅಕಾಡೆಮಿ ಮತ್ತು ಉರ್ದು ಅಕಾಡೆಮಿಗಳು ಸಾಹಿತ್ಯ ಮತ್ತು ಕಲೆಯ ಅಭಿವೃದ್ಧಿಗಾಗಿ ಶ್ರಮಿಸುತ್ತಿವೆ.

ಪುರಾಣ ಮತ್ತು ಜಗತ್ಪ್ರಸಿದ್ಧ ಜನಪ್ರಿಯ ಗ್ರಂಥಗಳ ಪ್ರಕಟಣೆಗೆ ಧನಸಹಾಯ, ಕನ್ನಡ ಸಾಹಿತ್ಯ ಪರಿಷತ್ತು ಮುಂತಾದ ಸಂಘ-ಸಂಸ್ಥೆಗಳಿಗೆ ಆರ್ಥಿಕ ಪ್ರೋತ್ಸಾಹ, ಸಾಂಸ್ಕೃತಿಕ ಕಾರ್ಯಕ್ರಮಗಳ ಅಂಗವಾಗಿ ಕಲಾವಿದರಿಗೆ ಪ್ರೋತ್ಸಾಹ, ಕಲಾವಿದರಿಗೆ ಗೌರವ ಧನ, ಮಾಸಾಶನ, ಅಶಕ್ತ ಕಲಾವಿದರಿಗೆ ವೈದ್ಯಕೀಯ ನೆರವು, ಗಣನೀಯ ಸೇವೆಗೈದ ಕಲಾವಿದರಿಗೆ ರಾಜ್ಯೋತ್ಸವ ಪ್ರಶಸ್ತಿ- ಇವೇ ಮುಂತಾದವುಗಳು ಸರ್ಕಾರ ಹಾಗೂ ಅಕಾಡೆಮಿಗಳಿಂದ ನಡೆಯುತ್ತಿರುವ ಚಟುವಟಿಕೆಗಳು. ನಮ್ಮ ನಾಡ ನುಡಿ, ಕಲೆ, ಸಂಸ್ಕೃತಿ ಪರಂಪರೆಗಳ ಪುನಶ್ಚೇತನಕ್ಕಾಗಿ ನಾವೆಲ್ಲ ಒಂದಾಗಿ ದುಡಿಯೋಣ.

● ಕರ್ನಾಟಕ ವಾರ್ತೆ

ರನ್ನು ನೇಮಿಸಿಕೊಳ್ಳುವ ಷರತ್ತಿಗೆ ಒಪ್ಪಿಕೊಳ್ಳದಿದ್ದಲ್ಲಿ ಅಸ್ಪೃಶ್ಯರು ಈ ಮುಷ್ಕರದಲ್ಲಿ ಭಾಗವಹಿಸಕೂಡದು ಎಂಬ ನಿರ್ಧಾರವನ್ನು ಹೇರುವುದಾಗಿ ಕಾರ್ಮಿಕ ಸಂಘದ ಕಮ್ಯುನಿಸ್ಟ್ ಮುಂದಾಳುಗಳ ಮೇಲೆ ಒತ್ತಡ ತರಲಾಯ್ತು. ಈ ಷರತ್ತಿಗೆ ಅವರು ಅರೆ ಮನಸ್ಸಿನಿಂದ ಒಪ್ಪಿದರೂ ಅದು ಕಾರ್ಯರೂಪಕ್ಕಿಳಿಯಲಿಲ್ಲ. (ಸರ್ ದೇಸಾಯಿ-1979-12)

ಜಾತಿ ವ್ಯವಸ್ಥೆಯ ವಿರುದ್ಧ ಹೋರಾಡುವಲ್ಲಿ ಭಾರತೀಯ ಕಮ್ಯುನಿಸ್ಟರು ಸೋತಿದ್ದಾರೆ ಎನ್ನುವ ಅಪಾದನೆಗೆ, 1930ರಲ್ಲೇ ಅಸ್ಪೃಶ್ಯತೆ ಮತ್ತು ಜಾತಿ ವ್ಯವಸ್ಥೆಗೆ ಸಂಬಂಧಿಸಿದ ನಿಲುವಳಿಯನ್ನು ಸ್ವೀಕರಿಸಿರುವುದಾಗಿ ಅವರು ಉತ್ತರಿಸಿದರು. ಅಂಬೇಡ್ಕರ್ ನಾಯಕತ್ವದಲ್ಲಿ ಸ್ವತಂತ್ರ ದಲಿತ ಚಳುವಳಿಯು ಪ್ರಬಲವಾಗತೊಡಗಿತ್ತು. ಈ ವಸ್ತುಸ್ಥಿತಿಯ ಒತ್ತಡದ ಪರಿಣಾಮವಾಗಿ ಇಂತಹ ನಿಲುವಳಿಯನ್ನು ಸ್ವೀಕರಿಸಲಾಗಿತ್ತು. ಭಾರತಕ್ಕೆ ಹಿಂದಿರುಗಿದ ಹೊಸದರಲ್ಲಿ, ತನ್ನ ರಾಜಕೀಯ ಜೀವನದ ಪ್ರಾರಂಭದಲ್ಲಿ, ಸಂಪ್ರದಾಯಬದ್ಧ ಹಿಂದುವಾಗಿದ್ದ ಗಾಂಧೀಜಿ ಕೂಡ ದಲಿತ ಚಳುವಳಿಯ ಒತ್ತಡದಿಂದಾಗಿಯೂ, ಭಾರತೀಯ ಸಮಾಜದ ಎಲ್ಲಾ ವಿಭಾಗಗಳ ಜನರೂ ರಾಷ್ಟ್ರೀಯ ವಿಮೋಚನಾ ಚಳುವಳಿಯಲ್ಲಿ ಭಾಗವಹಿಸಬೇಕಾಗಿರುವ ಅನಿವಾರ್ಯತೆಯಿಂದಾಗಿಯೂ ಹರಿಜನ ಕಲ್ಯಾಣದತ್ತ ಗಮನ ಹರಿಸಿದರು.

ವಿಮೋಚನಾ ಚಳುವಳಿಗಳಲ್ಲಿ ಬರುವ ಇಂತಹ ಭಾವನಾತ್ಮಕ ಅಥವಾ ದೀನದಲಿತರ ಸೇವೆಯಂತಹ ಅಂಶಗಳಿಗೆ ಕಮ್ಯುನಿಸ್ಟರು ಸಾಮಾನ್ಯವಾಗಿ ಮಾರು ಹೋಗುವುದಿಲ್ಲ. ಬಿಡುಗಡೆಯ ಹೋರಾಟಗಳು ತಾತ್ವಿಕವಾಗಿ ಸಮ್ಮತವಾಗಿದ್ದರೆ ಮಾತ್ರ ಅಂತಹವನ್ನು ಅವರು ಜನಾಂದೋಲನವಾಗಿ ರೂಪಿಸುತ್ತಾರೆ. 30ರ ದಶಕದವರೆಗೆ ಸಮಾಜವಾದೀ ಅರ್ಥವಾದವು ಅವರಿಗೆ ಪ್ರಮುಖವಾಗಿತ್ತು. ಗಾಂಧೀ ರಾಷ್ಟ್ರೀಯವಾದದಿಂದ ಕೂಡ ಇದು ಪ್ರಭಾವಿತವಾಗಿದ್ದಿರಲೂ ಬಹುದು. ಗಾಂಧೀಜಿಯ ದೃಷ್ಟಿಯಲ್ಲಿ ಭಾರತದ ಸಮಸ್ತ ಸಾಮಾಜಿಕ ಅನಿಷ್ಟಗಳನ್ನೆಲ್ಲ ನಿವಾರಿಸುವ ರಾಮಬಾಣವೇ ಸ್ವಾತಂತ್ರ್ಯ. ಭಾರತದಲ್ಲಿ ಸಮಾಜವಾದೀ ಅರ್ಥವಾದವನ್ನು ಕಮ್ಯುನಿಸ್ಟ್ ಪಕ್ಷವು ರೂಪಿಸಿಕೊಂಡದ್ದು 1853 ರಲ್ಲಿ ಮಾರ್ಕ್ಸ್ ಭಾರತವನ್ನು ಕುರಿತು ನ್ಯೂಯಾರ್ಕ್ ಟ್ರಿಬ್ಯೂನ್ ಪತ್ರಿಕೆಯಲ್ಲಿ ಬರೆದ ಲೇಖನದ ಆಧಾರವಾದ ಮೇಲೆ. 1940 ರಲ್ಲಿ ಇಂಗ್ಲಂಡಿನಲ್ಲಿ ಪ್ರಕಟವಾಗಿ ಬಹಿಷ್ಕೃತವಾದ ಆರ್. ಪಿ. ದತ್ತರ India ,Today ಗ್ರಂಥದ ಕಾನೂನುಬಾಹಿರ ಸಂಚಾರದಿಂದ ಇದು ಘೋಷಿಸಲ್ಪಟ್ಟಿತು ಎನ್ನಬಹುದು :

'ಭಾರತದ ಪ್ರಗತಿ ಮತ್ತು ರಾಷ್ಟ್ರಶಕ್ತಿಗೆ ನಿರ್ಣಾಯಕ ರೀತಿಯಲ್ಲಿ ಅಡ್ಡಿಯಾಗಿರುವ. ಜಾತಿ ಪದ್ಧತಿಗೆ ಆಧಾರವಾಗಿರುವ ವಂಶಪಾರಂಪರಿಕವಾದ ಶ್ರಮವಿಭಜನೆಯನ್ನು ಆಧುನಿಕ ಕೈಗಾರಿಕೆಯು ಕರಗಿಸಬಲ್ಲದು' - India To-day, ಪು.244.

ತ್ಯಾಗ ಬಲಿದಾನಗಳಲ್ಲಿ ಈ ದೇಶದ ಕಮ್ಯುನಿಸ್ಟರು ಹಿಂದೆ ಬೀಳಲಿಲ್ಲ. ನಗರ ಮತ್ತು ಗ್ರಾಮೀಣ ಶೋಷಿತರನ್ನು ಸಂಘಟಿಸಿದ ಪ್ರಥಮ ಹಾಗೂ ಇಂದಿಗೂ ಭಾರಿ ಪ್ರಮಾಣದ ವರ್ಗಚಳುವಳಿಯನ್ನು ಭಾರತದಲ್ಲಿ ರೂಪಿಸಿದ ಕಮ್ಯುನಿಸ್ಟರ ತ್ಯಾಗ ಬಲಿದಾನಗಳು ಅಪ್ರ

**ಅಂಬೇಡ್ಕರ್ ನಾಯಕತ್ವದಲ್ಲಿ ಸ್ವತಂತ್ರ ದಲಿತ ಚಳವಳಿಯು ಪ್ರಭಲವಾಗ ತೊಡಗಿತ್ತು. ಈ ವಸ್ತುಸ್ಥಿತಿಯ ಒತ್ತಡದ ಪರಿಣಾಮವಾಗಿ ಮುಂಬೈ ಹತ್ತಿ ಗಿರಣಿಗಳಲ್ಲಿ ಹೆಚ್ಚು ಸಂಬಳ ತರುವ ನೇಯ್ಗೆ ವಿಭಾಗದಲ್ಲಿ ಅಸ್ಪೃಶ್ಯರನ್ನು ನೇಮಿಸ ಬೇಕೆಂದು ನಿಲುವಳಿಯನ್ನು ಕಮ್ಯುನಿಸ್ಟರು ಕೈಗೊಂಡರು.**

**ಭಾರತಕ್ಕೆ ಹಿಂದಿರುಗಿದ ಹೊಸದರಲ್ಲಿ ತನ್ನ ರಾಜಕೀಯ ಜೀವನದ ಪ್ರಾರಂಭ ದಲ್ಲಿ, ಸಂಪ್ರದಾಯಬದ್ಧ ಹಿಂದುವಾಗಿದ್ದ ಗಾಂಧೀಜಿ ಕೂಡ ಹರಿಜನ ಕಲ್ಯಾಣ ದತ್ತ ಗಮನ ಹರಿಸಿದರು.**

ತಿವಾದವುಗಳು ಹಾಗೂ ಮುಂದೆ ಪ್ರಖರವಾಗಬೇಕಾದ ಜಾತಿವಿರೋಧಿ ಕ್ರಾಂತಿಯ ಹಿನ್ನೆಲೆಯಲ್ಲಿ ಮಾರ್ಗದರ್ಶಕವಾದವು. ಸ್ವಾತಂತ್ರ್ಯಪೂರ್ವ ಭಾರತದಲ್ಲಿ ಜಾತಿ-ವರ್ಗದ ಚಳುವಳಿಯನ್ನು ಕಟ್ಟಲು ಅವರಿಗಿದ್ದ ತೊಡಕೆಂದರೆ ತಾತ್ವಿಕವಾದ ಹಿಂಜರಿಕೆ ಹಾಗೂ ಸೈದ್ಧಾಂತಿಕವಾಗಿ ತಮ್ಮನ್ನು ಜಾತಿರಹಿತಗೊಳಿಸಿಕೊಳ್ಳಲು ಇದ್ದ ಸಂಕೋಚಗಳೇ ಕಾರಣವಾಗಿವೆ.

## ಸ್ವಾತಂತ್ರ್ಯೋತ್ತರ ಕಾಲ

"ತೆಲಂಗಾಣ ಜನಸಂಗ್ರಾಮ ಮತ್ತು ಅದರ ಪಾಠಗಳು" (1972) ಎನ್ನುವ ಗ್ರಂಥದಲ್ಲಿ ಪಿ. ಸುಂದರಯ್ಯನವರು "ಈ ರೈತ ಬಂಡಾಯವು ಅಸ್ಪೃಶ್ಯತೆಯನ್ನು ತೊಡೆದು ಹಾಕಿತು" (ಪು. 27) ಎಂದು ಬರೆದರು. ಮಹಾರಾಷ್ಟ್ರದಲ್ಲಿ ಅಂಬೇಡ್ಕರ್ ನೇತೃತ್ವದಲ್ಲಿ ನಡೆದ ದಲಿತ ಚಳುವಳಿಯಿಂದಾಗಿ ಕಮ್ಯುನಿಸ್ಟ್ ಚಳುವಳಿಯು ಪರಕೀಯವಾಗತೊಡಗಿತ್ತು. ಕಮ್ಯುನಿಸ್ಟ್ ಪಕ್ಷದ ನೇತೃತ್ವದಲ್ಲಿನ ಅತ್ಯಂತ ಪ್ರಭಾವಶಾಲಿ ವರ್ಗಸಮರದಿಂದಾಗಿ ಆಂಧ್ರಪ್ರದೇಶದಲ್ಲಿ ಅಂಬೇಡ್ಕರ್ ವಾದವು ಬೇರೂರುವುದು ಸಾಧ್ಯವಿಲ್ಲ ಎನ್ನುವ ಅಭಿಪ್ರಾಯವನ್ನು ಬಂಡಾಯೋತ್ತರ ಕಾಲದ ಕಮ್ಯುನಿಸ್ಟ್ ಯುವಜನ ಕಾರ್ಯಕರ್ತರು ಹೊಂದಿದ್ದರು. ಇದು ಪಕ್ಷವು ಪರಕೀಯವಾಗುತ್ತಿರುವ ತನ್ನ ಸ್ಥಿತಿಯ ಬಗ್ಗೆ ವ್ಯಕ್ತಪಡಿಸಿದ ಪ್ರತಿರೋಧಾತ್ಮಕ ಪ್ರತಿಕ್ರಿಯೆಯಾಗಿತ್ತು. 1956ರ ಚುನಾವಣೆಯಲ್ಲಿ ಅಂಬೇಡ್ಕರ್ ಸಂಯುಕ್ತ ಮಹಾರಾಷ್ಟ್ರ ಸಮಿತಿಯೊಂದಿಗೆ ಸಹಕರಿಸಿದರೂ ಕಮ್ಯುನಿಸ್ಟ್ ಪಕ್ಷದ ಪ್ರಬಲ ಶಕ್ತಿಯಾಗಿದ್ದ ಗಿರಣಿ ಕಾರ್ಮಿಕರು ಆಗಲೇ ಇಂಟಕ್ ಸೇರತೊಡಗಿದ್ದರು. ಇದೂ ಅಲ್ಲದೆ ಬೌದ್ಧಮತಕ್ಕೆ ಮತಾಂತರ ಹೊಂದಿದ ನಂತರ ಅಂಬೇಡ್ಕರ್ ಮತ್ತು ಅವರ ದಲಿತ ಅನುಯಾಯಿಗಳು ಹಾಗೂ ಹೊಸ ಪೀಳಿಗೆಯ ದಲಿತ ಕಮ್ಯುನಿಸ್ಟರು ಕಮ್ಯುನಿಸ್ಟ್ (ಪಕ್ಷದ) ವಿರೋಧಿಗಳೂ ನವಬೌದ್ಧರೂ ಆಗತೊಡಗಿದ್ದರು.

ಸ್ವಾತಂತ್ರ್ಯೋತ್ತರ ಭಾರತದಲ್ಲಿ ಜಾತಿ ವಿರೋಧಿ ಸಮಸ್ಯೆಯನ್ನು ಕೈಗೆತ್ತಿಕೊಂಡು ಆ ತಳಹದಿಯ ಮೇಲೆ ಚಳವಳಿಯೊಂದನ್ನು ಹೂಡಿದ ಒಬ್ಬನೇ ವಾಮಪಂಥೀಯ ನಾಯಕನೆಂದರೆ ಡಾ. ರಾಮಮನೋಹರ ಲೋಹಿಯಾ. ಎರಡನೆ ಮಹಾ ಯುದ್ಧದವರೆಗೆ ಮಾರ್ಕ್ಸ್ ವಾದದ ಪರವೂ ಗಾಂಧೀ ವಾದದ ವಿರುದ್ಧವೂ ಇದ್ದ ಲೋಹಿಯಾ ನಂತರ ಕಮ್ಯುನಿಸ್ಟ್ ಪಕ್ಷದ 'ಜನಸಂಗ್ರಾಮ' ನಿಲುವಿನಿಂದಾಗಿ, ತಮ್ಮ ನಿಲುವನ್ನು ತಿರುವು ಮುರುವು ಮಾಡಿಕೊಂಡರು. ಸ್ವಾತಂತ್ರ್ಯೋತ್ತರ ಕಾಲದಲ್ಲಿ ಗಾಂಧೀ ಸಮಾಜವಾದವು ಜನತಾಂತ್ರಿಕ ಸಮಾಜವಾದದ ಸ್ಥಾನವನ್ನು ಗಿಟ್ಟಿಸಿಕೊಂಡಿತು. ಗಾಂಧೀವಾದದ ಜಾತಿವಿರೋಧಿ ಸಿದ್ಧಾಂತವನ್ನು ಲೋಹಿಯಾವಾದಿ ಸಮಾಜವಾದಿ ಪಕ್ಷವು ಮುಂದುವರೆಸಿತು. ಈ ಪಕ್ಷವು ತನ್ನ ಜಾತಿ ವಿರೋಧಿ ನೀತಿ ಮತ್ತು ಆಚರಣೆಯಿಂದಾಗಿ ಪ್ರಜಾ ಸೋಷಲಿಸ್ಟ್ ಪಕ್ಷಕ್ಕಿಂತ ಹೆಚ್ಚು ತೀವ್ರಗಾಮಿಯಾಗಿತ್ತು ಎನ್ನುವುದನ್ನು ನಾವು ಇಲ್ಲಿ ಅಗತ್ಯವಾಗಿ ಗಮನಿಸಬೇಕು. ಅದು ಸಂಯುಕ್ತ ಮಹಾರಾಷ್ಟ್ರ ಸಮಿತಿಯನ್ನು ಸೇರದೆ ಮುಂಬಯಿ ನಗರ ಪಾಲಿಕೆಯ ವಿರುದ್ಧ ಪೌರಕಾರ್ಮಿಕರ ಮುಷ್ಕರವನ್ನು ಸಂಘಟಿಸಿತು.

ಕಮ್ಯುನಿಸ್ಟ್ ಪಕ್ಷದಲ್ಲಿನ ಕಾಂಗ್ರೆಸ್‌ಪರ ಮತ್ತು ಕಾಂಗ್ರೆಸ್‌ವಿರೋಧಿ ಬಣಗಳ ನಡುವೆ ಉಂಟಾದ ತೀವ್ರತರ ವಿರೋಧದಿಂದಾಗಿ 1964ರಲ್ಲಿ ಗಂಭೀರ ಸ್ವರೂಪದ ಒಡಕು ಕಮ್ಯುನಿಸ್ಟ್ ಪಕ್ಷದಲ್ಲುಂಟಾಯಿತು. ಪಕ್ಷವು ಸಿ.ಪಿ.ಐ. ಮತ್ತು ಸಿ.ಪಿ.ಐ.(ಎಂ) ಬಣಗಳ ರೂಪ ತಾಳಿತು. ಪಕ್ಷದ ವಿಭಜನೆಗೆ ಮೊದಲು ಪಕ್ಷದಲ್ಲಿ ಸೊರಗಿಹೋಗುತ್ತಿದ್ದ ಬಲಿಷ್ಠತೆಗೆ ಕೇವಲ ಪರಿಷ್ಕರಣವಾದೀ ಕಾಂಗ್ರೆಸ್ ಪರ ನೀತಿಯೊಂದೇ ಕಾರಣ ಎನ್ನಲಾಯಿತು. 1967ರಲ್ಲಿ ಪ. ಬಂಗಾಳ ಮತ್ತು ಕೇರಳ ರಾಜ್ಯಗಳಲ್ಲಿ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷವು ಅಧಿಕಾರಕ್ಕೆ ಬಂದಾಗ ಈ ಪಕ್ಷವು ಸಂಸತ್ ರಾಜಕಾರಣದಲ್ಲಿ ಭಾಗವಹಿಸಿದ್ದರಿಂದ ಬಲಹೀನವೂ ಪರಿಷ್ಕರಣವಾದಿಯೂ ಆಗಿದೆ ಎನ್ನುವ ದೂರನ್ನು ಮುಂದೆ ಮಾಡಿಕೊಂಡು 1969 ರಲ್ಲಿ ನಕ್ಸಲೀಯರು ಬೇರೆಯಾದರು. ಸಿ.ಪಿ.ಐ.ನ ರಾಷ್ಟ್ರೀಯ ಜನತಾಂತ್ರಿಕ ಹಂತಕ್ಕೆ ಭಿನ್ನವಾದ ಜನತಾಂತ್ರಿಕ ಸಮಾಜವಾದದ ನಿಲುವಿನಿಂದ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷವು ಕಳೆದುಕೊಂಡಿದ್ದ ತನ್ನ ಬಲಿಷ್ಠತೆಯನ್ನು ಮರಳಿ ಪಡೆಯಲು ಯತ್ನಿಸಿತು. ಆದರೆ ಸಿ.ಪಿ.ಐ. (ಎಂ.ಎಲ್.) ಹೊಸ ಜನತಾಂತ್ರಿಕ ಕ್ರಾಂತಿ ತತ್ವವನ್ನು ಸ್ವೀಕರಿಸಿ ತನ್ನ ಪ್ರಖರತೆಯನ್ನು ಕಾಪಾಡಿಕೊಳ್ಳಲು ಮುಂದಾಯಿತು. ಜಾತಿವಿರೋಧಿ ಚಳವಳಿಯನ್ನು ಉಪೇಕ್ಷಿಸಿದ ಕಾರಣಕ್ಕಾಗಿ ತಮ್ಮ ಬಲಿಷ್ಠತೆಯು ಕುಗ್ಗಿತು ಎನ್ನುವುದನ್ನು, ಪಕ್ಷವು ಹೋಳಾದ ಎರಡು ಸಂದರ್ಭಗಳಲ್ಲೂ ಅವರು ಅರ್ಥ ಮಾಡಿಕೊಳ್ಳಲಿಲ್ಲ. ಜಾತಿ ಸಮಸ್ಯೆಯನ್ನು ಪರಿಗಣಿಸದ ವರ್ಗಹೋರಾಟವು ಎಡಪಂಥೀಯರ ಬಲಿಷ್ಠತೆ

ಪೂರಕವಾಗಬಲ್ಲದು ಎನ್ನುವುದಕ್ಕೆ ಇದೊಂದು ಉದಾಹರಣೆ.

ಸಂಯುಕ್ತ ಮಹಾರಾಷ್ಟ್ರ ಸಮಿತಿಯಲ್ಲಿ ಬಿರುಕುಂಟಾದ ಬಳಿಕ ರಿಪಬ್ಲಿಕನ್ ಪಕ್ಷವು ಆಗಿನ ಮುಖ್ಯಮಂತ್ರಿ ವೈ. ಬಿ. ಚವಾಣ್ ರೂಪಿಸಿದ ಬಹುಜಾತೀವಾದಿ 'ಬಲೆ'ಯಲ್ಲಿ ಸಿಕ್ಕಿಬಿದ್ದಿತು. ಅಂಬೇಡ್ಕರ್ ಅವರ ಕಾಂಗ್ರೆಸ್ ವಿರೋಧಿ ನಿಲುವಿಗೆ ಬಗೆದ ದ್ರೋಹದಿಂದಾಗಿ ದಲಿತ ಯುವಕರಲ್ಲಿ ಅತೃಪ್ತ ಭಾವನೆ ಬೆಳೆಯಿತು. (1956ರಲ್ಲಿ ಅಂಬೇಡ್ಕರ್ 'ಕಾಂಗ್ರೆಸ್ ಹತ್ತಿಕೊಂಡು ಉರಿಯುತ್ತಿರುವ ಮನೆ' ಎಂದಿದ್ದರು.) ರಿಪಬ್ಲಿಕನ್ ಪಕ್ಷದ ನಾಯಕತ್ವದ ವಿರುದ್ಧ ಸಿಡಿದೆದ್ದ ಈ ಬಂಡಾಯವು 1972-73ರ ಅವಧಿಯಲ್ಲಿ ನಡೆದ ಮುಂಬಯಿ ಗಿರಣಿ ಕಾರ್ಮಿಕರ ಸಾರ್ವತ್ರಿಕ ಮುಷ್ಕರದ ನಡುವೆ ಸವರ್ಣೀಯರಿಗೂ ದಲಿತ ಕಾರ್ಮಿಕರಿಗೂ ಉಂಟಾದ ಘರ್ಷಣೆಯ ಜೊತೆಗೂಡಿತು. ನಕ್ಸಲ್‌ಬಾರಿ ಒಲವಿನಿಂದಾಗಿ ಜೈಲಿಗೆ ತಳ್ಳಲ್ಪಟ್ಟ ಅನಿಲ್ ಬರ್ವೆ ಅವರು ಸಂಪಾದಿಸುತ್ತಿದ್ದ "ರಣಾಂಗಣ್" ಮರಾಠಿ ವಾರಪತ್ರಿಕೆಯ 1-2-74ರ ಸಂಚಿಕೆಯಲ್ಲಿ ಹೊಸದಾಗಿ ಕಟ್ಟಿದ ದಲಿತ್ ಪ್ಯಾಂಥರ್ ಪ್ರಣಾಳಿಕೆಯು ಪ್ರಕಟವಾಯಿತು. ಈ ಬಂಡಾಯ ಮತ್ತು ಪ್ರಣಾಳಿಕೆಗಳು ಕಮ್ಯುನಿಸ್ಟ್ ಪ್ರೇರೇಪಿತವಾದವೆಂದು ರಿಪಬ್ಲಿಕನ್ ನಾಯಕತ್ವವು ಆರೋಪಿಸಿದರೂ ಈ ಪ್ರಣಾಳಿಕೆಯು ಅತ್ಯಂತ ನಿರ್ದಾಕ್ಷಿಣ್ಯವಾಗಿ ಸ್ಪಷ್ಟ ಮಾತುಗಳಲ್ಲಿ ಭಾರತೀಯ ಕಮ್ಯುನಿಸ್ಟ್ ಪಕ್ಷಗಳ ವರ್ಗ ಹೋರಾಟದ ಸಿದ್ಧಾಂತವನ್ನು ಖಂಡಿಸಿತು ಎನ್ನುವುದು ಗಮನಾರ್ಹ.

"ಐದು ಮಹಾ ಚುನಾವಣೆಗಳ ನಂತರ ಎಡ ಪಕ್ಷಗಳು ಸಂಪೂರ್ಣ ದಿವಾಳಿತನದ ಹಂತವನ್ನು ತಲುಪಿವೆ. ಒಂದು ಚುನಾವಣೆಯಿಂದ ಮತ್ತೊಂದಕ್ಕೆ ಹೇಗೆ ಹೆಜ್ಜೆಯಿಡಬೇಕು ಎನ್ನುವುದೇ ಅವು ಅನುಸರಿಸಿರುವ ನೀತಿ ಸೂತ್ರಗಳ ಒಟ್ಟು ಅರ್ಥ. ಕೆಲವು ರಾಜ್ಯಗಳಲ್ಲಿ ಐಕ್ಯರಂಗ ಸರ್ಕಾರವನ್ನು ರಚಿಸುವ ಅವಕಾಶಗಳನ್ನು ಅವು ಪಡೆದಿದ್ದವು. ಆದರೆ ಶೋಷಿತರ ಸಮಸ್ಯೆಯನ್ನು ಬಗೆಹರಿಸುವಲ್ಲಾಗಲೀ, ಈ ದೇಶದ ಜನಶಕ್ತಿಯನ್ನು ರೂಪಿಸುವಲ್ಲಾಗಲೀ ಜನತೆಗೆ ನಿರ್ದಿಷ್ಟ ಪರ್ಯಾಯವನ್ನು ಸೂಚಿಸುವುದರಲ್ಲಾಗಲೀ ಈ ಪಕ್ಷಗಳು ಯಶಸ್ವಿಯಾಗಲಿಲ್ಲ. ಬದಲಾಗಿ ಅಧಿಕಾರದ ರಾಜಕಾರಣದಲ್ಲಿ ತನ್ಮಯವಾಗಿ ಸಾಮಾಜಿಕ ಕ್ರಾಂತಿಯನ್ನು ಕಡೆಗಣಿಸಿದವು. ಅಸ್ಪೃಶ್ಯತೆಯ ಸಮಸ್ಯೆಗಿರುವ ಪ್ರಾಮುಖ್ಯತೆಯನ್ನು ನಿರಾಕರಿಸಿದ್ದರಿಂದ ಆರ್ಥಿಕ ಶೋಷಣೆಯ ವಿರುದ್ಧದ ಚಳವಳಿಯ ಜೊತೆಯಲ್ಲಿಯೇ ಸಾಂಸ್ಕೃತಿಕ ಮತ್ತು ಸಾಮಾಜಿಕ ಪ್ರಾಬಲ್ಯದ ವಿರುದ್ಧ ಚಳವಳಿಯನ್ನು ರೂಪಿಸುವಲ್ಲಿ ಇವು ಸೋತವು. ಅಸ್ಪೃಶ್ಯತೆಯು ಶೋಷಣೆಯ ಅತಿ ವಿಷಪ್ರಾಯವಾದ ರೂಪ. ಇದು ಊಳಿಗಮಾನ್ಯ ಪದ್ಧತಿಯ ಬೆಳವಣಿಗೆಯ ಕ್ರಮದಲ್ಲಿ, ಅದರ ಉತ್ಪನ್ನವಾಗಿ ಬಂದ ಶೋಷಣೆಯ ಒಂದು ರೂಪ. ಸಮಾಜದ ಎಲ್ಲ ಕ್ಷೇತ್ರಗಳನ್ನೂ ಒಳಗೊಳ್ಳುವಂತಹ ಕ್ರಾಂತಿಕಾರಿ ಸಿದ್ಧಾಂತವೊಂದನ್ನು ಪ್ರಚಾರಕ್ಕೆ ತರದಂತಿರುವುದೇ ಇಲ್ಲಿನ ಎಡಪಕ್ಷಗಳ ನೀತಿಯಾಗಿದೆಯೇನೋ ಎನ್ನಿಸುತ್ತದೆ."

ದಲಿತ ಚಳವಳಿಯ ಈ ಚಾರಿತ್ರಿಕ ತಿರುವನ್ನು ಮೂರು ಕಮ್ಯುನಿಸ್ಟ್ ಪಕ್ಷಗಳೂ ಉಪೇಕ್ಷಿಸಿದವು. ಲೋಹಿಯಾವಾದಿ ಜಾತಿವಿರೋಧೀ ಸಮಾಜ ಸುಧಾರಕ ಡಾ. ಬಾಬಾ ಅಧಾವ್ ತಮ್ಮ ಕಮ್ಯುನಿಸ್ಟ್ ವಿರೋಧಿ ನೆಲೆಯಿಂದ ಸಮಾಜವಾದಿ ಮತ್ತು ಕಮ್ಯುನಿಸ್ಟ್ ಪಕ್ಷಗಳಲ್ಲಿದ್ದ ಮೈತ್ರಿಯನ್ನು ಒಡೆದರು. ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷ ಮತ್ತು ಸೋಷಲಿಸ್ಟ್ ಪಕ್ಷಗಳು 1973ರಲ್ಲಿ ಸಂಯುಕ್ತ ಜನಾಂದೋಲನ ಕರೆಯ ಮೇರೆಗೆ ಜಾತಿಯನ್ನು ಕುರಿತಂತೆ ತಮ್ಮ ತಾತ್ವಿಕ ನಿಲುವನ್ನು ಜಂಟಿ ಪ್ರಣಾಳಿಕೆಯ ಮೂಲಕ ಸ್ಪಷ್ಟಪಡಿಸಿದರು.

"ಸೋಷಲಿಸ್ಟ್ ಪಕ್ಷವು ವರ್ಗದ ನೆಲೆಯಿಂದ ಎಲ್ಲವನ್ನೂ ವಿವರಿಸುವುದು ಅಸಾಧ್ಯ ಎನ್ನುವ ಅಭಿಪ್ರಾಯಕ್ಕೆ ಅಂಟಿಕೊಂಡಿತ್ತು. ಜಾತಿಯು ಮರಗಟ್ಟಿದ ವರ್ಗ ಎನ್ನುವುದನ್ನೂ ಗಮನಿಸುವ ಅವಶ್ಯಕತೆ ಇದೆ. ಆದ್ದರಿಂದ ಸಾಮಾಜಿಕವಾಗಿ ದುರ್ಬಲರಾದವರು ತಮ್ಮ ಏಳಿಗೆಯನ್ನು ಸಾಧಿಸಲು ವಿಶೇಷ ಅವಕಾಶಗಳನ್ನು ಕಲ್ಪಿಸಬೇಕೆಂದು ಸೋಷಲಿಸ್ಟ್ ಪಕ್ಷವು ವಾದಿಸಿತು. ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷವು ಈ ವಿಶೇಷ ಅವಕಾಶವು ಪರಿಶಿಷ್ಟ ಜಾತಿ/ವರ್ಗ, ಹಿಂದುಳಿದ ಜಾತಿ/ಕೋಮುಗಳು, ಧಾರ್ಮಿಕ

**ಅಸ್ಪೃಶ್ಯತೆಯ ಸಮಸ್ಯೆಗಿರುವ ಪ್ರಾಮುಖ್ಯತೆಯನ್ನು ನಿರಾಕರಿಸಿದ್ದರಿಂದ ಆರ್ಥಿಕ ಶೋಷಣೆಯ ವಿರುದ್ಧದ ಚಳವಳಿಯ ಜೊತೆಯಲ್ಲಿಯೇ ಸಾಂಸ್ಕೃತಿಕ ಮತ್ತು ಸಾಮಾಜಿಕ ಪ್ರಾಬಲ್ಯದ ವಿರುದ್ಧ ಚಳವಳಿಯನ್ನು ರೂಪಿಸುವಲ್ಲಿ ಎಡ ಪಕ್ಷಗಳು ಸೋತು ಹೋದವು.**

ಅಲ್ಪ ಸಂಖ್ಯಾತರು ಮತ್ತು ಸ್ತ್ರೀಯರಿಗೂ ಇರಬೇಕು ಎನ್ನುವ ಅಭಿಪ್ರಾಯವನ್ನು ವ್ಯಕ್ತಪಡಿಸಿತು. ಹಳೆಯ ಸಾಮಾಜಿಕ-ಆರ್ಥಿಕ ಸಂಸ್ಥೆಗಳ ವಿರುದ್ಧ ಹೂಡುವ ಹೋರಾಟವು ಶೋಷಕ ವರ್ಗದ ವಿರುದ್ಧ ಎಲ್ಲ ಶೋಷಿತರನ್ನೂ ಒಂದುಗೂಡಿಸುವ ಬಹು ಮುಖ್ಯ ಸಂಗತಿ ಎಂದೂ ಅಭಿಪ್ರಾಯಪಟ್ಟಿತು. ಜಾತಿ ಮತ್ತು ವರ್ಗವನ್ನು ಒಂದೇ ಎಂದು ಬಗೆಯಲು ಸಾಧ್ಯವಿಲ್ಲ. ಅಲ್ಲದೆ ಆಳುವ ವರ್ಗವು ತಮ್ಮ ವರ್ಗ ಪ್ರಾಬಲ್ಯವನ್ನು ವೃದ್ಧಿಗೊಳಿಸಿಕೊಳ್ಳಲು ಜಾತಿಯನ್ನು ಬಳಸಿಕೊಳ್ಳುತ್ತದೆ ಎಂದೂ ಹೇಳಿತು. ವರ್ಗ ದೃಷ್ಟಿಕೋನವನ್ನು ಸ್ವೀಕರಿಸುವುದರ ಮೂಲಕ ಮಾತ್ರವೇ ಜನತಂತ್ರ ಮತ್ತು ಸಮಾಜವಾದದ ಹೋರಾಟದಲ್ಲಿ ಶ್ರಮಿಕ ಜನರನ್ನು ತೊಡಗಿಸಬಹುದು ಎನ್ನುವ ಅಭಿಪ್ರಾಯವನ್ನೂ ಕೊಟ್ಟಿತು. ಸಾಮಾಜಿಕವಾಗಿ ಹಿಂದುಳಿದ ಜಾತಿ ವಿಭಾಗಗಳು ಮತ್ತು ಶ್ರಮಜೀವಿಗಳ ವಿಶಾಲ ವರ್ಗಗಳನ್ನು ನಿಖರವಾಗಿ ಬೇರ್ಪಡಿಸುವುದು ಸಾಧ್ಯವಿಲ್ಲ ಎನ್ನುವುದನ್ನು ಇಬ್ಬರೂ ಒಪ್ಪಿಕೊಂಡರು" – (People's Democracy—30-9-73)

ಜಾತಿಯು ಚಲನರಹಿತ ವರ್ಗ ಎನ್ನುವ

ಅಂಬೇಡ್ಕರ್ ವಾದವನ್ನೇ ಸೋಷಲಿಸ್ಟ್ ಪಕ್ಷವು ಬೇರೆ ಮಾತುಗಳಲ್ಲಿ ಪುನರುಚ್ಚರಿಸಿತು. ಆದರೆ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷವು ವರ್ಗ ಶೋಷಣೆಗೆ ಜಾತಿಯನ್ನು ಆಳುವ ವರ್ಗವು ತನ್ನ ಯುಕ್ತಿಯಾಗಿ ಬಳಸಿಕೊಳ್ಳುವುದನ್ನು ಒಪ್ಪಿಕೊಂಡರೂ ಇಬ್ಬದಿಯಿಂದ ತೂರುವ ಆಯುಧಗಳನ್ನು ತನ್ನ ವರ್ಗಸಮರವೆಂಬ ಒಂದೇ ಆಯುಧದಿಂದ ಎದುರಿಸಲು ಹವಣಿಸಿತು. ಸೋಷಲಿಸ್ಟ್ ಪಕ್ಷವು ಜಾತಿ ವಿರೋಧಿಯಾಗಿದ್ದರೂ ತನ್ನ ಗಾಂಧೀ ಸಮಾಜವಾದದಿಂದಾಗಿ ಕ್ರಾಂತಿಯ ಉಪಕರಣವಾದ ಚಾರಿತ್ರಿಕ ಭೌತವಾದವನ್ನು ಉಪಯೋಗಿಸುವುದಾಗಲಿಲ್ಲ. ಒಮ್ಮುಖ ಚಾರಿತ್ರಿಕ ಭೌತವಾದದ ಮಾರ್ಕ್ಸ್‌ವಾದೀ ಕಮ್ಯುನಿಸ್ಟ್ ಪಕ್ಷಕ್ಕೆ ಶೋಷಣೆ ಮತ್ತು ಆಡಳಿತವೆಂಬ ಸಂಪೂರ್ಣ ಭಿನ್ನವಾದ ಸಾಮಾಜಿಕ ಸಂಸ್ಥೆಗಳನ್ನು ನಿರ್ವಚಿಸುವ ಕಾರ್ಯದಲ್ಲಿ ತನ್ನ ಸೈದ್ಧಾಂತಿಕ ಉಪಕರಣವನ್ನು ಬಳಸಲಾಗಲಿಲ್ಲ.

ಜಯಪ್ರಕಾಶ್ ನಾರಾಯಣರ ನೇತೃತ್ವದಲ್ಲಿ ಸಂಘಟಿತವಾದ ನಿರಂಕುಶ ವಿರೋಧೀ ಐಕ್ಯರಂಗವು ವರ್ಗ ದೃಷ್ಟಿ ಯುಕ್ತಿಯ ಆಧಾರದ ಮೇಲೆ ರೂಪು ಪಡೆಯಬೇಕಾಗಿದ್ದ ವಿಶಾಲ ತಳಹದಿಯ ಐಕ್ಯರಂಗವಾಗಿತ್ತು. ಜನಸಂಘದಂತಹ ಬಲಪಂಥೀಯ ಪಕ್ಷಗಳು ಈ ಐಕ್ಯರಂಗದಲ್ಲಿ ಸೇರಿದ್ದರಿಂದ ಮಾರ್ಕ್ಸ್‌ವಾದಿ ಪಕ್ಷವು ಪ್ರಾರಂಭದಲ್ಲಿ ವಿರೋಧವನ್ನು ವ್ಯಕ್ತಪಡಿಸಿದರೂ ತುರ್ತು ಪರಿಸ್ಥಿತಿಯ ಕೊನೇ ಹಂತದಲ್ಲಿ ಐಕ್ಯರಂಗವನ್ನು ಸೇರುವುದು ಅನಿವಾರ್ಯವಾಯಿತು. ಕೇಂದ್ರ ಮತ್ತು ಕೆಲವು ರಾಜ್ಯಗಳ ಜನತಾ ಸರ್ಕಾರಗಳಲ್ಲಿ ಜನಸಂಘವು ಅತ್ಯಂತ ಸುಸಂಘಟಿತವೂ ಬಲಿಷ್ಠ ಸಹಭಾಗಿಯೂ ಆಗಿದ್ದರಿಂದ ಬಂಡಾಯವೆದ್ದ ದಲಿತರು ಮತ್ತು ಆದಿವಾಸಿಗಳ ಮೇಲೆ ದೌರ್ಜನ್ಯದ ಹೊಸ ಯುಗವು ಆರಂಭವಾಯ್ತು. ಬಿಹಾರದ ಜನತಾ ಸರ್ಕಾರದಲ್ಲಿ ಲೋಹಿಯಾವಾದಿ ಕರ್ಪೂರಿ ಠಾಕೂರ್ ಮುಖ್ಯಮಂತ್ರಿಯಾಗಿದ್ದಾಗ ಹಿಂದುಳಿದ ಜಾತಿಗಳಿಗೆ ಮೀಸಲಾತಿಯ ಸೌಲಭ್ಯವನ್ನು ನೀಡುವ ಕಾಯಿದೆಯನ್ನು (ಮುಂದೆ ಈ ಕಾಯಿದೆಯು 1980ರಲ್ಲಿ ಮಂಡಲ್ ವರದಿಯಲ್ಲಿ ಸಮರ್ಥಿತವಾಗಿ ಶಿಫಾರಸುಗೊಳಿಸಲಾಯ್ತು) ಜಾರಿಗೊಳಿಸಿದಾಗ ಜನಸಂಘವು ಮುಂದುವರೆದ ಜಾತಿಗಳನ್ನು ಎತ್ತಿಕಟ್ಟಿದುದರ ಜೊತೆಗೆ ಕಾಂಗ್ರೆಸ್ ಜೊತೆ ಸೇರಿ, ಸಖ್ಯ ಪಕ್ಷವಾದ ಜನತಾ ಮಂತ್ರಿಮಂಡಲವನ್ನು ಪದಚ್ಯುತಿಗೊಳಿಸಿತು. ಜನಸಂಘವು ಜಾತಿ ಪದ್ಧತಿಯ ಬಿಕ್ಕಟ್ಟನ್ನು ಎಷ್ಟರ ಮಟ್ಟಿಗೆ ತೀವ್ರಗೊಳಿಸಿದೆ ಎಂದರೆ ಯಾವುದೇ ವರ್ಗ ಐಕ್ಯರಂಗವಾಗಲೀ ಅಥವಾ ಬಿ.ಜೆ.ಪಿ.ಯೂ ಸೇರಿದಂತೆ ಎಲ್ಲ ವಿರೋಧ ಪಕ್ಷಗಳ ಐಕ್ಯರಂಗವಾಗಲೀ ಭಾರತೀಯ ಕ್ರಾಂತಿ ಚಳವಳಿಯನ್ನು ಮುನ್ನಡೆಸಲು ಸಾಧ್ಯವೇ ಇಲ್ಲದಂತಾಗಿದೆ. ಪುರೋಹಿತಶಾಹಿ ಮತ್ತು ಬಂಡವಾಳ ಶಾಹಿಗಳ ವಿರುದ್ಧ ಅಂಬೇಡ್ಕರ್ ಹೇಳಿದಂಥ ಐಕ್ಯರಂಗವೊಂದರ ಅವಶ್ಯಕತೆಯು ನಮ್ಮ ಸಾಮಾಜಿಕ ಪರಿವರ್ತನೆಗೆ ಅಗತ್ಯವಿದೆ.

ಮರಾಠಾವಾಡಾ ವಿಶ್ವವಿದ್ಯಾಲಯಕ್ಕೆ ಅಂಬೇಡ್ಕರ್ ಅವರ ಹೆಸರನ್ನಿಡುವ ನಿಲುವಳಿಯನ್ನು ಮಹಾರಾಷ್ಟ್ರ ವಿಧಾನ ಸಭೆಯು 1979ರಲ್ಲಿ ಅವಿರೋಧವಾಗಿ ಸ್ವೀಕರಿಸಿತು. ಇದನ್ನು ವಿರೋಧಿಸಿ ಭಾರೀ ಪ್ರಮಾಣದ ಜಾತಿ ಗಲಭೆಗಳು ನಡೆದವು. ಈ

ಸಂದರ್ಭದಿಂದಾಗಿ ಅಸ್ತಿತ್ವಕ್ಕೆ ಬಂದ ಚಳವಳಿಯು ಸೆಪ್ಟೆಂಬರ್ 1982ರವರೆಗೂ ನಡೆಯಿತು. ಆಧುನಿಕ ಭಾರತದ ಅತಿ ಭಾರೀ ಪ್ರಮಾಣದ ಚಳವಳಿಯಿದಾಗಿತ್ತು. ಪ್ರಾರಂಭದಲ್ಲಿ ಇದು ರಾಜಕೀಯ ಪಕ್ಷಗಳ ಬಗ್ಗೆ, ವಿಶ್ವಾಸ ಕಳೆದುಕೊಂಡ ದಲಿತ-ದಲಿತೇತರ ಅ ಸಂಸದೀಯ ಸಂಸ್ಥೆಗಳ ಐಕ್ಯರಂಗವಾಗಿತ್ತು. ಬಾಬಾ ಆಡಾವ್ ಈ ಚಳವಳಿಯ ಪ್ರಮುಖ ನೇತಾರರಾಗಿದ್ದರೂ ಜಾತಿ ಸಮಸ್ಯೆಯ ಮೇಲೆ 1978ರಲ್ಲಿ ಮಾರ್ಕ್ಸ್‌ವಾದಿ ಪಕ್ಷದಿಂದ ಹೊರಬಂದು ಸ್ಥಾಪಿಸಿದ ಸತ್ಯಶೋಧಕ ಕಮ್ಯುನಿಸ್ಟ್ ಪಕ್ಷವನ್ನು ಐಕ್ಯರಂಗಕ್ಕೆ ಸೇರಿಸಿಕೊಳ್ಳಲಾಯಿತು. ದಲಿತ ಪ್ಯಾಂಥರ್ ಬಿಟ್ಟರೆ ಅತಿ ಮುಖ್ಯ ಸ್ಥಾನ ಇದಕ್ಕೆ ದೊರೆಯಿತು. ಈ ಸಂಘಟನೆಯು ಕಾಂಗ್ರೆಸ್ ಮತ್ತು ಬಿ.ಜೆ.ಪಿ.ಗಳು ತಮ್ಮ ಶತ್ರುಗಳೆಂದು ಘೋಷಿಸಿದ ಮೊದಲ ಜಾತಿವಿರೋಧಿ ಐಕ್ಯರಂಗವಾಗಿತ್ತು. ಐಕ್ಯರಂಗದ ವಿವಿಧ ವಿಭಾಗಗಳಿಗೆ ಸತ್ಯಶೋಧಕ ಕಮ್ಯುನಿಸ್ಟ್ ಪಕ್ಷವು ಎಲ್ಲ ಎಡ ಮತ್ತು ಪ್ರಜಾಪ್ರಭುತ್ವವಾದಿ ಪಕ್ಷಗಳನ್ನು ಜೊತೆಗೂಡುವಂತೆ ಮನವೊಲಿಸಿತು. ಕಮ್ಯುನಿಸ್ಟ್ ಪಕ್ಷ ಮತ್ತು ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷಗಳು 1979 ಮತ್ತು 1982ರ ಸತ್ಯಾಗ್ರಹಗಳಲ್ಲಿ ಬಾಗವಹಿಸಿದರೂ ಅವುಗಳ ಪಾತ್ರ ಸಾಂಕೇತಿಕವಾಗುಳಿಯಿತು. ಈ ನಾಮಾಂತರ ಚಳವಳಿಯು ಜಾತಿಯ ಬೇರುಗಳನ್ನು ಬಲಗೊಳಿಸುವ ಚಳವಳಿಯೆಂದು ನಕ್ಸಲ್‌ವಾದಿ ಗುಂಪೊಂದು ಬರೆದರೆ, ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷವು, ಈ ಗಲಭೆಗಳಿಗೆ ದಲಿತರೇ ಕಾರಣರೆಂದು (ಸೋಷಿಯಲ್ ಸೈಂಟಿಸ್ಟ್, ಮೇ 79; ದಿಪಂಕರ ಗುಪ್ತ) ಆಪಾದಿಸಿತು! ಕಮ್ಯುನಿಸ್ಟ್ ಪಕ್ಷಗಳ ನೀತಿ ಮತ್ತು ಆಚರಣೆಯಲ್ಲಿನ ಕಂದಕದಿಂದಾಗಿ ಬಿಕ್ಕಟ್ಟು ತಲೆದೋರಿತು. ಸಿ.ಪಿ.ಎಂ.ನ ಮಹಾರಾಷ್ಟ್ರ ರಾಜ್ಯ ಸಮಿತಿಯು ಗಲಭೆಗಳು ಪ್ರಾರಂಭವಾದ ಕೂಡಲೇ ಶರದ್‌ಪವಾರ್ ಅವರ ಪಿ.ಡಿ.ಎಫ್. ಸರ್ಕಾರವನ್ನು ಪದಚ್ಯುತಿಗೊಳಿಸುವ ಉದ್ದೇಶ ಹೊಂದಿದ ಕೆಲವು ಶಕ್ತಿಗಳು ಈ ಚಳವಳಿಯನ್ನು ಪ್ರಚೋದಿಸುತ್ತಿವೆ ಎನ್ನುವ ನಿಲುವಳಿಯನ್ನು ಸ್ವೀಕರಿಸಿತು. ಸಿ.ಪಿ.ಐ. ಮತ್ತು ಸಿ.ಪಿ.ಎಂ.ಗಳೆರಡೂ ಈ ನಾಮಾಂತರ ಪ್ರಕರಣವನ್ನು ಅಖಿಲ ಭಾರತ ಮಟ್ಟದ ಸಮಸ್ಯೆಯಾಗಿ ನೋಡಬೇಕೆಂದು ಪ್ರಾರಂಭದಲ್ಲಿ ಸೂಚಿಸಿದರೂ ಕ್ರಮೇಣ ಯಾವ ಪ್ರೋತ್ಸಾಹವನ್ನೂ ನೀಡಲಿಲ್ಲ.

ನಾಮಾಂತರ ಚಳವಳಿಯ ಹಿಂದೆಯೇ ಮತ್ತೊಂದು ಜಾತಿ ವಿರೋಧಿ ಚಳವಳಿ-ಮಂಡಲ್ ವರದಿಯ ಅನುಷ್ಠಾನ ಚಳವಳಿ ಪ್ರಾರಂಭವಾಯ್ತು. ಈ ಚಳವಳಿಯನ್ನು ಹಿಂದುಳಿದ ಜಾತಿ, ಪರಿಶಿಷ್ಟ ಜಾತಿ/ಪಂಗಡ ಮತ್ತು ಅಲ್ಪ ಸಂಖ್ಯಾತರ ರಾಷ್ಟ್ರೀಯ ಸಂಘಟನೆಯು ರಾಷ್ಟ್ರಮಟ್ಟದಲ್ಲೂ "ರಾಖೀವ್ ಜಾಗಾ ಸಮರ್ಥನ್ ಸಮಿತಿ"ಯು ಮಹಾರಾಷ್ಟ್ರದಲ್ಲೂ ಹಮ್ಮಿಕೊಂಡವು. ರಾಷ್ಟ್ರಮಟ್ಟದ ಸಮಿತಿಯು ಸಿ.ಪಿ.ಐ. ಮತ್ತು ಸಿ.ಪಿ.ಎಂ.ಗಳ ಮೇಲೆ ಒತ್ತಡ ತರಲು ವಿಫಲವಾದ್ದರಿಂದ ಈ ಎರಡು ಪಕ್ಷಗಳು ಈ ಚಳವಳಿಯಲ್ಲಿ ಭಾಗವಹಿಸಲಿಲ್ಲ. ಆದರೆ ಒತ್ತಡದ ಪರಿಣಾಮವಾಗಿ ಮಹಾರಾಷ್ಟ್ರ ರಾಜ್ಯಸಮಿತಿಯಲ್ಲಿ ಇವು ಭಾಗವಹಿಸಿದವು. ಆದರೆ ಬಿ.ಜೆ.ಪಿ.ಯು ಈ ಎರಡು ಸಮಿತಿಗಳಲ್ಲೂ ಸೇರಿಕೊಂಡಿದ್ದೂ ಅಲ್ಲದೆ 1984ರ ಗುಜರಾತ್ ಮೀಸಲಾತಿ ವಿರೋಧ ಚಳವಳಿಯ ಮುಂಚೂಣಿಯಲ್ಲೂ ಮೀಸಲಾತಿಗಾಗಿ ಅಸ್ತಿತ್ವಕ್ಕೆ ಬಂದ ರಾಷ್ಟ್ರ ಮತ್ತು ರಾಜ್ಯ ಸಮಿತಿಗಳಲ್ಲೂ ಸೇರಿಕೊಂಡಿತು. ದೀನದಯಾಳ ಉಪಾಧ್ಯಾಯರ ಸಿದ್ಧಾಂತದ ಪುನರುಜ್ಜೀವನ ಮತ್ತು ವಾಜಪೇಯಿ ಬದಲಿಗೆ ಅಡ್ವಾಣಿಯವರು ಅಧ್ಯಕ್ಷ ಸ್ಥಾನಕ್ಕೆ ಆಯ್ಕೆಯಾದ್ದರಿಂದ ಅದು ಸಂಪೂರ್ಣವಾಗಿ ತನ್ನ ಜನಸಂಘದ ಸಿದ್ಧಾಂತಕ್ಕೆ ಹಿನ್ನಡೆಯಿತು. ಸಿ.ಪಿ.ಐ. ಮತ್ತು ಸಿ.ಪಿ.ಎಂ.ಗಳು ಎಲ್ಲ ಕೋಮುಗಳ ಹಿಂದುಳಿದ ಪಂಗಡಗಳನ್ನು ಒಗ್ಗೂಡಿಸಿ ಮಂಡಲ್ ಶಿಫಾರಸುಗಳನ್ನು ಕಾರ್ಯಗತಗೊಳಿಸಲು ಸಶಕ್ತ ಚಳವಳಿಯೊಂದನ್ನು ರೂಪಿಸುವ ಪ್ರಯತ್ನ ಮಾಡಿದರೆ ಮಾತ್ರ ಹಿಂದೂ ಮತಾಂಧ ಪಕ್ಷವಾದ ಬಿ.ಜೆ.ಪಿ.ಯನ್ನು ಬಯಲಿಗೆಳೆಯುವುದು ಸಾಧ್ಯವಾದೀತು. ಈ ನಿಲುವನ್ನು ಸ್ವೀಕರಿಸುವುದರಿಂದ ತಮ್ಮ ಸಿದ್ಧಾಂತ ಮತ್ತು ವರ್ಗ ಹೋರಾಟದ ನೀತಿಯು ಕುಂಠಿತವಾಗಬಹುದೆಂಬ ಹಿಂಜರಿಕೆಯಿಂದ ಅವು ತಮ್ಮತಮ್ಮಲ್ಲೇ ವಿರಸ ಕಟ್ಟಿಕೊಂಡು ಬಳಲುತ್ತಿವೆ.

> **ಮರಾಠವಾಡಾ ವಿಶ್ವವಿದ್ಯಾಲಯಕ್ಕೆ ಅಂಬೇಡ್ಕರ್ ಹೆಸರಿಡಬೇಕೆಂಬ ದಲಿತರ ಚಳವಳಿಯನ್ನು "ಜಾತೀಯ ಬೇರುಗಳನ್ನು ಬಲಗೊಳಿಸುವ ಚಳವಳಿ" ಎಂದು ನಕ್ಸಲ್‌ವಾದಿ ಗುಂಪೊಂದು ಬರೆಯಿತು. (ಗಲಭೆಗಳಿಗೆ ದಲಿತರೇ ಕಾರಣ ಎಂದು ಮಾರ್ಕ್ಸ್ ವಾದಿ ಕಮ್ಯೂನಿಸ್ಟ್ ಪಕ್ಷ ಆರೋಪಿಸಿತು)**

ಸತ್ಯಶೋಧಕ ಕಮ್ಯುನಿಸ್ಟ್ ಪಾರ್ಟಿಯ ಅಧ್ವರ್ಯುಗಳು ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದಲ್ಲಿದ್ದಾಗಲೇ ಪಕ್ಷವು ಹಿಂದೂ ಸ್ತ್ರೀಯರಿಗೆ ತೌರುಮನೆಯ ಆಸ್ತಿಯಲ್ಲಿ ಸಮಪಾಲು ಪಡೆಯುವ ಹಕ್ಕನ್ನು ಆದಿವಾಸಿ ಸ್ತ್ರೀಯರಿಗೂ ದೊರಕಿಸುವ, ಬಹುಪತ್ನಿತ್ವದ ನಿಷೇಧಕ್ಕೂ, ವಿಚ್ಛೇದನ ಪಡೆದ ಸ್ತ್ರೀಗೆ ಜೀವನಾಂಶದ ಹಕ್ಕನ್ನೂ, ಆದಿವಾಸಿ ಸ್ತ್ರೀ ಇಂದಿಗೂ ಶೋಷಿಸಲ್ಪಡುತ್ತಿರುವ ಪಿತೃಪ್ರಧಾನ ಸಂಪ್ರದಾಯ ನಿಯಮಗಳ ರದ್ದತಿಗೆ ಅವಕಾಶ ನೀಡುವ ಹಿಂದೂ ಕೋಡ್ ನಿಯಮದ ಪರಿಧಿಯಲ್ಲಿ ಆದಿವಾಸಿ ಸ್ತ್ರೀಯರನ್ನು ಸೇರಿಸುವ ಬೇಡಿಕೆಗಳ ಆಧಾರದ ಮೇಲೆ ಅಖಿಲ ಭಾರತ ಮಟ್ಟದ ಆದಿವಾಸೀ ಸ್ತ್ರೀ ಚಳವಳಿಯನ್ನು ರೂಪಿಸಬೇಕೆಂದು ಸೂಚಿಸಿದ್ದರು. ಹಿಂದೂ ಕೋಡ್ ಆಕ್ಟಿನ ಪರಿಧಿಗೆ ಆದಿವಾಸಿ ಸ್ತ್ರೀಯರನ್ನು ಒಳಪಡಿಸುವುದರಿಂದ ಮಿಕ್ಕ ಸ್ತ್ರೀಯರಿಗಿಂತ ಹೆಚ್ಚು ಸ್ವಾತಂತ್ರ್ಯ ಪಡೆದಿರುವ ಇವರು ತೊಂದರೆಗೊಳಗಾಗುತ್ತಾರೆ ಎನ್ನುವ ವಾದವನ್ನು ಮುಂದೆ ಮಾಡಿಕೊಂಡು ಸಿ.ಪಿ.ಎಂ. ಮಹಾರಾಷ್ಟ್ರ ಸಮಿತಿಯು ಈ ಸೂಚನೆಯನ್ನು ವಿರೋಧಿಸಿತು. ಹಿಂದೂ ಕೋಡ್ ಬಿಲ್ ಅಂಬೇಡ್ಕರ್ ಅವರ ಕಾಣಿಕೆ ಎಂಬುದು ಗೊತ್ತಿರುವ ವಿಷಯ. ಆ ಕಾಲಕ್ಕೆ ಕಾಂಗ್ರೆಸ್‌ನ ಹೊರಗೂ ಒಳಗೂ ಇದ್ದ ಹಿಂದೂ ಸಂರಕ್ಷಕ ಮುಂದಾಳುಗಳ ವಿರೋಧದಿಂದಾಗಿ ಅದನ್ನು ಪ್ರಾರಂಭದಲ್ಲಿ ಕೈಬಿಟ್ಟರೂ ಮಂತ್ರಿ ಪದವಿಗೆ ಅಂಬೇಡ್ಕರ್‌ರ ರಾಜೀನಾಮೆಯಿಂದಾಗಿ ಸ್ವಲ್ಪ ಬದಲಾವಣೆಗಳೊಂದಿಗೆ, ಮೂಲ ನಿಯಮಗಳ ಆಧಾರದ ಮೇಲೆ, ರಚಿತವಾದ ಕಾನೂನುಗಳನ್ನು ಜಾರಿಗೊಳಿಸಲಾಯ್ತು. ರಾಷ್ಟ್ರೀಯ ಮಟ್ಟದ ಆದಿವಾಸಿ ಸ್ತ್ರೀ ಚಳವಳಿಯು ಬಹುಶಃ ಎಲ್ಲ ಕೋಮುಗಳ ಸ್ತ್ರೀಯರ ಏಕರೂಪ ಕಾಯ್ದೆಗಾಗಿ ರಾಷ್ಟ್ರೀಯ ಚಳವಳಿಯಾಗಿ ಬೆಳೆಯಬಹುದಿತ್ತು.

ಕಳೆದ ವರ್ಷ ಕೇರಳದ 'ಸುಲೇಖಾ ಭೀ' ಹಗರಣದಿಂದಾಗಿ ಮಾರ್ಕ್ಸ್‌ವಾದಿ ಪಕ್ಷದ ಪ್ರಧಾನ ಕಾರ್ಯದರ್ಶಿ ಇ.ಎಂ.ಎಸ್. ಮುಸ್ಲಿಂಲೀಗ್ ಜೊತೆಗಿನ ಸಖ್ಯದ ಐಕ್ಯರಂಗವು ಅಪಾಯಕಾರಿ ಎಂಬುದನ್ನು ಮನಗಂಡರು. ಶಾಬಾನು ಪ್ರಕರಣವು ಧಾರ್ಮಿಕ ಹಾಗೂ ಲೈಂಗಿಕವಾಗಿ ಮುಸ್ಲಿಂ ಮಹಿಳೆಯ ಶೋಷಣೆಯ ಬಗೆಗಿನ ವ್ಯಾಖ್ಯಾನವಾಗಿತ್ತು. ಆದರೆ ಜಾತಿ ವ್ಯವಸ್ಥೆಯ ಬಲಿಪಶುಗಳಾಗಿರುವ ದಲಿತ/ಆದಿವಾಸಿ ಸ್ತ್ರೀಯರನ್ನು ಸಂಘಟಿಸುವಂತೆ ಮುಸ್ಲಿಂ ಸ್ತ್ರೀಯರನ್ನು ಸಮೂಹ ಚಳವಳಿಗೆ ಸಂಘಟಿಸುವುದು ಅಸಾಧ್ಯ.

ಭಾರತದ ವಿವಿಧ ಧಾರ್ಮಿಕ ಪಂಗಡಗಳೆಲ್ಲವುಗಳಲ್ಲೂ ಕಂಡುಬರುವ ಜಾತಿ ಪದ್ಧತಿಯ ವಿರುದ್ಧ ಹೋರಾಡಲು ಹಿಂಜರಿದುದರಿಂದ ಕಮ್ಯುನಿಸ್ಟ್ ಪಕ್ಷಗಳು ಈ ದೇಶದ ಕೋಮುವಾದದ ವಿರುದ್ಧ ವಿಮೋಚನಾ ಚಳವಳಿಯನ್ನು ರೂಪಿಸಲು ಸಾಧ್ಯವಾಗಲಿಲ್ಲ.

ಕಮ್ಯುನಿಸ್ಟ್ ಚಳವಳಿಯ ಈ ವಿಫಲತೆಗೆ ವಿರುದ್ಧವಾಗಿ ಕಾಂಗ್ರೆಸ್ ಪಕ್ಷವು ದೇಶದ ವಿವಿಧ ಧಾರ್ಮಿಕ ಪಂಗಡಗಳಲ್ಲಿನ ಕೋಮುವಾದಿ ಶಕ್ತಿಗಳನ್ನು ಪ್ರೋತ್ಸಾಹಿಸಿತು. ಇತ್ತೀಚೆಗೆ ಮುಸ್ಲಿಂ ಮಹಿಳೆಯ ವಿವಾಹ ವಿಚ್ಛೇದನ ಕುರಿತ ಕಾಯ್ದೆಯನ್ನು ಸಂಸತ್ತಿನ ಮೂಲಕ ಜಾರಿಗೊಳಿಸಿದ ಕಾಂಗ್ರೆಸ್, ಪ್ರತಿಗಾಮಿ ಹಾಗೂ ಪ್ರತ್ಯೇಕತಾವಾದಿ ಶಕ್ತಿಗಳನ್ನು ಬಹಿರಂಗವಾಗಿ ಪ್ರೋತ್ಸಾಹಿಸಲು ಹಿಂಜರಿಯಲಿಲ್ಲ. ಈ ದೇಶದ ಜಾತಿ, ವರ್ಗ ಹಾಗೂ ಲೈಂಗಿಕ ವ್ಯವಸ್ಥೆಗಳಲ್ಲಿ ತಲೆದೋರಿಗುವ ಬಿಕ್ಕಟ್ಟನ್ನು ಕಾಂಗ್ರೆಸ್ ಪಕ್ಷವು ಪರಿಹರಿಸುವ ವೈಖರಿ ಇದಾಗಿದೆ.

## ಭಾರತೀಯ ಕಮ್ಯುನಿಸ್ಟ್ ಚಳವಳಿಯ ಕ್ರಾಂತಿಕಾರಿ ಬೆಳವಣಿಗೆ

ಪ್ರೊ. ರಾವ್‌ಸಾಹೇಬ್ ಕಸಬೆ ಅವರ ಪುಸ್ತಕ 'ಅಂಬೇಡ್ಕರ್ ಮತ್ತು ಮಾರ್ಕ್ಸ್' (1985) ಪ್ರಕಟವಾದ ಮೇಲೆ ಜಾತಿ ವರ್ಗಗಳ ಒಕ್ಕೂಟದ ಅವಶ್ಯಕತೆಯ ಸೈದ್ಧಾಂತಿಕ ಹಾಗೂ ಉಪಯುಕ್ತ ಸಮೀಕರಣದ ನೂತನ ಯುಗದ ಸಾಧ್ಯತೆಯು ಕಾಣತೊಡಗಿತು. ಕಸಬೆ ಈ ಸಮೀಕರಣದ ಮೂಲಕ ಹೊಸ ಸಿದ್ಧಾಂತವನ್ನು ರೂಪಿಸಲು ಕರೆಯಿತ್ತರು.

ಸತ್ಯಶೋಧಕ ಕಮ್ಯುನಿಸ್ಟ್ ಪಕ್ಷವು ಮಾರ್ಕ್ಸ್-ಫುಲೆ-ಅಂಬೇಡ್ಕರ್ ವಾದಗಳ ಸಮೀಕೃತ ನೂತನ ಸಿದ್ಧಾಂತವನ್ನು ಆಧರಿಸಿದ ಪಕ್ಷವಾಗಿದೆ. ಮೂರು ಸಿದ್ಧಾಂತಗಳಲ್ಲಿನ ಎಲ್ಲ ಅಂಶಗಳ ಸಾರ ಸಂಗ್ರಹ ರೂಪದ ಹೊಸ ಸಿದ್ಧಾಂತ ಇದಾಗಿರದೆ ಆಯ್ದ ಅಂಶಗಳ ಸಮೀಕರಣವಾಗಿದೆ. ಈ ನೂತನ ಸಿದ್ಧಾಂತವು ವೈರುಧ್ಯದ ನಿಯಮಗಳಿಗೆ ಹಾಗೂ ಗತಿ ತಾರ್ಕಿಕ

→ 11

# ಬೌದ್ಧಧರ್ಮ ಅಂಬೇಡ್ಕರ್



ಅಂಬೇಡ್ಕರ್ ಪ್ರಜಾಪ್ರಭುತ್ವವಾದಿ ಸಮಾಜವಾದಿಯಾಗಿದ್ದುದರಿಂದ, ಮಾರ್ಕಿಸ್ಟ ಸಮತಾವಾದದಲ್ಲಿ ಸಂಕ್ರಮಣಶೀಲವಾಗಿ ಅಸ್ತಿತ್ವಕ್ಕೆ ಬರುವ ಕಾರ್ಮಿಕ ವರ್ಗದ ನಿರಂಕುಶಾಧಿಕಾರದ ವಿರುದ್ಧ ಸೆಟೆದು ನಿಂತರು. ಅಂಬೇಡ್ಕರ್‌ರವರ ಪ್ರಕಾರ ಬೌದ್ಧಧರ್ಮವು ವಿಚಾರಶೀಲ ತತ್ವ, ಆದರ್ಶಪ್ರಾಯವಾದ ಸಾಮಾಜಿಕನೈತಿಕತೆ, ಜಾತ್ಯಾತೀತ ಸಮಾಜ ಮತ್ತು ಸಮುದಾಯ ವ್ಯವಸ್ಥೆಗಳನ್ನು ವ್ಯಕ್ತಿಗೆ ನೀಡುವುದು. ಮಹಾನ್ ದಾರ್ಶನಿಕ ಗೌತಮ ಬುದ್ಧನಲ್ಲಿ ಮತ್ತು ಆತನು ಪ್ರತಿಪಾದಿಸಿದ ಬೌದ್ಧದರ್ಮದಲ್ಲಿ ಅಂಬೇಡ್ಕರ್ ಭಾರತದ ಸಾಮಾಜಿಕ ಪಾಪಗಳಿಗೆ ಅನ್ಯಾಯಗಳಿಗೆಪರಿಹಾರಕಂಡುಕೊಂಡರು. ಅಂಬೇಡ್ಕರ್ ತಮ್ಮ ಬದುಕಿನಲ್ಲಿ ಬೌದ್ಧಧರ್ಮದಿಂದ ಹೊಸ ಬೆಳಕು ಕಂಡರು ಅಂಬೇಡ್ಕರ್ ದೇಶದ ದೀನದಲಿತರಿಗೆ ದುರ್ಬಲರಿಗೆ ಬೌದ್ಧಧರ್ಮಕ್ಕೆ ಪರಿವರ್ತನೆಯಾಗುವಂತೆ ಕರೆ ನೀಡಿದರು. ಅಂತಹ ಧರ್ಮ ಪರಿವರ್ತನಾ ಆಂದೋಲನವನ್ನು ಮುನ್ನಡೆಸಿದರು. ಹೊಸ ನೀತಿ ಸಂಹಿತೆ, ಹೊಸ ಸಾಮಾಜಿಕ ಪ್ರಜ್ಞೆ, ಸಾಮಾಜಿಕ ಐಕ್ಯತೆಯನ್ನು ಭೌದ್ಧ ಧರ್ಮ ಹಿಂದುಳಿದವರಲ್ಲಿ ದಲಿತರು,ಗಿರಿಜನರಲ್ಲಿ. ಶೋಷಿತರಲ್ಲಿ-ಉಂಟು ಮಾಡಲಿ ಎಂಬುದೇ ಅಂಬೇಡ್ಕರ್‌ರವರ ಜೀವನದ ಮಹತ್ವಾಕಾಂಕ್ಷೆಯಾಗಿತ್ತು.

ಅಂಬೇಡ್ಕರ್ ನಿಧನರಾಗುವುದಕ್ಕೆ ಹದಿನೈದು ದಿನಗಳ ಮುಂಚೆ ಕಠ್ಮಂಡುವಿನಲ್ಲಿ ಬುದ್ಧ ಮತ್ತು ಕಾರ್ಲ್ ಮಾರ್ಕ್ಸ್ ಬಗೆಗೆ ಉಪನ್ಯಾಸ ನೀಡಿದರು. ಈ ಉಪನ್ಯಾಸದ ಬಗೆಗೆ ಮೊದಲೇ ಗೊತ್ತುಪಡಿಸಿರಲಿಲ್ಲ. ಬೇರೆ ಯಾವುದೋ ಕೆಲಸದ ಮೇಲೆ ಕಠ್ಮಂಡುವಿನಲ್ಲಿದ್ದ ಅಂಬೇಡ್ಕರ್‌ರವರನ್ನು ಉಪನ್ಯಾಸ ನೀಡುವಂತೆ ಕೋರಿಕೊಳ್ಳಲಾಯಿತು. ಆ ಉಪನ್ಯಾಸ ಅಂಬೇಡ್ಕರರ ಬೌದ್ಧಿಕ ಉತ್ತುಂಗತೆಯ ಇನ್ನೊಂದು ಮುಖದ ದರ್ಶನವಾಗಿತ್ತು. ಬುದ್ಧ ಮತ್ತು ಕಾರ್ಲ್ ಮಾರ್ಕ್ಸ್ ತಾತ್ವಿಕವಾಗಿ ವಿರುದ್ಧ ದಿಕ್ಕುಗಳಲ್ಲಿ ಅಥವ ಧ್ರುವಗಳಲ್ಲಿ ನಿಲ್ಲುವರೇ? ಎಂಬ ಪ್ರಶ್ನೆಯನ್ನು ತಮ್ಮ ಉಪನ್ಯಾಸದಲ್ಲಿ ಅಂಬೇಡ್ಕರ್ ಎತ್ತುತ್ತಾರೆ. ಈ ಪ್ರಶ್ನೆ ಅತ್ಯಂತ ಗಹನವಾದುದು ಎನಿಸುತ್ತದೆ. ಏಕೆಂದರೆ ಮಾರ್ಕ್ಸ್‌ನ ವೈಜ್ಞಾನಿಕ ಸಮಾಜವಾದ ಮತ್ತು ಗೌತಮ ಬುದ್ಧನು ಪ್ರತಿಪಾದಿಸಿದ ಧರ್ಮ–ಎರಡರ ನಡುವೆ ಸಾಮ್ಯವಿದೆಯೇ? ಇರುವುದಾದರೆ ಅಂತಹ ಸಾಮ್ಯದ ಸ್ವರೂಪವೇನು? ಎಂಬ ಹೊಸ ಪ್ರಶ್ನೆಗಳನ್ನು ಡಾ॥ಅಂಬೇಡ್ಕರ್ ಎತ್ತುತ್ತಾರೆ: ಈ ಬಗೆಯ ಪ್ರಶ್ನೆಗಳನ್ನು ಅಂಬೇಡ್ಕರ್ ಮೊತ್ತಮೊದಲ ಬಾರಿಗೆ ಕೇಳಿ ನೀಡಿದವರಾಗಿದ್ದಾರೆ. ಈ ಪ್ರಶ್ನೆಗಳಲ್ಲಾ ಮತ್ತು ಅವುಗಳಿಗೆ ಅಂಬೇಡ್ಕರ್ ನೀಡುವ ಉತ್ತರಗಳಲ್ಲಿ ವಿಚಾರ ಶೀಲತೆಯ ಹೊಸ ಮಿಂಚುಬಳ್ಳಿ ಇದೆ. ಹೀಗಾಗಿ ಅಂಬೇಡ್ಕರ್ ಮುಖ್ಯರಾಗುತ್ತಾರೆ.

ಅಂಬೇಡ್ಕರ್‌ರವರ ಪ್ರಕಾರ "ಸಮತಾವಾದವು ವಿಶ್ವದಲ್ಲಿ ಶೋಷಣೆಯಿದೆ ಎಂಬ ತತ್ವದೊಂದಿಗೆ ಆರಂಭಗೊಳ್ಳುತ್ತದೆ ಶ್ರೀಮಂತರು ಆಸ್ತಿಪಾಸ್ತಿಯನ್ನು ಹೊಂದಿರುವುದರಿಂದ ಬಡವರನ್ನು ಶೋಷಿಸುತಾರ್ರೆ:

**ಡಿಸೆಂಬರ್ ಆರು-ದಲಿತ ಚೈತನ್ಯದ ಪ್ರಾಣವೇ ಆಗಿದ್ದ ಡಾ॥ ಅಂಬೇಡ್ಕರರು ಮೃತರಾದ ದಿನ.**

**ಆ ನೆನಪಿನಲ್ಲಿ ಇತಿಹಾಸದ ಇನ್ನೊಬ್ಬ ಸಮತಾವಾದಿಯಾದ ಬುದ್ಧನ ಬಗ್ಗೆ ಅವರ ಭಾವನೆಗಳನ್ನು ಒಡೆಯರ್ ಡಿ. ಹೆಗ್ಗಡೆಯವರು. "ಬಿ.ಆರ್. ಅಂಬೇಡ್ಕರರ ಸಮಗ್ರ ಚಿಂತನೆ" ಪುಸ್ತಕದಿಂದ ಆಯ್ದು ಪ್ರಕಟಿಸುತ್ತಿದ್ದೇವೆ.**

ಶ್ರೀಮಂತರು ಶ್ರೀಸಾಮಾನ್ಯ ಬಹುಸಂಖ್ಯಾತರನ್ನು ಗುಲಾಮಗಿರಿಗಿಳಿಸುತ್ತಾರೆ; ಇಂತಹ ಗುಲಾಮಗಿರಿಯು ನೋವು. ದುಃಖ ಬಡತನಗಳಲ್ಲಿ ಪರ್ಯವಸಾನವಾಗುತ್ತದೆ" ಹೆಚ್ಚುವರಿ ಮೌಲ್ಯ ಆಧಿಕ್ಯದ ದುರ್ಬಳಕೆಯಿಂದುಂಟಾಗುವ ಖಾಸಗಿ ಆಸ್ತಿಯನ್ನು ರದ್ದುಪಡಿಸುವ ಮೂಲಕ ಈ ಸಮಸ್ಯೆಗೆ ಪರಿಹಾರ ಹುಡುಕಬಹುದಾಗಿದೆ ಎಂಬುದು ಕಾರ್ಲ್ ಮಾರ್ಕ್ಸ್ ನಿಲುವು. ಮಾರ್ಕ್ಸ್ ಪ್ರಕಾರ "ಸರ್ಕಾರವೊಂದೇ ಮಾಲೀಕತ್ವ ಅಥವಾ ಸ್ವಾಮ್ಯ ಹೊಂದಬಹುದಾಗಿದೆ. ಆದ್ದರಿಂದಲೇ ಕಾರ್ಮಿಕವರ್ಗದ ನಿರಂಕುಶಾಧಿಕಾರವಿರಬೇಕು". ಹೀಗೆ ಮಾರ್ಕ್ಸ್‌ನ ವಿಚಾರವನ್ನು ಸ್ಪಷ್ಟಪಡಿಸಿ ಅಂಬೇಡ್ಕರ್ ಮಾರ್ಕ್ಸ್ ವಿವೇಚಿಸುವ ಸಮಸ್ಯೆಗಳಿಗೆ ಬುದ್ಧನಲ್ಲಿ ಉತ್ತರಗಳನ್ನು ಹುಡುಕಲೆತ್ನಿಸುವುದು ವಿಶಿಷ್ಟವಾದುದಾಗಿದೆ. ಈದಿಸೆಯಲ್ಲಿ ಅಂಬೇಡ್ಕರ್ ಹೀಗೆಹೇಳುತ್ತಾರೆ. "'ವಿಶ್ವದಲ್ಲಿ ದುಃಖವಿದೆ' ಎಂದು ಬುದ್ಧ ಹೇಳಿದ್ದಾನೆ. ಬುದ್ಧನು 'ಶೋಷಣೆ' ಎಂಬ ಪದವನ್ನು ಬಳಸಲಿಲ್ಲ. ಆದರೆ ಆತನುತನ್ನ ಧರ್ಮವನ್ನು ದುಃಖ ಎಂಬ ಪರಿಭಾವನೆಯ ಅಧಾರದಲ್ಲಿ ರೂಪಿಸಿದನು: ದುಃಖ ಎಂಬ ಪರಿಭಾವನೆಯನ್ನು ಪುನರ್ಜನ್ಮ ಎಂದು ವಿಶ್ಲೇಷಿಸಲಾಗಿದೆ. ಆದರೆನಾನು ಈ ವಿಶ್ಲೇಷಣೆಯನ್ನು ಒಪ್ಪುವುದಿಲ್ಲ. ಏಕೆಂದರೆ ಬೌದ್ಧ ಧರ್ಮದ ಸಾಹಿತ್ಯದಲ್ಲಿ ಅನೇಕಾನೇಕ ಸಂದರ್ಭಗಳಲ್ಲಿ ಬುದ್ಧನು ದುಃಖ ಎಂಬ ಪರಿಭಾವನೆಯನ್ನು ಬಡತನ ಎಂಬಅರ್ಥದಲ್ಲಿ ಬಳಸಿದ್ದಾನೆಎಂದು ನನಗನ್ನಿಸುತ್ತದೆ"

ಅಂದರೆ ದುಃಖ ಎಂಬುದು ಬುದ್ಧನ ದೃಷ್ಟಿಯಲ್ಲಿ ಬಡತನ ಎಂಬುದಾಗಿತ್ತು ಎಂಬ ಅಂಬೇಡ್ಕರ್‌ರವರ ಪ್ರತಿಪಾದನೆಯನ್ನು ಒಪ್ಪಿಕೊಳ್ಳುವುದಾದರೆ ಅವರ ಪ್ರಕಾರ ಮಾರ್ಕ್ಸ್‌ನ ಪ್ರಶ್ನೆಗಳಿಗೆ ಬೌದ್ಧ ಧರ್ಮದಲ್ಲಿ ಉತ್ತರವಿದೆ. ಅಂಬೇಡ್ಕರ್ ಮುಂದುವರೆದು ಹೇಳುತ್ತಾರೆ: "ದೇವರು ಆತ್ಮ ಅಥವ ಬೇರೆ ಯಾವುದೇ ಅಲೌಕಿಕ ಶಕ್ತಿಗಳ ಆಧಾರದಲ್ಲಿ ತನ್ನ ಧರ್ಮವನ್ನು ಬುದ್ಧನು ಪ್ರತಿಪಾದಿಸಿಲ್ಲ. ಅವನು ಬದುಕಿನ ವಾಸ್ತವತೆಬಗೆಗೆ ವಿವರಿಸಿದನು. ಆದ್ದರಿಂದ ಮಾರ್ಕ್ಸಿಸಂ ಅಥವ ಸಮತಾವಾದದ ಬಗೆಗೆ ಸಂಭಂದಿಸಿದಂತೆ ಬುದ್ಧನಲ್ಲಿ ಆಗತ್ಯವಾದ ಪರಿಹಾರವಿದೆ. ಯಾವ ಬೌದ್ಧ ಸನ್ಯಾಸಿಯೂ ಖಾಸಗಿಆಸ್ತಿಯನ್ನು ಹೊಂದುವಂತಿಲ್ಲ ಎಂದು ಬುದ್ಧನು ಹೇಳಿದನು. ಸಂಘಜೀವನಕ್ಕೆ ಸಂಬಂಧಿಸಿದಂತೆ ಬೌದ್ಧಧರ್ಮದ ನಿಯಮಗಳು ಸಮತಾವಾದಿಗಳು ಮಾಡಬಹುದಾದ ಯಾವುದೇ ಕಾನೂನಿಗಿಂತಲೂ ಉಗ್ರವಾಗಿವೆ".

ಈ ವಿಶ್ಲೇಷಣೆಯ ಸಂದರ್ಭದಲ್ಲಿ ಅಂಬೇಡ್ಕರ್ ಕುತೂಹಲಕರವಾದ ಇನ್ನೊಂದು ಪ್ರಶ್ನೆಯನ್ನು ಎತ್ತುತ್ತಾರೆ: ಸಂಘಗಳನ್ನು ಸ್ಥಾಪಿಸುವಾಗ ಬುದ್ಧನಿಗಿದ್ದ ಉದ್ದೇಶಗಳೇನು? ಪರಿವ್ರಾಜಕರಿಗೆ ವಸತಿ ಮತ್ತು ಜೀವನಾಧಾರವನ್ನು ಪೂರೈಸಲು ಸಂಘಗಳನ್ನು ಗೌತಮ ಬುದ್ಧ ಸ್ಥಾಪಿಸಿದನು ಎಂದು ಅಂಬೇಡ್ಕರ್ ಹೇಳುತ್ತಾರೆ. ಮನೆಗಳನ್ನು ಕಳೆದುಕೊಂಡು ನಿರ್ಗತಿಕರಾದವರನ್ನು ಬುದ್ಧನು ಪಾರಿವ್ರಾಜಕರೆಂದು ಕರೆಯುತ್ತಾನೆ. ಬುದ್ಧನ ಕಾಲದಲ್ಲಿ ಆರ್ಯರು ಗುಡ್ಡಗಾಡು ಮಾದರಿಯ ಯುದ್ಧಗಳಲ್ಲಿ ಪದೇ ಪದೇ ತೊಡಗುತ್ತಿದ್ದುದರಿಂದ ಅವರ ಪೈಕಿ ಕೆಲವು ಗುಂಪುಗಳು ಶಾಶ್ವತ ನೆಲೆಯಿಲ್ಲದೆ ಅಲೆಮಾರಿ ಜನಾಂಗಗಳಾಗಿದ್ದವು ಎಂದೂ ಅಂಬೇಡ್ಕರ್ ಹೇಳುವರು. ಈ ಅಲೆಮಾರಿ ಜನಾಂಗಗಳನ್ನು ಸಮುದಾಯಗಳನ್ನಾಗಿ ಬುದ್ಧನು ಸಂಘಟಿಸಿ, ಅವುಗಳಿಗೆ ವಿನಯಪೀಟಿಕಾ ಕ್ರಮದ ನಿಯಮಗಳನ್ನು ಅನುಸರಿಸುವಂತೆ ಬುದ್ಧ ಕರೆಕೊಟ್ಟನು. ವಿನಯಪೀಟಿಕಾ ಎಂದರೆ ಜೀವನ ಕುರಿತಂತೆ ಬುದ್ಧನು ರೂಪಿಸಿದ ನೀತಿಸಂಹಿತೆಯಾಗಿದೆ. ಈ ನಿಯಮಗಳು ಸಮತಾವಾದದ ನಿಯಮಗಳ ಪ್ರತಿರೂಪವೇ ಆಗಿದ್ದವು. "ಕಾಲ, ಪರಿಸರ, ಮಾನವ ಸಮಾಜದ ಬೆಳವಣಿಗೆ ಸ್ವರೂಪ, ಸಾಮಾಜಿಕ ಸಂಬಂಧಗಳ ಸ್ವರೂಪವನ್ನಾಧರಿಸಿ, ಖಾಸಗಿ ಆಸ್ತಿಯನ್ನು ರದ್ದುಪಡಿಸುವ ವಿಚಾರದ ಬಗೆಗೆ ಪರಿಶೀಲಿಸಬೇಕು. ಆದರೆ ಯಾರಾದರೂ ಖಾಸಗಿ ಆಸ್ತಿಯನ್ನು ಸಂಪೂರ್ಣವಾಗಿ ರದ್ದುಪಡಿಸಬೇಕೆಂದಿದ್ದರೆ ಅದಕ್ಕೆ ಬೌದ್ಧ ಧರ್ಮವು ಅಡ್ಡಬರುವುದಿಲ್ಲ" ಎಂದೂ ಅಂಬೇಡ್ಕರ್ ಪ್ರತಿಪಾದಿಸಿದರು.

ಹಿಂಸೆಯಿಲ್ಲದ ಸಾಮಾಜಿಕ ಪರಿವರ್ತನೆಯನ್ನು ಅಸ್ತಿತ್ವಕ್ಕೆ ತರುವಂತಹ ಸಾಮಾಜಿಕ ಆಂದೋಳನವನ್ನು ರೂಪಿಸಬೇಕೆಂದು ಅಂಬೇಡ್ಕರ್ ತಮ್ಮ ಜೀವನಾವಧಿ ಪೂರ್ತಿ ಶ್ರಮಿಸಿದರು. ಕಾರ್ಮಿಕವರ್ಗದ ನಿರಂಕುಶಾಧಿಕಾರವನ್ನು ಸ್ಥಾಪಿಸಲು ಹಿಂಸೆಯನ್ನು ಸಾಧನವನ್ನಾಗಿ ಬಳಸಬೇಕಾಗುತ್ತದೆ. ಅಲ್ಲದೆ ಸಮತಾವಾದದ ಪ್ರಕಾರ ಹಿಂದಿನ ಶೋಷಕ ವರ್ಗವನ್ನು ನಾಗ

ರಿಕ ಸಮಾಜದಿಂದ ದೂರವಿರಿಸಲು ಮತ್ತೆ ಮತ್ತೆ ಹಿಂಸೆಯನ್ನೇ ಸಾಧನವಾಗಿ ಬಳಸಬೇಕಾಗುತ್ತದೆ. ಮಾರ್ಕ್ಸ್‌ನ ಈ ಬಗೆಯ ಹಿಂಸೆ ಪ್ರಧಾನ ಸಾಮಾಜಿಕ ಪರಿವರ್ತನಾ ಕ್ರಮವನ್ನು ಅಂಬೇಡ್ಕರರ ಮಾನವತಾವಾದಿ ಮನಸ್ಸು ಒಪ್ಪಿಕೊಳ್ಳಲಿಲ್ಲ. ಅಲ್ಲದೆ ಹಿಂದೂ ಧರ್ಮವನ್ನು ಅದರ ತಾರತಮ್ಯದಿಂದ ಕೂಡಿದ ಸಾಮಾಜಿಕ ವ್ಯವಸ್ಥೆಗಾಗಿ ಕಟುವಾಗಿ ಟೀಕಿಸಿದ ಅಂಬೇಡ್ಕರ್ ಅಸಾಧಾರಣವಾದ ಧಾರ್ಮಿಕ ಪ್ರಜ್ಞೆಯ ವ್ಯಕ್ತಿ ಸಹ ಆಗಿದ್ದರು. ಪ್ರಾಯಶಃ ತಮ್ಮ ಯೌವನ ಕಾಲದಿಂದಲೂ ಅಂಬೇಡ್ಕರ್ ಬೌದ್ಧ ಧರ್ಮದ ತತ್ತ್ವಗಳನ್ನು ಅಭ್ಯಸಿಸಿ ಆಕರ್ಷಿಸಲ್ಪಟ್ಟಿದ್ದರೆಂದು ತೋರುತ್ತದೆ. ಆದ್ದರಿಂದ ಅಂಬೇಡ್ಕರರ ಮಾನವತಾವಾದಿ ಮತ್ತುವಿಚಾರಶೀಲ ಮನಸ್ಸು ಅಹಿಂಸೆಯ ಮೂಲಕ ಮಾನವನ ಮನಃಪರಿವರ್ತನೆಯ ಮೂಲಕ ಸಾಮಾಜಿಕ ಬದಲಾವಣೆ ತರುವುದನ್ನು ಪ್ರತಿಪಾದಿಸಿತು. ಹಿಂಸೆ ಹಿಂಸೆಗೆ ಜನ್ಮ ಕೊಡುತ್ತದೆ: ಹಿಂಸೆ ಮೂಲಕ ಶೋಷಕರನ್ನು ತಾತ್ಕಾಲಿಕವಾಗಿ ನಿವಾರಿಸಬಹುದಾದರೂ ಅದೊಂದು ದೂರದರ್ಶಿತ್ವವಿಲ್ಲದ ಕ್ರಮವಾಗುತ್ತದೆ. ಏಕೆಂದರೆ ಒಂದು ವೇಳೆ ನಿರಂಕುಶಾಧಿಕಾರವು ಅಂತ್ಯಗೊಂಡರೂ ಅದಕ್ಕೆ ಪರ್ಯಾಯವಾಗಿ ಯಾವ ಬಗೆಯ ಸರ್ಕಾರ ಅಸ್ತಿತ್ವಕ್ಕೆ ಬರುತ್ತದೆ ಎಂದು ಹೇಳಲಾಗುವುದಿಲ್ಲ. ಅಂತರ್ಗತವಾದ ಹಿಂಸೆಯು ನಂತರ ಒಮ್ಮೆಲೇ ವಿನಾಶ ಮತ್ತು ಅನಾಯಕತ್ವದತ್ತ ಸಮಾಜವನ್ನು ಒಯ್ಯುವ ಅಪಾಯವಿದೆ. ಆದ್ದರಿಂದ ಸಾಮಾಜಿಕ ಬದಲಾವಣೆಗಾಗಿ ಅಂಬೇಡ್ಕರ್ ಪ್ರಜಾಪ್ರಭುತ್ವವಾದಿ ರೀತಿಯಲ್ಲಿ ಅಂತಃಕರಣ ಪರಿವರ್ತನೆಯನ್ನು ಪ್ರತಿಪಾದಿಸಿದರು. ಈ ಬಗೆಯಲ್ಲಿಯೇ ಸಾಮಾಜಿಕ ಕ್ರಾಂತಿಯನ್ನು ನಿರಂತರವಾಗಿಸಬಹುದಾಗಿದೆ. ಸಾಮಾಜಿಕ ಪರಿವರ್ತನೆಗಾಗಿ ಬಹುಸಂಖ್ಯಾಕರ ಸ್ವೀಕಾರವನ್ನೇ ಮುಖ್ಯವಾಗಿ ಅವಲಂಬಿಸುವುದು ಸೂಕ್ತವಲ್ಲ ಎಂದೂ ಅಂಬೇಡ್ಕರ್ ವಾದಿಸಿದರು. ಸಾಮಾಜಿಕ ಪರಿವರ್ತನೆಗಾಗಿ ಬೌದ್ಧ ಧರ್ಮದ ಸಾಮಾಜಿಕ ನಡವಳಿಕೆ ಸೂತ್ರವನ್ನು (Principle of Social Conduct) ಮೆಚ್ಚಿ ಸ್ವೀಕರಿಸಿದರು. ಬೌದ್ಧ ಧರ್ಮವು ಮನುಷ್ಯನನ್ನು ಪೂರ್ಣವಾಗಿ ಸಾಮಾಜೀಕರಣಕ್ಕೆ ಒಳಪಡಿಸುತುತ್ತದೆ; ಆಗ ಸೈನಿಕರ ಅಥವಾ ಪೋಲೀಸರ ಅಗತ್ಯವಿರುವುದಿಲ್ಲ! ಬೌದ್ಧ ಧರ್ಮ ಪ್ರತಿಪಾದಿಸಿದ ವ್ಯವಸ್ಥೆಯು ಪ್ರಜಾಸತ್ತಾತ್ಮಕ ವ್ಯವಸ್ಥೆಯಾಗಿದೆ. ಸಮಗ್ರ ಸಮಾನತೆಯಿರುವ ಪ್ರಜಾಪ್ರಭುತ್ವವನ್ನು ಎಂದಿಗೂ ನಾಶಪಡಿಸಲಾಗದು ಎಂದು ಅಂಬೇಡ್ಕರ್ ನಂಬಿದ್ದರು. ಈ ಕಾರಣದಿಂದಲೇ ತಮ್ಮ ಜೀವನದ ಸಂಧ್ಯಾಕಾಲಕ್ಕೆ ಅಂಬೇಡ್ಕರ್ ಬೌದ್ಧ ಧರ್ಮಕ್ಕೆ ಪರಿವರ್ತನೆಯಾದರು. ಬೌದ್ಧ ಧರ್ಮ ಅಂಬೇಡ್ಕರ್ ದೃಷ್ಟಿಯಲ್ಲಿ ಮಹಾನ್ ಮಾನವೀಕರಣದ ವ್ಯವಸ್ಥೆಯಾಗಿ ತೋರಿತು. ಹೀಗೆ ಅಂಬೇಡ್ಕರ್ ಭಾರತದ ದೀನ ದಲಿತರ ಪರವಾಗಿ ಮಾನವೀಯ ಹಕ್ಕುಗಳಿಗಾಗಿ ಹೋರಾಟ ನಡೆಸಿದರು. ದೀನ ದಲಿತರ ಅಪರೂಪದ ನಾಯಕನೆಂಬ ಹೆಗ್ಗಳಿಕೆಗೂ ಪಾತ್ರರಾದರು. ●

---

## ಕಂಡದ್ದು ಕಂಡಂತೆ

# ನಡೆಯಬಾರದಾಗಿದ್ದ ಒಂದು ಘಟನೆ

ನನ್ನ ಹುಟ್ಟೂರು ಬಿ. ನಾಗಸಂದ್ರ. ಇದು ಆಕಾಶದಲ್ಲಿ ಹಾರಾಡುವ, ಯುದ್ಧಗಳಲ್ಲಿ ಬಾಂಬ್ ಹಾಕುವ ವಿಮಾನಗಳನ್ನು ತಯಾರಿಸುವ ಬೆಂಗಳೂರಿನ ಕಾರ್ಖಾನೆಯ ಬಳಿ ಇದೆ.

ಈ ಯುದ್ಧ ವಿಮಾನಗಳ ಭೀತಿಯಂತೆ ಸದಾ ಕಾಡುವ ಇನ್ನೊಂದು ಭೀತಿ ನನ್ನೂರಿನ ಬಲಿಷ್ಠ ಸವರ್ಣೀಯರದು. ನಮ್ಮ ತಾತ ಮುತ್ತಾತಂದಿರನ್ನು ದಬಾಯಿಸಿ ಬಿಟ್ಟಿಚಾಕರಿ ಮಾಡಿಸಿಕೊಂಡು ಪಳಗಿದ ಇವರ ಮನಸ್ಸು ಇತ್ತೀಚೆಗೆ ವ್ಯಗ್ರಗೊಂಡಿತ್ತು.

ಅದು ಜೂನ್ ತಿಂಗಳ ಏಳನೆಯ ತಾರೀಖು. ಅಂದು ನಮ್ಮೂರಿನಲ್ಲಿ ದೇವರ ಉತ್ಸವ ನಡೆಯಿತು. ಜತೆಗೆ ನಡೆಯಬಾರದ ಘಟನೆ ಕೂಡ.

ಪ್ರತಿವರ್ಷವೂ ದಲಿತ ದೇವರು ಸವರ್ಣೀಯರ ಕೇರಿಯ ಬೀದಿಗಳಲ್ಲಿ ಮೆರವಣಿಗೆ ಬರಬೇಕಾಗಿತ್ತು. ಆದರೆ ಸವರ್ಣೀಯರ ದೇವರು ಮಾತ್ರ ದಲಿತರ ಕೇರಿಯ ಬೀದಿಗಳಲ್ಲಿ ಬರಬಾರದಿತ್ತು. ಇದು ಅನೇಕ ವರ್ಷಗಳಿಂದ ನಡೆದು ಬಂದ ಪದ್ಧತಿ. ಇದನ್ನು ಯಾರೂ ಪ್ರಶ್ನಿಸಬಾರದಾಗಿತ್ತು ಈ ಭಾರಿ ದಲಿತರ ಮನೆಯ ಆಸೆಯ ಕಣ್ಣುಗಳಿಂದ ಸ್ವಾಭಿಮಾನಿಗಳಾದ, ವಿದ್ಯಾವಂತ ದಲಿತ ಯುವಕರಾದ ನಾವು ವಿರೋಧಿಸಿದ್ದೆವು. ತಮ್ಮ ಅಸ್ತಿತ್ವವನ್ನೇ ಅಲುಗಾಡಿಸಿದ ಈ ಘಟನೆಯಿಂದ ಸವರ್ಣೀಯರು, ಪ್ರಶ್ನೆ ಹಾಕಿದ ಕೊರಳುಗಳನ್ನೇ ಕಡಿಯಲು ಮುಂದಾಗಿದ್ದರು. ಆದರೆ ಪೋಲೀಸರ ಮುಂಜಾಗರೂಕತೆ ಅನೇಕ ಮುಗ್ಧ ದಲಿತರ ಹತ್ಯೆಯನ್ನು ತಪ್ಪಿಸಿತ್ತು. ಅಂದಿನಿಂದ ಸವರ್ಣೀಯರ ಮನಸ್ಸುಗಳಲ್ಲಿ ಜಾತಿ ಎಂಬ ವಿಷದ ಹಾವು ಹೆಡೆ ಬಿಚ್ಚಿ ಬುಸುಗುಡುತ್ತಿತ್ತು. ಈ ಮಧ್ಯೆ ಊರಿನ ಸಾವುಗಳಲ್ಲಿ, ಉತ್ಸವಗಳಲ್ಲಿ ತಮಟೆ ಬಡಿಯುತ್ತಿದ್ದ ಬಸಪ್ಪ ಎಂಬ ದಲಿತ, ತಾನು ಇನ್ನು ಮುಂದೆ ಊರಿನ ಯಾವುದೇ ಕಾರ್ಯಗಳಿಗೆ ತಮಟೆ ಬಡಿಯುವುದಿಲ್ಲವೆಂದು ಹೇಳಿದ್ದು, ಗಾಯದ ಮೇಲೆ ಬರೆ ಎಳೆದಂತಾಯ್ತು. ಈ ಘಟನೆಗಳಿಂದ ಒಂದಾಗಿದ್ದ ದಲಿತರ ನಡುವೆ ಬೆಸೆದುಕೊಂಡು ಬಂದಿದ್ದ ಒಗ್ಗಟ್ಟನ್ನು ಮುರಿಯಲು, ಒಡೆದು ಆಳುವ ನೀತಿಯನ್ನು ಉಪಯೋಗಿಸಲು ಊರಿನ ಪಟೇಲ ಎಂದು ಕರೆದುಕೊಳ್ಳುತ್ತಿದ್ದ ವ್ಯಕ್ತಿಯೊಬ್ಬ ಅನೇಕ ರಾಜಕೀಯ ಹುನ್ನಾರಗಳನ್ನು ಹುಡುಕತೊಡಗಿದ್ದ. ಈತನ ಮಗನಾದ ಬಸವರಾಜ ಎಂಬ ಕುಖ್ಯಾತ ರೌಡಿಯೊಬ್ಬ ಇದರ ನೇತೃತ್ವ ವಹಿಸಿದ್ದ. ಮೊದಲಿಗೇ ದಿನಗೂಲಿ ಮಾಡಿ ಜೀವನ ನಡೆಸುತ್ತಿದ್ದ ದಲಿತರಿಗೆ ಸೆರೆ ಕುಡಿಯಲು ಹಣ ಕೊಟ್ಟು ಅವರನ್ನು ತಮ್ಮತ್ತ ಒಲಿಸಿಕೊಂಡರು. ಇದೇ ರೀತಿ ಆರ್ಥಿಕವಾಗಿ ಹಿಂದುಳಿದಿದ್ದ ಅನೇಕರಿಗೆ ಹಣದ ಆಮಿಷವೊಡ್ಡಿ, ಒಪ್ಪದಿದ್ದಾಗ ಪ್ರಾಣಭಯ ಉಂಟು ಮಾಡಿದರು.

ದಿ: 30-8-86ರಂದು ಕೆಲಸವಿಲ್ಲದೆ ತಿರುಗುತ್ತಿದ್ದ ಅಬ್ಬಣ್ಣ ಎಂಬ ದಲಿತನಿಗೆ ಕಂಠ ಪೂರ್ತಿ ಕುಡಿಸಿ, ಅವನನ್ನು ಕಾಲುಕೆರೆದು ಜಗಳ ಮಾಡಲು ಕಳಿಸಿದರು. ಅಮಲಿನಿಂದ ದೇಹದ ಮೇಲೆ ನಿಯಂತ್ರಣವಿಲ್ಲದೆ ಈ ವ್ಯಕ್ತಿ ಬಿದ್ದುದರಿಂದ ತಲೆಒಡೆದು ರಕ್ತ ಸುರಿಯಿತು. ಈ ಅವಕಾಶಕ್ಕಾಗಿ ಕಾಯುತ್ತಿದ್ದ ಊರಿನ ಪಟೇಲರು ಅವನಿಂದ ಅನೇಕ ಮುಗ್ಧ ದಲಿತ ಯುವಕರ ಮೇಲೆ H. A. L. Air Force ಠಾಣೆಯಲ್ಲಿ ದೂರು ಕೊಡಿಸಿದರು. ಹಿಂದೆ ಮುಂದೆ ನಡೆದದ್ದನ್ನು ತಿಳಿದುಕೊಳ್ಳಲು ಬಯಸಿದ ಪೋಲೀಸರು ನಮ್ಮೆಲ್ಲರನ್ನೂ ಬಂಧಿಸಿ ಕೋರ್ಟಿಗೆ ಹಾಜರು ಪಡಿಸಿದರು. ನಾವು ದಂಡ ತೆತ್ತು ಕೋರ್ಟ್‌ನಿಂದ ಹೊರಬಂದೆವು. ಈನಡುವೆ ಊರ ಹೊರಗೆ ಹೊಂಚು ಹಾಕಿ ಕೆಲವು ಮುಖ್ಯರಾದವರನ್ನು ಜೀವಂತವಾಗಿ ಮುಗಿಸಲು ಪ್ರಯತ್ನಿಸಿದರು. ಇವರಲ್ಲಿ ಬಚಾವಾದ ನನ್ನ ಪಕ್ಕದ ಮನೆಯ ಸಂಬಂಧಿಕ "ರಾಮು" ಸಾಕ್ಷಿಯಾಗಿದ್ದಾನೆ.

ಇತ್ತ ಕಡೆ ದಿನನಿತ್ಯವೂ ಊರಿನ ಬೀದಿಗಳಲ್ಲಿ ನಿಂತು ಹೀನಾಮಾನವಾಗಿ ಜಾತಿಯ ಹೆಸರಿಡಿದು ಬಯ್ಯುತ್ತಿದ್ದವರ ವಿರುದ್ಧ ದೂರು ಕೊಟ್ಟರೆ ಠಾಣೆಯಲ್ಲಿರುವ "ರೈಟರ್ ಮಹಾಲಿಂಗಯ್ಯ" ಎಂಬ ಜಾತಿವಾದಿ ಕೊಟ್ಟ ದೂರುಗಳನ್ನೇ ತಿರುಗು ಮುರುಗು ಮಾಡುತ್ತಿದೆ! ಇದರ ಬಗ್ಗೆ ಅನೇಕ ಪೋಲೀಸ್ ಅಧಿಕಾರಿಗಳಿಗೆ ವಿಷಯ ತಿಳಿಸಿದರೂ ಸಹ ಪೋಲೀಸ್ ಎಂಬ ರಕ್ಷಣಾದಳ ರಾಜಕೀಯ ವ್ಯಕ್ತಿಗಳ ಅನುಗ್ರಹಕ್ಕೆ ಒಳಗಾಗಿ ಈ ಮುಗ್ಧ ದಲಿತರ ರಕ್ಷಣೆಯ ಪ್ರಶ್ನೆ ಉಸಿರಿಲ್ಲದಂತಾಗಿದೆ. ಸುಮಾರು ಎರಡು ಬಾರಿ "ಅಸ್ಪೃಶ್ಯತೆ ಕಾಯಿದೆ" ಪ್ರಕಾರ ಬಂಧಿಸಬೇಕಾದ ವ್ಯಕ್ತಿಗಳನ್ನು ಬಂಧಿಸದೇ ಹಾಗೇ ಬಿಡಲಾಗಿದೆ.

ಈ ರೀತಿಯಾಗಿ ನಾಗಸಂದ್ರದ ದಲಿತರಾದ ನಾವು ಇತ್ತ ಪೋಲೀಸ್ ರಕ್ಷಣೆಯಿಲ್ಲದೆ, ಅತ್ತ ತಾಲೂಕಿನ ಶಾಸಕರ ಬೆಂಬಲವಿಲ್ಲದೆ, ಜೀವಭಯದಿಂದ ತತ್ತರಿಸುತ್ತಿದ್ದಾಗ ನೆರವಿಗೆ ಬಂದಿದ್ದು ದಲಿತ ಸಂಘರ್ಷ ಸಮಿತಿ.

ಅಂಬೇಡ್ಕರ್ ಹೇಳಿದ— "ಕೇವಲ ಒಬ್ಬ ವ್ಯಕ್ತಿಯಿಂದ ಅಥವಾ ಯಾವುದೇ ರಾಜಕೀಯ ಪಕ್ಷದಿಂದ ನಮ್ಮ ಬಿಡುಗಡೆ ಸಾಧ್ಯವಿಲ್ಲ. ನಮ್ಮ ಬಿಡುಗಡೆ ನಮ್ಮಿಂದ, ನಮ್ಮ ಹೋರಾಟದಿಂದ ಮಾತ್ರ ಸಾಧ್ಯ" ಎಂಬುದನ್ನು ನಮ್ಮೆದೆಗಳಲ್ಲಿ ಬಿತ್ತಿ ನಮ್ಮನ್ನು ಸಂಘಟಿತರಾಗುವಂತೆ ಮಾಡಿತು. ಇಂದು ನಾವು ಒಡಕಾದ ಒಂಟಿಗರಲ್ಲ. ಬದಲಿಗೆ ಜತೆಗೂಡಿ ಸಾಗುತ್ತಿರುವ ಸಹಸ್ರ, ಸಹಸ್ರ ಜನರಲ್ಲಿ ನಾವೂ ಕೆಲವರು.

● ಮೋಹನ್ ರಾಜ್
ವಸಂತಕುಮಾರ್

# ನಿಮ್ಮ ಹತ್ತಿರಕ್ಕೆ ನೀರು ತರಲು
# ನಾವೆಷ್ಟು ದೂರ ಹೋಗಿದ್ದೇವೆ!

**ರಾಜ್ಯದಾದ್ಯಂತ 98,496 ಕೊಳವೆ ಬಾವಿಗಳು 25 ದಶಲಕ್ಷ ಬಾಯಾರಿದ ಜನಕ್ಕೆ ನೀರೊದಗಿಸುತ್ತಿವೆ.**

ಕುಡಿಯುವ ನೀರು ಪ್ರತಿಯೊಬ್ಬ ಮನುಷ್ಯನಿಗೂ ಅತ್ಯಾವಶ್ಯ. ಆದ್ದರಿಂದಲೇ ಕರ್ನಾಟಕ ಸರ್ಕಾರವು ಕುಡಿಯುವ ನೀರೊದಗಿಸುವ ಯೋಜನೆಯನ್ನು ಆದ್ಯ ಗಮನದಲ್ಲಿರಿಸಿಕೊಂಡಿದೆ.

ಸರ್ಕಾರವು (ಪಟ್ಟಿಯಲ್ಲಿರುವಂತೆ) ದಿನಕ್ಕೆ 27 ಕೊಳವೆ ಬಾವಿಗಳನ್ನು ಕೊರೆಯುವ ವೇಗ ಗತಿಯಲ್ಲಿ ಕೇವಲ ನಾಲ್ಕು ವರ್ಷಗಳಲ್ಲಿ 50,000 ಬಾವಿಗಳನ್ನು ತೋಡಿದೆ. ಈ ಸಂಖ್ಯೆಯು ಸ್ವಾತಂತ್ರ್ಯಾನಂತರದಿಂದ ಮಾರ್ಚ್ 31, 1982ರ ವರೆಗೆ ಕೊರೆಯಲಾದ ಬಾವಿಗಳ ಸಂಖ್ಯೆಗೆ ಬಹುತೇಕ ಸಮೀಪ! ಇಂದು 98,496 ಕೊಳವೆ ಬಾವಿಗಳು ಪ್ರತಿದಿನ 24 ದಶಲಕ್ಷ ಜನರಿಗೆ ನೀರೊದಗಿಸುತ್ತಿವೆ. ಇವು ಕರ್ನಾಟಕದ ಬಹಳಷ್ಟು ಹಳ್ಳಿಗಳ ಕುಡಿಯುವ ನೀರಿನ ಸಮಸ್ಯೆಯನ್ನು ಪರಿಹರಿಸಿವೆ. ಇಷ್ಟರಲ್ಲೇ ಇನ್ನುಳಿದ ಶೇಕಡ 20 ಹಳ್ಳಿಗಳಲ್ಲೂ ಕೊಳವೆ ಬಾವಿಗಳಾಗಿ ನೀರು ತರಲಿವೆ. ರಾಷ್ಟ್ರದ 6 ಲಕ್ಷ ಕೊಳವೆ ಬಾವಿಗಳ ಪೈಕಿ 1:6 ಭಾಗ (1 ಲಕ್ಷ) ಬಾವಿಗಳು ಕರ್ನಾಟಕದಲ್ಲಿವೆ.

ಇಂತಹ ಸಾಧನೆಯ ಮೊದಲ ರಾಜ್ಯ ಕರ್ನಾಟಕವಾಗಿದೆ.

ಭರವಸೆಗಳನ್ನು ಕಾರ್ಯರೂಪಕ್ಕಿಳಿಸುವುದು ಕಠಿಣ ಪರಿಶ್ರಮದ ಕೆಲಸ. ಅಂತಹ ಪರಿಶ್ರಮವನ್ನು ಸ್ವೀಕರಿಸಲು ಸರ್ಕಾರವು ಸದಾ ಸಿದ್ಧವೆಂದು ಈ ಸಾಧನೆ ನಿರೂಪಿಸುತ್ತದೆ.

## 1982–1983ರ ಅವಧಿಯಲ್ಲಿ ಕರ್ನಾಟಕದಲ್ಲಿ ಕೊರೆಯಲಾದ ಬಾವಿಗಳ ಸಂಖ್ಯಾ ವಿವರ

**ಮಾರ್ಚ್ 31, 1982 ರ ವರೆಗೆ – 47,726**

| ವರ್ಷ | ಬಾವಿಗಳ ಸಂಖ್ಯೆ |
|---|---|
| 1982–83 | 9,978 |
| 1983–84 | 15,218 |
| 1984–85 | 13,830 |
| 1985–86 | 10,294 |
| 1986–87 | 1,450 |
| | 50,770 |

● ಕರ್ನಾಟಕ ವಾರ್ತೆ

## ಕುಡಿಯುವ ನೀರಿನ ಪೂರೈಕೆ
## ನಮ್ಮ ವಾಗ್ದಾನ

ಮೂಲಭೂತ ನಿಯಮಗಳಿಗೆ ಪ್ರಮುಖ ಕೊಡುಗೆಯಾಗಿದೆ. ಗತಿ ತಾರ್ಕಿಕ ಭೌತವಾದದ ಪ್ರತಿಬಿಂಬವಾದೀ ಜ್ಞಾನ ಸಿದ್ಧಾಂತಕ್ಕೆ ಬದಲಾಗಿ ಜ್ಞಾನದ ಗತಿ ತಾರ್ಕಿಕ ಸಂಗ್ರಹ ಸಿದ್ಧಾಂತವನ್ನು ಇದು ಸ್ವೀಕರಿಸಿದೆ. ಈ ಅರಿವಿನಿಂದ ಹೊಸ ಸೌಂದರ್ಯ ಶಾಸ್ತ್ರವನ್ನು ರೂಪಿಸುವುದರ ಜೊತೆಗೆ ಬಹುರೇಖೆಗಳ ಚಾರಿತ್ರಿಕ ಭೌತವಾದಕ್ಕೆ ದಾರಿಮಾಡಿಕೊಡುತ್ತದೆ. ಪ್ರಕಟವಾಗಲಿರುವ 'ದಾಸ ಮತ್ತು ಶೂದ್ರ' ಗ್ರಂಥದ ಎರಡನೆ ಭಾಗದಲ್ಲಿ ಈ ಹೊಸ ಸಿದ್ಧಾಂತವನ್ನು ಅಳವಡಿಸಲು ನಾನು ಪ್ರಯತ್ನಿಸಿದ್ದೇನೆ.

ಸತ್ಯಶೋಧಕ ಕಮ್ಯುನಿಸ್ಟ್ ಪಕ್ಷದ ಪ್ರಣಾಳಿಕೆಯು ಭಾರತದಲ್ಲಿ ಮೊದಲ ಬಾರಿಗೆ ಜಾತಿ ವಿನಾಶದ ಯೋಜನೆಯನ್ನು ಮುಂದಿಟ್ಟಿದೆ. ಭಾರತೀಯ 'ಜನವಾದಿ ಕ್ರಾಂತಿ'ಯಾದ ಇದು ಜಾತಿ ವ್ಯವಸ್ಥೆಯನ್ನೂ ಅದರ ಮೂಲವಾದ ಜಮೀನ್ದಾರಿ ಪದ್ಧತಿಯನ್ನೂ ಅಳಿಸಿಹಾಕುವ ಕ್ರಾಂತಿಯಲ್ಲಿ ಆಸಕ್ತಿ ತಳೆದಿದೆ. ಇಂತಹ ಕ್ರಾಂತಿಯಿಂದ ಮಾತ್ರ ಭಾರತೀಯ ಸಮಾಜವಾದಿ ಕ್ರಾಂತಿಯನ್ನು ಮುನ್ನಡೆಸಬಲ್ಲ ಭಾರತೀಯ ಕಾರ್ಮಿಕ ವರ್ಗವು ಜನ್ಮ ತಳೆಯುವುದು ಸಾಧ್ಯ.

ಸಿ.ಪಿ.ಐ. ಮತ್ತು ಸಿ.ಪಿ.ಎಂ. ಪಕ್ಷಗಳು ಒಗ್ಗೂಡುವುದರಿಂದಾಗಲೀ, ವರ್ಗಲಕ್ಷಣದ ಜನತಾಂತ್ರಿಕ ಮತ್ತು ಸಮಾಜವಾದಿ ಕ್ರಾಂತಿಯ ದಾರಿಯಲ್ಲಿರುವ, ಹಾಗೂ ಸರಳ ರೇಖೆಯ ಚಾರಿತ್ರಿಕ ಭೌತವಾದವನ್ನಾಧರಿಸಿರುವ ಸಮಾಜವಾದಿ, ಸಮತಾವಾದಿ ಪಕ್ಷಗಳು ಒಗ್ಗೂಡುವುದರಿಂದಾಗಲೀ, ಜಾತಿ ವರ್ಗ ಲೈಂಗಿಕ ಅಸಮಾನತೆಗಳನ್ನು ನಿರ್ಮೂಲಗೊಳಿಸುವ ಸಮಗ್ರ ಸಾಮಾಜಿಕ ಕ್ರಾಂತಿ ಸಾಧ್ಯವಿಲ್ಲ.

ಇಂತಹ ಸಮಗ್ರ ಕ್ರಾಂತಿ ಸಾಧ್ಯವಾಗುವುದು ಬಹುರೇಖಾ ಚಾರಿತ್ರಿಕ ಭೌತವಾದವನ್ನು ಆಧರಿಸಿದ ಹಾಗೂ ಜಾತಿ ವರ್ಗಗಳನ್ನೊಳಗೊಂಡ ಜನತಾಂತ್ರಿಕ ಸಮಾಜವಾದಿ ಕ್ರಾಂತಿ ಮಾರ್ಗವನ್ನು ಅನುಸರಿಸುವ ಹೊಸ ಸೈದ್ಧಾಂತಿಕ ಚಳವಳಿಗೆ ಮಾತ್ರ.

(ಅನುವಾದ : **ಗಂಗಾಧರಮೂರ್ತಿ**)

## ರಾಣೆಬೆನ್ನೂರಿನ ಹೃದಯಗೆದ್ದ

# ಕಲಾ ಮಂಡಳಿ ಹಾಡುಗಳು

**ವ್ಯಾ**ಪಾರ, ವಹಿವಾಟಿನ ಚಟುವಟಿಕೆಗಳಿಂದ ಗಿಜಿಗುಡುತ್ತಿದ್ದ ರಾಣೆಬೆನ್ನೂರಿನ ಮುಖ್ಯ ಬೀದಿಗಳಲ್ಲಿ ಇತ್ತೀಚೆಗೆ ಒಂದು ವಿನೂತನ ವಿದ್ಯಮಾನ ನಡೆಯಿತು.

ಸವಣೂರು, ಗುಡಿಗೇರಿ, ಲಕ್ಷ್ಮೇಶ್ವರ, ಬಂಕಾಪುರ, ಮೇವುಂಡಿ, ಗಳಗನಾಥ ಶಾಖೆಗಳಿಂದ ಬಂದಿದ್ದ ನೂರಾರು ಕಾರ್ಯಕರ್ತರು ಒಂದು ಉರಿಬಿಸಿಲಿನ ಮಧ್ಯಾಹ್ನ ರಾಣೆಬೆನ್ನೂರಿನ ಬೀದಿಗಳಲ್ಲಿ ಘೋಷಣೆ ಕೂಗುತ್ತಾ ನಡೆದರು. ಸಂಜೆ ಸಮೀಪಿಸಿದಂತೆ ಸಂತೆ ಮೈದಾನದಲ್ಲಿ ಬಹಿರಂಗ ಸಭೆ ನಡೆಸಿದರು.

ಸಭೆ ದಲಿತ ಕಲಾ ಮಂಡಳಿಯ ಹೋರಾಟದ ಹಾಡುಗಳಿಂದ ಪ್ರಾರಂಭವಾಯಿತು: "ನಾವು ಬಡವರಿಗೆ ಭೂಮಿ ಕೊಡಿ ಅಂದರೆ ಬಂಡವಾಳ ಶಾಹಿಗಳಿಗೆ ನೀಲಗಿರಿ ಬೆಳೆಯಲು ಸಾವಿರಾರು ಎಕರೆ ಭೂಮಿ ಕೊಡುತ್ತಾರೆ. ಕಾಫಿ ತೋಟದ ಮಾಲಿಕರಿಗೆ ನೂರಾರು ಎಕರೆ ಒತ್ತುವರಿ ಜಮೀನು ನೀಡುತ್ತಾರೆ. ನಾವು ಕನಿಷ್ಠ ವಿದ್ಯೆಯನ್ನಾದರೂ ಕೊಡಿ; ಹೋಬಳಿಗೊಂದು ವಸತಿ ಶಾಲೆ ತೆರೆಯಿರಿ ಅಂದರೆ ಬೀದಿಗೆರಡು ಬ್ರಾಂದಿ ಅಂಗಡಿ ತೆರೆಯುತ್ತಾರೆ. ಇದೆಲ್ಲಕ್ಕೂ ಹೋರಾಟವೊಂದೇ ನಿಜವಾದ ದಾರಿ."

ಹೀಗೆಂದು ನೊಂದು ನುಡಿದವರು ದ.ಸಂ.ಸ. ರಾಜ್ಯ ಸಂಘಟನಾ ಸಂಚಾಲಕರಾದ ಜಯಣ್ಣ. ಅವರು ಅಂದಿನ ಸಮಾರಂಭದ ಮುಖ್ಯ ಅತಿಥಿಗಳಾಗಿದ್ದರು.

'ದೇವರು ಧರ್ಮದ ಹೆಸರಲ್ಲಿ ದುಡಿಯಲಾಗದ ಒಂದು ವರ್ಗ ತನ್ನ ಹಿತ ಕಾಯ್ದುಕೊಳ್ಳಲು ಮೂಢ ನಂಬಿಕೆ ಹಾಗೂ ಅಸಮಾನತೆಯ ಜಾತಿ ಪದ್ಧತಿ ಸೃಷ್ಟಿಸಿ ಮನುಷ್ಯ-ಮನುಷ್ಯರ ಮಧ್ಯೆ ಈರ್ಷ್ಯೆ, ಮತ್ಸರದ ವಿಷ ಬಿತ್ತಿ ಎಂದೂ ಒಂದಾಗದಂತೆ ನೋಡಿಕೊಳ್ಳುತ್ತಿದೆ' ಎಂದು ಕೆರಳಿ ನುಡಿದವರು ಇನ್ನೊಬ್ಬ ಭಾಷಣಕಾರರಾದ ಎಂ. ಎನ್. ಕೆಂಪಯ್ಯನವರು.

ಅಧ್ಯಕ್ಷತೆ ವಹಿಸಿದ್ದ ರಾಜರಾಜೇಶ್ವರಿ ಮಹಿಳಾ ಕಿರಿಯ ಕಾಲೇಜಿನ ಉಪನ್ಯಾಸಕರಾದ ಮಾಲತೇಶಪ್ಪನವರು "ರಾಣೆಬೆನ್ನೂರಿನ ಎಲ್ಲಾ ಬಡವರೂ ನಮ್ಮ ಧೋರಣೆಯನ್ನು ಬೆಂಬಲಿಸಿ ನಮ್ಮ ಹೋರಾಟದಲ್ಲಿ ಭಾಗಿಗಳಾಗಿ ಸಮ ಸಮಾಜ ಕಟ್ಟಲು ನಮ್ಮೊಟ್ಟಿಗೆ ಬರುತ್ತಾರೆ" ಎಂದು ಭರವಸೆ ವ್ಯಕ್ತಪಡಿಸಿದರು.

ಆ ಭರವಸೆ ಎಷ್ಟು ಸಕಾರಣ ಎಂಬುದು ಅಲ್ಲೇ ವ್ಯಕ್ತಗೊಂಡಿತು. ಸಂತೆಗೆ ಸಾಮಗ್ರಿ ಕೊಳ್ಳಲು ಬಂದವರ ಮನಸ್ಸಿನಲ್ಲಿ ತುಂಬಿಕೊಂಡಿದ್ದ ಲೆಕ್ಕಾಚಾರ, ಧಾರಣೆ ಪಕ್ಕಕ್ಕೆ ಸರಿದು ಅಲ್ಲಿ ದ.ಸಂ.ಸ. ಬಿತ್ತಿದ ವಿಚಾರಗಳು ಮೂಡತೊಡಗಿದವು. ಅದು ಮತ್ತಷ್ಟು ಎದ್ದು ಕಂಡಿದ್ದು ಹೇಗೆಂದರೆ...

ಜನರೇ ಮುಂದಾಗಿ ಹೋರಾಟದ ಹಾಡುಗಳನ್ನು ಹಾಡುವಂತೆ ದಲಿತ ಕಲಾ ಮಂಡಳಿಯವರನ್ನು ಒತ್ತಾಯಿಸತೊಡಗಿದರು. ಅನಂತರ ರಾಣೆಬೆನ್ನೂರಿನ ಹೃದಯ ಭಾಗದಲ್ಲಿ ಕಾರ್ಯಕ್ರಮ ನೀಡಲೇಬೇಕಾಯಿತು. ದಲಿತ ಕಲಾ ಮಂಡಳಿಯ ಹಾಡುಗಳು ರಸ್ತೆಯಲ್ಲಿ ಹೋಗುತ್ತಿದ್ದ ಎಲ್ಲಾ ವರ್ಗದ ಜನಗಳನ್ನು ಹತ್ತಿರಕ್ಕೆ ಸೆಳೆದು ತರುತ್ತಿದ್ದವು. ಅವರೆಲ್ಲಾ ಹೊಸದೊಂದು ಬೆಳಕು ಕಂಡಂತೆ ತಲೆದೂಗುತ್ತಾ ಚಪ್ಪಾಳೆ ತಟ್ಟುತ್ತಾ ಮತ್ತೆ ಮತ್ತೆ ಹಾಡುವಂತೆ ಒತ್ತಾಯಿಸಿ ಹಾಡುಗಾರರನ್ನು ಸುಸ್ತುಮಾಡಿದರು. ಕೊನೆಗೆ ಅಲ್ಲಿ ನೆರೆದಿದ್ದ ಜನರ ಬಾಯಲ್ಲಿ 'ಸೈಯಪ್ಪಾ ಸೈ' ಎಂಬ ಮೆಚ್ಚುಗೆಯ ನುಡಿಗಳು ಕೇಳಿಬಂದವು.

ಹೀಗಾಗಿ ಅಂದಿನ ದ.ಸಂ.ಸ. ಕಾರ್ಯಕ್ರಮ ರಾಣೆಬೆನ್ನೂರಿನ ಹೃದಯಕ್ಕೆ ಹತ್ತಿರವಾಗಿಬಿಟ್ಟಿತ್ತು.

**ಕೆ. ಹೆಚ್. ರಂಗಯ್ಯ**

ರಾಣೆಬೆನ್ನೂರು.

## ಕರ್ನಾಟಕ ದಲಿತ ಸಂಘರ್ಷ ಸಮಿತಿಯ

# ರಾಜ್ಯ ಸಮಿತಿ ಸಭೆ: ತೀರ್ಮಾನಗಳು

ಹಾಸನ ಜಿಲ್ಲೆ ಸಕಲೇಶಪುರದಲ್ಲಿ ಡಿಸೆಂಬರ್ 15 ರಂದು ನಡೆದ ದಲಿತ ಸಂಘರ್ಷ ಸಮಿತಿ ರಾಜ್ಯಸಮಿತಿ ಸಭೆಯಲ್ಲಿ ಮುಂದಿನ ಅವಧಿಗೆ ಹೊಸ ಪದಾಧಿಕಾರಿಗಳನ್ನು ಚುನಾಯಿಸಲು ತೀರ್ಮಾನಿಸಲಾಗಿದೆ. ರಾಜ್ಯ ಸಂಚಾಲಕರ ವರದಿ ಚರ್ಚೆ, ದ.ಸಂ.ಸ. ಸಂವಿಧಾನ ತಿದ್ದುಪಡಿ ಅಂಗೀಕಾರ, ಹೊಸಪದಾಧಿಕಾರಿಗಳ ಚುನಾವಣೆ ಅಜೆಂಡಾಗಳನ್ನು ಹೊತ್ತ ಆಯ್ಕೆ ಸಮಿತಿ ಸಭೆ 87ರ ಫೆಬ್ರವರಿ 15ರಂದು ಹಾಸನ ಜಿಲ್ಲೆ ಅರಸೀಕೆರೆಯಲ್ಲಿ ನಡೆಯುವುದು. ಚುನಾವಣಾಧಿಕಾರಿಗಳಾಗಿ ಕೆ. ನಾರಾಯಣ ಸ್ವಾಮಿಯವರನ್ನು ನೇಮಿಸಲಾಗಿದೆ.

ಮುಂಬರುವ ಜಿಲ್ಲಾ ಪರಿಷತ್ ಹಾಗೂ ಮಂಡಲ ಪಂಚಾಯತ್ ಚುನಾವಣೆಗಳಲ್ಲಿ ಯಾವುದೇ ರಾಜಕೀಯ ಪಕ್ಷಕ್ಕೆ ಬೆಂಬಲ ನೀಡುವುದಿಲ್ಲ ಬದಲಾಗಿ ತಟಸ್ಥವಾಗಿರುವುದೆಂದು ತೀರ್ಮಾನಿಸಲಾಗಿದೆ.

1983ರ ವಿಧಾನಸಭೆ ಚುನಾವಣೆಗಳಲ್ಲಿ ಏಕಪಕ್ಷೀಯ ಆಡಳಿತ ನಡೆಸುತ್ತಿದ್ದ ಕಾಂಗ್ರೆಗೆ ಮತೀಯ ಪಕ್ಷವಾದ ಭಾರತೀಯ ಜನತಾ ಪಕ್ಷ ಪರ್ಯಾಯವಾಗುವ ಅಪಾಯವಿದ್ದುದರಿಂದ ಮುಂದಾಲೋಚನೆಯಿಂದ ಜನತಾಪಕ್ಷಕ್ಕೆ ದ.ಸಂ.ಸ. ಬೆಂಬಲಿಸಿತ್ತು. ಆ ಅಪಾಯ ಈಗಿಲ್ಲ.

ನಿಜವಾದ ವಿಕೇಂದ್ರೀಕರಣ ಅಂದರೆ ತಳಜನಾಂಗದ ಹಿಂದುಳಿದವರ ಆಳ್ವಿಕೆ ತರುವುದೇ ಆಗಿದೆ. ಹಾಗೆ ನೋಡಿದರೆ ಜನತಾ ಪಕ್ಷದ ಗ್ರಾಮೀಣ ರಚನೆಯು ಹೆಚ್ಚು ಜಾತಿವಾದಿಯಾಗಿದೆ. ರಾಜಕೀಯ ಪಕ್ಷಗಳಿಗೆ ಬದಲಾಗಿ ಪರಂಪರಾಗತವಾಗಿ ಹಳ್ಳಿಗಾಡಲ್ಲಿ ಆಳ್ವಿಕೆ ನಡೆಸಿರುವುದು ಬಲಿಷ್ಠ ಮೇಲ್ಜಾತಿಗಳಾಗಿವೆ. ತಳಜನಾಂಗದ ಆರೋಗ್ಯಕರವಾದ ರಾಜಕೀಯ ಪಕ್ಷವೊಂದು ಇಲ್ಲದಿರುವ ಕಾರಣ ಅನಿವಾರ್ಯವಾಗಿ ಈ ನಿರ್ಧಾರ ತಳೆಯಲಾಗಿದೆ.

ಈ ಬಗ್ಗೆ ಹೊರತರಬೇಕಾದ ಕರಪತ್ರವನ್ನು ಈಗಾಗಲೆ ಎಲ್ಲಾ ಶಾಖೆಗಳಿಗೂ ರವಾನಿಸಲಾಗಿದೆ ಎಂದು ದ.ಸಂ.ಸ. ರಾಜ್ಯಸಂಚಾಲಕರು ತಿಳಿಸಿದ್ದಾರೆ. ●

# ಮೀನುಗಾರರಿಗೆ ಸಾಮೂಹಿಕ ವಿಮಾ ಯೋಜನೆಯ ಪ್ರೀಮಿಯಂ ವಿನಾಯಿತಿ

## ಕಡಲಾಳದಿಂದ ಮತ್ಸ್ಯ ಸಂಪತ್ತನ್ನು ಅರಸಿ ತರುವ ಧೀವರಿಗೆ ಕರ್ನಾಟಕ ಸರ್ಕಾರದ ಸಹಾಯಹಸ್ತ

ರಾತ್ರಿ–ಹಗಲು ಪ್ರಕೃತಿಯ ಶಕ್ತಿಗಳನ್ನೆದುರಿಸಿ ಸಮುದ್ರದಾಚೆಗೆ ಹೋಗಿ, ತೆರೆಗಳೊಡನೆ ಹೋರಾಡಿ ಜೀವನ ನಡೆಸುವ ಮೀನುಗಾರರ ಬಗ್ಗೆ ಕರ್ನಾಟಕ ಸರ್ಕಾರ ತನ್ನ ಕಾಳಜಿಯನ್ನು ವ್ಯಕ್ತಪಡಿಸುತ್ತಿದೆ. 1983–84 ರಿಂದ ಜಾರಿಗೆ ತರಲಾಗಿರುವ ಒಳನಾಡು ಹಾಗೂ ಕರಾವಳಿ ಮೀನುಗಾರರ ಸಾಮೂಹಿಕ ವಿಮಾ ಯೋಜನೆಯ ಪ್ರೀಮಿಯಂ ಹಣದಿಂದ ಈ ವರ್ಷದಲ್ಲಿ, ಅಂದರೆ 1–5–86ರಿಂದ 30–4–87ರ ವರೆಗೆ, ಮೀನುಗಾರರನ್ನು ಸಂಪೂರ್ಣವಾಗಿ ಮುಕ್ತಗೊಳಿಸುತ್ತಿದೆ.

ಈ ವರ್ಷದಲ್ಲಿ 57,768 ಮೀನುಗಾರರ ಪರವಾಗಿ ಕೇಂದ್ರ ಸರ್ಕಾರ ಮತ್ತು ಕರ್ನಾಟಕ ಸರ್ಕಾರದ ಸಹಭಾಗಿತ್ವದಲ್ಲಿ ವಿಮಾ ಕಂಪನಿಗೆ ತಲಾ ರೂ. 9 ರಂತೆ ಪ್ರೀಮಿಯಂ ಹಣ ತುಂಬಲಾಗಿದೆ.

ಈ ಸಾಮೂಹಿಕ ವಿಮಾ ಯೋಜನೆಯಲ್ಲಿ ಆಕಸ್ಮಿಕ ಅಪಘಾತಕ್ಕೀಡಾಗಿ ಅಂಗವಿಕಲರಾದ ಮೀನುಗಾರರಿಗೆ ಅಥವಾ ಮೃತರಾದ ಮೀನುಗಾರರ ಅವಲಂಬಿಗಳಿಗೆ ರೂ. 15,000 ವಿಮಾ ಹಣವನ್ನು ನೀಡಲಾಗುವುದು. ಅಪೂರ್ಣ ಅಂಗವಿಕಲರಾದಲ್ಲಿ ಮೀನುಗಾರರಿಗೆ ರೂ. 7,500 ವಿಮಾಹಣ ನೀಡಲಾಗುವುದು. ಈಗ ಮೀನುಗಾರರು ನಿಶ್ಚಿಂತರಾಗಿ ಮೀನು ಹಿಡಿಯಲು ಹೋಗಬಹುದು. ಅಕಸ್ಮಾತ್ ಏನಾದರೂ ಅನಾಹುತವಾದಲ್ಲಿ ಅವರ ಕುಟುಂಬಗಳು ದಾರಿಪಾಲಾಗಬೇಕಿಲ್ಲ. ಅವರ ಕಷ್ಟಕಾಲದಲ್ಲಿ ಈ ವಿಮಾಹಣ ಅವರಿಗೆ ಸಹಾಯ ನೀಡುತ್ತದೆ.

ಒಳನಾಡು ಹಾಗೂ ಕರಾವಳಿ ಮೀನುಗಾರಿಕಾ ಸಹಕಾರಿ ಸಂಘಗಳ ಸದಸ್ಯರಾಗಿರುವ ಎಲ್ಲ ಮೀನುಗಾರರು ಈ ಸಾಮೂಹಿಕ ವಿಮಾ ಯೋಜನೆಯಡಿಯಲ್ಲಿ ಪ್ರಯೋಜನ ಪಡೆಯುವರು. ಹೆಚ್ಚು ಹೆಚ್ಚು ಮೀನುಗಾರರು ಈ ಸಹಕಾರಿ ಸಂಘಗಳ ಸದಸ್ಯರಾಗಬೇಕೆಂದು ಕೋರಲಾಗಿದೆ. ಸ್ಥಳೀಯ ಮೀನುಗಾರಿಕಾ ಅಧಿಕಾರಿಗಳಿಂದ ಈ ಬಗ್ಗೆ ಹೆಚ್ಚಿನ ವಿವರಗಳನ್ನು ತಿಳಿಯಬಹುದು.

**ಬನ್ನಿ, ಮೀನುಗಾರಿಕಾ ಸಹಕಾರಿ ಸಂಘದ ಸದಸ್ಯರಾಗಿ**
**ವಿಮಾ ಯೋಜನೆಯ ಪ್ರಯೋಜನ ಪಡೆಯಿರಿ.**

**● ಕರ್ನಾಟಕ ವಾರ್ತೆ**

ಎರಡು ಉಪನ್ಯಾಸಗಳು

# ಭಾರತದ ಬೌದ್ಧಿಕ ದಾರಿದ್ರ್ಯ

ಮೂಲ: ವಿ. ಆರ್. ನಾರ್ಲ
ಅನು: ಗಂಗಾಧರಮೂರ್ತಿ

## 3

ಆದ್ದರಿಂದ ನಮ್ಮ ಪ್ರಶಂಸೆಗೆ ಕಾರಣವಾಗುವುದು ಋಗ್ವೇದದ ಆರ್ಯರ ನೈತಿಕ ಮಟ್ಟವಾಗಲೀ ಜ್ಞಾನದ ಅಗಾಧತೆಯಾಗಲೀ ಅಲ್ಲ: ಜೀವನವನ್ನು ಅನುಭವಿಸಬೇಕು ಎನ್ನುವ ಅವರ ಅದಮ್ಯ ಆಸಕ್ತಿ. ಅವರಿಗೆ ಚೆನ್ನಾಗಿ ತಿನ್ನುವುದರಲ್ಲಿ, ಕುಡಿಯುವುದರಲ್ಲಿ, ಭೋಗದಲ್ಲಿ ಮತ್ತು ಕುದುರೆ ಮುಂತಾದ ಜೂಜಾಟಗಳಲ್ಲಿ ಆಸಕ್ತಿಯಿತ್ತು. ಕಾವ್ಯಸಂಗೀತ, ನೃತ್ಯಗಳೆಲ್ಲದರ ಬಗ್ಗೆಯೂ ಪ್ರೀತಿ ಇತ್ತು. "ದೇವಕನ್ನಿಕೆ"ಯಾದ ಉಷೆಯಿಂದ ಅವರು ಪುಳಕಿತರಾಗುತ್ತಿದ್ದರು; ಮಳೆ ತುಂಬಿದ ದಟ್ಟ ಮೋಡಗಳು ಅವರನ್ನು ಮಂತ್ರ ಮುಗ್ಧಗೊಳಿಸುತ್ತಿದ್ದವು; ಬಾಗಿದ ಇಳಿವಯಸ್ಸಿಗಿಂತ ಹುರುಪಿನ ಹರೆಯ ಅವರ ಪಾಲಿನ ಬಯಕೆಯಾಗಿತ್ತು.

ಸೌಂದರ್ಯಯುತವೂ ಸಮೃದ್ಧವೂ ಆದ ಈ ಭೂಮಿಯ ಮೇಲಿನ ಎಲ್ಲಾ ಸುಖ ಸಂತೋಷಗಳನ್ನೂ ಸವಿಯುತ್ತಾ ಶತಾಯುಷಿಗಳಾಗಿ ಬದುಕಬೇಕೆಂಬುದು ಅವರ ಹಂಬಲವಾಗಿತ್ತು. ಇಂತಹ ಸಮೃದ್ಧವಾದ ತುಂಬಿ ತುಳುಕುವ ಬದುಕನ್ನು ಕಾಪಾಡಿಕೊಳ್ಳಲು ಅವರು ಯುದ್ಧಗಳಲ್ಲಿ ಸೆಣಸುತ್ತಿದ್ದರು. ಯುದ್ಧ ಕೈದಿಗಳನ್ನು ಗುಲಾಮರನ್ನಾಗಿ ಮಾಡಿಕೊಳ್ಳುತ್ತಿದ್ದರು; ಸೂರೆ ಮಾಡುತ್ತಿದ್ದರು; ತನ್ಮಯವಾಗಿ ಓಲಾಡುತ್ತಿದ್ದರು. ಆದರೆ ಜಾತಿ ಎಂಬುದಾಗಲಿ ವರ್ಗವೆಂಬುದಾಗಲಿ ಅವರ ನಡುವೆ ಇರಲಿಲ್ಲ. ಒಂದು ಪಂಗಡದ ಒಬ್ಬ ದರಿದ್ರನು ಹೀಗೆ ಪ್ರಾರ್ಥಿಸುತ್ತಾನೆ: "ನೋಡಿ, ನಾನು ಕವಿ, ನನ್ನ ಅಪ್ಪ ವೈದ್ಯ; ನನ್ನ ಅವ್ವ ಬೀಸುಕಲ್ಲು ತಿರುಗಿಸುವವಳು. ನಾವೆಲ್ಲಾ ಬೇರೆ ಬೇರೆ ಉದ್ಯೋಗಗಳನ್ನು ಮಾಡುವವರು. ಆಹಾರಕ್ಕಾಗಿ ಗುಡ್ಡಗಾಡಿನ ಹಲವು ದಿಕ್ಕುಗಳಲ್ಲಿ ಅಲೆಯುವ ಗೋವುಗಳಂತೆ ನಾವೂ ಕೂಡಾ ವಿವಿಧ ಉದ್ಯೋಗಗಳಲ್ಲಿ ತೊಡಗಿದ್ದೇವೆ.

ಓ ಸೋಮದೇವನೇ, ಇಂದ್ರನಿಗಾಗಿ ಸೋಮರಸವನ್ನು ಹರಿಸು; ನಾವು ನಿನ್ನ ಆರಾಧಕರು". ಕಸುಬನ್ನು ಆಧರಿಸಿದ, ವಂಶಪಾರಂಪರಿಕವಾದ, ಜಾತಿಪದ್ಧತಿಯು ಆ ಕಾಲದಲ್ಲಿ ಇದ್ದಿದ್ದರೆ ಒಂದೇ ಕುಟುಂಬದಲ್ಲಿನ ಸದಸ್ಯರು ವಿವಿಧ ಉದ್ಯೋಗದಲ್ಲಿರುವುದು ಸಾಧ್ಯವಿಲ್ಲ. ನಾಲ್ಕು ಪ್ರಮುಖ ಜಾತಿಗಳನ್ನು ಸೃಷ್ಟಿಸಿದವನು ಬ್ರಹ್ಮನೇ ಎಂದು ವಾದ ಮಾಡುವವರು ತಮ್ಮ ವಾದಕ್ಕೆ ಪೂರಕವಾಗಿ ಋಗ್ವೇದದ ಹತ್ತನೆಯ ಮತ್ತು ಕೊನೆಯ ಮಂಡಲದಲ್ಲಿ ಬರುವ ಪುರುಷಸೂಕ್ತದ ಶ್ಲೋಕವನ್ನು ಉಲ್ಲೇಖಿಸುತ್ತಾರೆ. ಆದರೆ ತೆರೆದ ಮನಸ್ಸಿನ ವೈದಿಕ ವಿದ್ವಾಂಸರು ಈ ಸೂಕ್ತವು ಪ್ರಕ್ಷಿಪ್ತ ಎನ್ನುವುದನ್ನು ಅನುಮೋದಿಸುತ್ತಾರೆ.

ವರ್ಣ, ಕ್ಷತ್ರಿಯ, ವಿಪ್ರ ಮತ್ತು ಬ್ರಾಹ್ಮಣ ಎನ್ನುವ ಪದಗಳು ಈ ಋಗ್ವೇದದ ಹಲವಾರು ಸಂದರ್ಭಗಳಲ್ಲಿ ಕಂಡು ಬರುವುದು ನಿಜ. ಆರ್.ಸಿ. ದತ್ ಅವರು ವಿವರಿಸುವಂತೆ "ವರ್ಣ ಎಂಬ ಶಬ್ದವು ಆರ್ಯರನ್ನೂ ಆರ್ಯೇತರರನ್ನೂ ಗುರ್ತಿಸುವ ಶಬ್ದವಾಗಿಯೂ, ಕ್ಷತ್ರಿಯ ಎನ್ನುವ ಪದವು ವೇದಗಳಲ್ಲಿ ಸಶಕ್ತ ಎನ್ನುವ ಅರ್ಥದಲ್ಲೂ, ದೇವತೆಗಳನ್ನು ಉದ್ದೇಶಿಸಿರುವ ಪದವಾಗಿಯೂ, ವಿಪ್ರ ಎನ್ನುವ ಶಬ್ದವು ಜ್ಞಾನಿ ಎನ್ನುವ ಅರ್ಥವನ್ನು ಹೊಂದಿದ್ದು ದೇವರುಗಳನ್ನು ಉದ್ದೇಶಿಸುವ ಗುಣವಾಚಕವಾಗಿಯೂ, ಬ್ರಾಹ್ಮಣ ಎಂಬ ಶಬ್ದವು ಪ್ರಾರ್ಥನಾ ಶ್ಲೋಕಗಳ ಕರ್ತೃಗಳಿಗೆ ಸಂಬಂಧಿಸಿದಂತೆಯೂ ಋಗ್ವೇದದ ಹಲವಾರು ಸಂದರ್ಭಗಳಲ್ಲಿ ಕಂಡು ಬರುತ್ತವೆ. ಆದರೆ ನಂತರದ ಸಂಸ್ಕೃತ ಗ್ರಂಥಗಳಲ್ಲಿ ಈ ವರ್ಣವು ಜಾತಿಯಾಗಿಯೂ ಕ್ಷತ್ರಿಯವು ಸೈನಿಕ ಜಾತಿಯಾಗಿಯೂ ವಿಪ್ರ ಮತ್ತು ಬ್ರಾಹ್ಮಣ ಪದಗಳು ಪುರೋಹಿತ ಜಾತಿ ಕುಲಗಳಾಗಿ ಬಳಕೆಯಾಗಿರುವುದು ಕಂಡು ಬರುತ್ತದೆ..."24.

ದತ್ ಅವರು ಹೇಳದೇ ಬಿಟ್ಟ ಒಂದು ವಿಷಯವನ್ನು ನಿಮ್ಮ ಗಮನಕ್ಕೆ ತರಬಯಸುತ್ತೇನೆ. ಋಗ್ವೇದದ ಕಾಲ ಘಟ್ಟವು ಆರ್ಯರ ಆಕ್ರಮಣದ, ರಾಜ್ಯ ವಿಸ್ತರಣೆಯ, ವಸಾಹತಿನ ಕಾಲವೇ ಆಗಿತ್ತು. ಆಗಿನ ಅವರ ಘೋಷಣೆ ಎಂದರೆ "ಚರೈವೇತಿ" (ಮುನ್ನುಗ್ಗಿ! ಮುನ್ನುಗ್ಗಿ!) ಎಂಬುದು. ವರ್ಗಗಳು ಅಥವಾ ಜಾತಿಗಳು ಕಾಣಿಸಿಕೊಳ್ಳುವ ಸಂದರ್ಭ ಅದಾಗಿರಲಿಲ್ಲ. ಹಾಗೇನಾದರೂ ಕಾಣಿಸಿಕೊಳ್ಳುವಂತಿದ್ದರೂ ಸ್ಪಷ್ಟವಾದ ಆಕೃತಿಯನ್ನು ಪಡೆದುಕೊಳ್ಳುವುದು ಸಾಧ್ಯವಿರಲಿಲ್ಲ. ಒಂದು ರೀತಿಯಲ್ಲಿ ಸಾಮೂಹಿಕವಾಗಿ ಬದುಕುವುದು ಸಾಧ್ಯವಾಗದಿದ್ದಲ್ಲಿ ಬೇರೆ ಬೇರೆಯಾಗಿ ಬದುಕುವುದೂ ಸಾಧ್ಯವಿರದಿದ್ದ ಕಾಲಘಟ್ಟವದು.

ಋಗ್ವೇದವ ಮುಕ್ತಾಯದ ಸಾಲುಗಳು ಏಕತೆಯನ್ನು ಕುರಿತದ್ದಾಗಿರುವುದು ಈ ದೃಷ್ಟಿಯಿಂದ ಆಶ್ಚರ್ಯವೆನಿಸುವುದಿಲ್ಲ. ಅನುರಣನಗೊಳ್ಳುವ ಧ್ವನಿ ತರಂಗಗಳಿಂದ ಕೂಡಿದ, ಒಟ್ಟಾಗಿ ನಡೆಯಿರಿ, ಕಲೆತು ಮಾತಾಡಿ, ನಿಮ್ಮ ಮನಸ್ಸುಗಳು ಒಂದಾಗಿರಲಿ...ಪ್ರಾರ್ಥನೆಗಳು ಸಾಮೂಹಿಕವಾಗಿರಲಿ, ಆಸ್ತಿ ಸಂಚಯ ಸಾಮುದಾಯಿಕವಾಗಿರಲಿ, ಉದ್ದೇಶ ಸಾಮುದಾಯಿಕವಾಗಿರಲಿ, ನಮ್ಮ ಅಭೀಪ್ಸೆಯು ಎಲ್ಲರನ್ನೂ ಒಳಗೊಳ್ಳುವಂತಾಗಲಿ ...ನಮ್ಮೆಲ್ಲರ ಧ್ಯೇಯವು ಒಂದೇ ಆಗಿರಲಿ. ನಮ್ಮ ಹೃದಯದ ಆಸೆ ಒಂದೇ ಆಗಿರಲಿ, ನಮ್ಮ ಚಿಂತನೆ ಒಂದೇ ಆಗಿರಲಿ, ನಮ್ಮಲ್ಲಿ ಪೂರ್ಣತರದ ಏಕತೆ ಬೇಕಾಗಿದೆ ಎನ್ನುವ ಉದ್ದೀಪಿತ ಮಾತುಗಳು ಕಂಡುಬರುತ್ತವೆ.

ಋಗ್ವೇದ ಕಾಲದ ಜನತೆಯನ್ನು ಕುರಿತ ಈ ನನ್ನ ಮಾತುಗಳನ್ನು ಒಪ್ಪುತ್ತೀರೋ ಇಲ್ಲವೋ ಆದರೆ ಜೀವನದ ಬಗ್ಗೆ ಅವರಿಗೆ ಅಪರಿಮಿತ ಪ್ರೀತಿಯಿತ್ತು ಎನ್ನುವ ವಿಷಯದಲ್ಲಿ ಭಿನ್ನಾಭಿಪ್ರಾಯವಿಲ್ಲ ಅಂದುಕೊಂಡಿದ್ದೇನೆ. ಬದುಕಿನಿಂದ ಬಿಡುಗಡೆ (ಮೋಕ್ಷ)ಯನ್ನು ಅವರು ಬಯಸಲೂ ಇಲ್ಲ; ಅದಕ್ಕಾಗಿ ಪರಿತಪಿಸಲೂ ಇಲ್ಲ. ಯಮ ಅವರಿಗೆ ನರಕದ ದೇವತೆಯಾಗಿರದೆ ಸ್ವರ್ಗದ ಧರ್ಮೋದಾತ್ತ ದೇವತೆಯಾಗಿದ್ದನು. ಮರಣಾನಂತರ ಸತ್ಪುರುಷರಿಗೆ ತನ್ನ ರಾಜ್ಯದಲ್ಲಿ ಹಿಂಸೆಗೆ ಬದಲಾಗಿ ಸಂತೋಷದ ತಾಣವನ್ನು ಕರುಣಿಸುವ ದೇವನಾಗಿ ಅವನು ಕಂಡುಬರುತ್ತಾನೆ. ಎಂದು ಹೇಳಿದರೆ ಕೆಲವರಿಗೆ ಆಶ್ಚರ್ಯವಾಗಲೂ ಬಹುದು.

ಋಗ್ವೇದ ಕಾಲದ ಜನತೆಯ ಅತ್ಯಂತ ಸರಳವೂ ಸಾಮರವೂ ಆದ ಜೀವನದೃಷ್ಟಿಯನ್ನು ತತ್ವದರ್ಶನ ಎಂದು ಕರೆಯಬಹುದಾದರೆ ಋಗ್ವೇದದಲ್ಲಿ ಕಂಡುಬರುವ ದಾರ್ಶನಿಕತೆಯು ಭೌತಿಕ ಜಗತ್ತು ಮತ್ತು ಇಹವನ್ನು ಸಮರ್ಥಿಸುವ ತತ್ವಪ್ರಣಾಲಿಯಾಗಿತ್ತು ಎನ್ನಬಹುದು. ಜೀವನವು ದುಃಖ ಮತ್ತು ನೋವುಗಳಿಂದ ತುಂಬಿ ಹೋಗಿರುವಂತದ್ದು ಎನ್ನುವ ತತ್ವಪ್ರಣಾಲಿ ಅವರದಾಗಿರಲಿಲ್ಲ. ಇಹ ಅವರಿಗೆ ಭ್ರಾಂತಿಯಾಗಿರದೆ ಸತ್ಯವಾಗಿತ್ತು.

**ಜೀವನವನ್ನು ಅನುಭವಿಸಬೇಕು ಎನ್ನುವ ಅದಮ್ಯ ಆಸಕ್ತಿ. ಅವರಿಗೆ ಚೆನ್ನಾಗಿ ತಿನ್ನುವುದರಲ್ಲಿ, ಕುಡಿಯುವುದರಲ್ಲಿ, ಭೋಗದಲ್ಲಿ ಮತ್ತು ಕುದುರೆ ಮುಂತಾದ ಜೂಜಾಟಗಳಲ್ಲಿ ಆಸಕ್ತಿಯಿತ್ತು. ಕಾವ್ಯಸಂಗೀತ, ನೃತ್ಯಗಳೆಲ್ಲದರ ಬಗ್ಗೆಯೂ ಪ್ರೀತಿ ಇತ್ತು. "ದೇವಕನ್ನಿಕೆ"ಯಾದ ಉಷೆಯಿಂದ ಅವರು ಪುಳಕಿತರಾಗುತ್ತಿದ್ದರು.**

**ಮಳೆ ತುಂಬಿದ ದಟ್ಟ ಮೋಡಗಳು ಅವರನ್ನು ಮಂತ್ರ ಮುಗ್ಧಗೊಳಿಸುತ್ತಿದ್ದವು: ಬಾಗಿದ ಇಳಿವಯಸ್ಸಿಗಿಂತ ಹುರುಪಿನ ಹರೆಯ ಅವರ ಪಾಲಿನ ಬಯಕೆಯಾಗಿತ್ತು.**

# ನಿಮ್ಮ ವಾಹನವೂ ಸಹ ಹೆಚ್ಚು ಹೊಗೆ ಉಗುಳುತ್ತಿದೆಯೆ?

## ಹೊಗೆಯುಗುಳುವ ವಾಹನ ನಮ್ಮ ಆರೋಗ್ಯಕ್ಕೆ ಹಾನಿಕರ. ವಾಯು ಮಾಲಿನ್ಯವನ್ನು ತಡೆಗಟ್ಟಿರಿ. - ನಿಮ್ಮ ವಾಹನವನ್ನು ಸದಾ ಸುಸ್ಥಿತಿಯಲ್ಲಿಟ್ಟಿರಿ.

ಬೆಂಗಳೂರು ನಗರದಲ್ಲೇ ದಿನನಿತ್ಯ ಮೂರು ಲಕ್ಷಗಳಿಗಿಂತಲೂ ಅಧಿಕ ವಾಹನಗಳು ವಿನಾಶಕಾರೀ ಹೊಗೆಯನ್ನು ಉಗುಳುತ್ತವೆ.

ನಿಮ್ಮ ವಾಹನ ನಿಂತಿರುವಾಗ ಅನಗತ್ಯವಾಗಿ ಎಂಜಿನನ್ನು ಚಾಲನೆಯಲ್ಲಿಡಬೇಡಿ.

ವಾಹನ ನಿಂತೆ ಇದ್ದು, ಯಂತ್ರ ಮಾತ್ರ ಚಲಿಸುತ್ತಿದ್ದರೆ, ಹಾನಿಕಾರಕ ಹೊಗೆ ಮತ್ತು ಇಂಗಾಲದ ಮೊನಾಕ್ಸೈಡ್ ಉತ್ಪತ್ತಿ ಹೆಚ್ಚುತ್ತದೆ.

ವಾಹನದ ವೇಗವನ್ನು ಅನಗತ್ಯವಾಗಿ ಬದಲಾಯಿಸಬೇಡಿ.

ಪ್ರತೀ ಬಾರಿ ವೇಗ ಬದಲಾಯಿಸಿದಾಗ ಹೊಗೆ ಮತ್ತು ಇಂಗಾಲದ ಮೊನಾಕ್ಸೈಡ್ ಹೆಚ್ಚಿನ ಪ್ರಮಾಣದಲ್ಲಿ ಹೊರಬರುತ್ತವೆ. ನಿಮ್ಮ ವಾಹನವನ್ನು ಆದಷ್ಟು ನಯವಾಗಿ ಓಡಿಸಿ.

ಗಾಳಿ ಮತ್ತು ಇಂಧನ ತೆಳುವಾದ ರೀತಿಯಲ್ಲಿ ಸಂಮಿಶ್ರಗೊಳ್ಳುವಂತೆ ನಿಮ್ಮ ವಾಹನದ ಕಾರ್ಬ್ಯುರೇಟರನ್ನು ಸರಿಪಡಿಸಿಕೊಳ್ಳಿ.

ಅಧಿಕ ರೀತಿಯ ಇಂಧನ ಸಂಮಿಶ್ರಣ ಅಧಿಕ ಮಟ್ಟದಲ್ಲಿ ಇಂಗಾಲದ ಮೊನಾಕ್ಸೈಡನ್ನು ಹೊರದೂಡುತ್ತದೆ.

ಕನಿಷ್ಟ ಪಕ್ಷ ಮೂರು ತಿಂಗಳಿಗೊಮ್ಮೆ ನಿಮ್ಮ ವಾಹನವನ್ನು ನಿಯಮಿತವಾಗಿ ಸರ್ವೀಸಿಂಗ್‌ಗೆ ಕಳುಹಿಸಿ.

ಹೀಗೆ ಮಾಡುವಾಗ ಎಂಜಿನ್ ಟ್ಯೂನಿಂಗ್, ಸ್ಪಾರ್ಕ್ ಪ್ಲಗ್ ಮತ್ತು ಇಂಜೆಕ್ಷನ್ ಸಿಸ್ಟಮ್‌ಗಳಿಗೆ ವಿಶೇಷ ಗಮನ ನೀಡಿ. ಇದರಿಂದ ವಾಯು ಮಾಲಿನ್ಯ ಇಳಿತ ಮತ್ತು ಇಂಧನ ವೆಚ್ಚ ಕಡಿತ.

ವಾಹನ ಮಾಲಿನ್ಯತೆಯನ್ನು ನಿಯಂತ್ರಿಸಿ — ಹೆಚ್ಚಾಗುತ್ತಿರುವ ವಾಯು ಮಾಲಿನ್ಯವನ್ನು ತಡೆಯಲು ಸಹಕರಿಸಿ.

ಕರ್ನಾಟಕ ಮೋಟಾರು ವಾಹನಗಳ ನಿಯಮಗಳು, 1963ರ 196ನೆಯ ನಿಯಮ 1985ರ ನವೆಂಬರ್ 8ರಿಂದ ಜಾರಿಗೆ ಬಂದಿದೆ. ಇದು ಮೋಟಾರು ವಾಹನಗಳು ಹೊರದೂಡಬಹುದಾದ ಹೊಗೆ ಮತ್ತು ಇತರ ಮಾಲಿನ್ಯದ ಮಟ್ಟವನ್ನು ನಿಗದಿಪಡಿಸುತ್ತವೆ.

ಬಸ್ಸುಗಳು, ಲಾರಿಗಳು ಮತ್ತು ವ್ಯಾನುಗಳಂಥ ಡೀಸೆಲ್ ವಾಹನಗಳು ವಿಸರ್ಜಿಸುವ ಹೊಗೆಯ ಪ್ರಮಾಣದ ಪರೀಕ್ಷೆ ಸೆಪ್ಟೆಂಬರ್ 25, 1986ರಿಂದ ಪ್ರಾರಂಭವಾಗುವುದು. ಇದೇ ರೀತಿ ಇತರ ಮೋಟಾರು ವಾಹನಗಳ ಪರೀಕ್ಷೆಯನ್ನೂ ಹಂತ ಹಂತವಾಗಿ ಪ್ರಾರಂಭಿಸಲಾಗುವುದು.

ಪುನರ್ ಪರಿಶೀಲನೆಗಾಗಿ ನಿಗದಿಪಡಿಸುವ ಅವಧಿಯೊಳಗೆ ವಾಹನದ ಚಾಲಕರಾಗಲಿ ಮಾಲಿಕರಾಗಲಿ ವಾಹನವನ್ನು ತರದೇ ಹೋದಲ್ಲಿ ಅವರ ರಿಜಿಸ್ಟ್ರೇಷನ್ ಸರ್ಟಿಫಿಕೇಟನ್ನು ರದ್ದುಪಡಿಸಲಾಗುವುದು.

**ಕರ್ನಾಟಕ ಸರ್ಕಾರ - ನಿರ್ಮಲವಾದ ವಾತಾವರಣ ಮತ್ತು ಆರೋಗ್ಯಕರ ಜೀವನಕ್ಕಾಗಿ ಪರಿಸರ ಮಾಲಿನ್ಯವಾಗದಂತೆ ಪ್ರಯತ್ನಿಸುತ್ತಿದೆ.**

● ಕರ್ನಾಟಕ ವಾರ್ತೆ

ಕ್ರಮೇಣ ಈ ಜೀವನ ದೃಷ್ಟಿಕೋನ ಬದಲಾಗಿ ಜಗತ್ತು ಮತ್ತು ಜೀವನ ಗೌಣ ಎನ್ನುವ ತಾತ್ವಿಕ ದೃಷ್ಟಿಕೋನ ಹುಟ್ಟಿಕೊಂಡಿತು. ಭಾರತೀಯ ತತ್ವ ಚಿಂತನೆಯಲ್ಲಿ ಎಲ್ಲಾ ಕಾಲದಲ್ಲೂ ಇಹದ ನಿರಾಕರಣೆಗೆ ಮಾತ್ರ ಮಹತ್ವವನ್ನು ನೀಡಲಾಗಿತ್ತು. ಎಂದು ಬಗೆಯುತ್ತಾನೆ ಆಲ್ಬರ್ಟ್‌ಸ್ವೀಜರ್ (25). ಈ ಅಭಿಪ್ರಾಯವನ್ನು ವಿರೋಧಿಸಿ ಕೆ. ಎಸ್. ಮೂರ್ತಿ ತಮ್ಮ ಇತ್ತೀಚಿನ ಪುಸ್ತಕದಲ್ಲಿ ಹೀಗೆ ಬರೆಯುತ್ತಾರೆ : "ನಕಾರಾತ್ಮಕವಾದ ಪರಲೋಕಕ್ಕೆ ಸಂಬಂಧಿಸಿದ ಭಾರತೀಯ ಗ್ರಂಥಗಳನ್ನಷ್ಟೇ ಇಡೀ ಭಾರತೀಯ ಸನ್ನಿವೇಶದ ಪ್ರತಿನಿಧಿಯಾಗಿ ಪರಿಗಣಿಸುವುದು ದಡ್ಡತನವಾಗುತ್ತದೆ" (26). ಆದರೆ ನಾನು ಈ ಎರಡೂ ಅಭಿಪ್ರಾಯಗಳಿಂದ ಬೇರೆಯಾಗಿ ನಿಲ್ಲುತ್ತೇನೆ.

ಋಗ್ವೇದ ಕಾಲದ ಜನರು ಜಗತ್ತು ಮತ್ತು ಜೀವನ ಇವೆರೆಡರ ಬಗ್ಗೆಯೂ ಅತ್ಯಂತ ಪ್ರೀತಿಯನ್ನಿಟ್ಟುಕೊಂಡಿದ್ದರು ಎಂದು ನಾವಾಗಲೇ ನೋಡಿದ್ದೇವೆ. ಕಾಲಕ್ರಮೇಣ ಜಗತ್ತು ಮತ್ತು ಜೀವನವನ್ನು ಕುರಿತ ಬದಲಾದ ದೃಷ್ಟಿಕೋನವನ್ನು ಅತಿಪ್ರಾಚೀನ ಉಪನಿಷತ್ತುಗಳಾದ ಬೃಹದಾರಣ್ಯಕ ಮತ್ತು ಛಾಂದೋಗ್ಯಗಳು ಪ್ರತಿನಿಧಿಸುತ್ತವೆ. ಋಗ್ವೇದ ಮತ್ತು ಪ್ರಾರಂಭದ ಉಪನಿಷತ್ತುಗಳ ನಡುವೆ ಸುಮಾರು ಐದುಶತಮಾನಗಳ ಅಂತರವಿದೆ. ಈ ಐನೂರು ವರ್ಷಗಳ ಕಾಲದಲ್ಲಿ ಆರ್ಯರು ಸಿಂಧೂ ಮತ್ತು ಗಂಗಾ ತೀರದ ಪ್ರದೇಶವನ್ನು ಆಕ್ರಮಿಸಿಕೊಂಡಿದ್ದರು. ಆಕ್ರಮಣಕ್ಕೊಳಗಾದವರಲ್ಲಿ ಅಳವಡಿಕೆಯ ಲಕ್ಷಣವನ್ನು ಹೊಂದಿದ್ದವರು ಶೂದ್ರರಾಗಿ ಸಮಾಜದ ಹೆಣಿಗೆಯಲ್ಲಿ ಸೇರಿಹೋದರು. ಈ ಅಳವಡಿಕೆಗೆ ಹೊಂದದವರು ಸಮಾಜದ ಅಂಚಿಗೆ ತಳ್ಳಲ್ಪಟ್ಟು ಚಾಂಡಾಲರೆಂದು ಕರೆಯಲ್ಪಟ್ಟರು.

ಆರ್ಯರ ಸರ್ವಾಧಿಕಾರವನ್ನು ಒಪ್ಪಿಕೊಳ್ಳಲು ನಿರಾಕರಿಸಿದವರನ್ನು ಪರ್ವತಶ್ರೇಣಿಗಳಿಗೋ ಅಥವಾ ದಟ್ಟವಾದ ಅರಣ್ಯಕ್ಕೋ ದೂಡಲಾಯಿತು. ಅಂದರೆ ಆಕ್ರಮಣಕಾರಿಯುಗವು ಕಳೆದು ಸಾಮಾಜಿಕ ಸಂಘಟನೆಯ ಯುಗವು ಪ್ರಾರಂಭವಾಗಿತ್ತು ಎನಬಹುದು. ಈ ಕಾರಣದಿಂದ ರಾಜಕೀಯ ಸಂದರ್ಭದಲ್ಲಿ ಮಾತ್ರವೇ ಅಲ್ಲದೆ ಸಾಮಾಜಿಕ ಮತ್ತು ಆರ್ಥಿಕ ಸಂದರ್ಭದಲ್ಲಿ ಒಟ್ಟಾರೆ ಬದಲಾವಣೆಗಳು ಕಾಣಿಸಿಕೊಳ್ಳತೊಡಗಿದವು. ಬುಡಕಟ್ಟು ಗಣರಾಜ್ಯಗಳು. ಗಡಿಪ್ರದೇಶಗಳನ್ನು ಬಿಟ್ಟರೆ, ಸಣ್ಣಸಣ್ಣ ರಾಜ್ಯಗಳಾಗಿ ಒಂದುಗೂಡುತ್ತಿದ್ದವು. ಮಹತ್ವಾಕಾಂಕ್ಷೆಯ ರಾಜರುಗಳನ್ನು ವಿಶಾಲ ಚಕ್ರಾಧಿಪತ್ಯದ ಕನಸು ಕಾಡುತ್ತಿತ್ತು. ಕಾಡನ್ನು ಕಡಿದು ಜೌಗು ಭೂಮಿಯನ್ನು ಸಾಗುವಳಿಗೆ ರೂಪಾಂತರಿಸಿದ್ದರಿಂದ ಪಶುಸಂಗೋಪನೆಗಿಂತ ವ್ಯವಸಾಯವು ಹೆಚ್ಚು ಪ್ರಾಮುಖ್ಯತೆಯನ್ನು ಪಡೆಯುವಂತಾಯ್ತು.

ರಾಜಕೀಯ– ಸಾಮಾಜಿಕ– ಆರ್ಥಿಕವಾದ ಈ ಬದಲಾಣೆಗಳು ಜಾತಿಯ ಉದ್ಭವಕ್ಕೆ ಕಾರಣವಾದವು. ಈ ಹೊಸ ಆರ್ಥಿಕ ಸಮಕ್ಷತೆಗೆ ದುಡಿಮೆಯ ಶಕ್ತಿಯನ್ನು ಒದಗಿಸಲು ಆ ಕಾಲದ ಬೇರೆಡೆಗಳಲ್ಲೆಲ್ಲಾ ಕಂಡುಬರುತ್ತಿದ್ದ ಜೀತಪದ್ಧತಿಯ ಗುಲಾಮಗಿರಿಯನ್ನು ಹೇರುವ ಅವಶ್ಯಕತೆ ಇಲ್ಲಿ ಕಂಡುಬರಲಿಲ್ಲ. ಏಕೆಂದರೆ ಒಟ್ಟು ಜನಸಂಖ್ಯೆಯ ಶೇ. 70 ರಿಂದ 80 ರಷ್ಟಿದ್ದ ಶೂದ್ರ ಮತ್ತು ಚಂಡಾಲರನ್ನು ಮೇಲ್ಜಾತಿಗಳಿಗಾಗಿ ದುಡಿಯಲು ಸಿದ್ಧಗೊಳಿಸಿದ್ದ ವ್ಯವಸ್ಥೆ ಅದಾಗಿತ್ತು. ಅವರ ಜೊತೆಗೆ ಮದುವೆ ಮುಂತಾದ ಕಾರ್ಯಗಳಿಗಾಗಿ ಪಡೆದ ಸಾಲವನ್ನು ಹಿಂತಿರುಗಿಸಲಾದ ಕೆಲವರನ್ನು ಜೀತದಾಳುಗಳನ್ನಾಗಿಯೂ ನೇಮಿಸಿಕೊಳ್ಳಲಾಗುತ್ತಿತ್ತು.

ತನ್ನ ಬಹು ಸಂಖ್ಯೆಯ ಸದಸ್ಯರನ್ನು ಹಸಿವಿಗೂ ಸಾಮಾಜಿಕ ಹೀನ ಸ್ಥಿತಿಗೂ ಅಗೌರವಕ್ಕೂ ಮತ್ತು ಹಲವಾರು ರೀತಿಯ ಅನ್ಯಾಯಕ್ಕೂ ಈಡುಮಾಡುವ ಸಮಾಜವ್ಯವಸ್ಥೆಯಲ್ಲಿ ಜಗತ್ತು ಮತ್ತು ಜೀವನ ನಿರಾಕರಣದ ತತ್ವಪ್ರಣಾಲಿಗೆ ಪುಷ್ಟಿದೊರಕುವುದು ಸಾಮಾನ್ಯ. ಋಗ್ವೇದ ಮತ್ತು ಉಪನಿಷತ್ತುಗಳ ನಡುವಿನ ಕಾಲಾವಧಿಯಲ್ಲಿ ನಡೆದದ್ದು ಇದೇ. ಸೈನ್ಯಬಲವು ಸಂಪೂರ್ಣವಾಗಿ ಮೇಲ್ಜಾತಿಯ ಕೈಯಲಿತ್ತು. ಇದಲ್ಲದೆ ರಾಜಕೀಯ ಅಧಿಕಾರದ ಎಲ್ಲ ಸೂತ್ರಗಳನ್ನೂ ಅವರು ತಮ್ಮ ಹತೋಟಿಯಲ್ಲಿಟ್ಟುಕೊಂಡರು. ಸೈನ್ಯಬಲವಿದ್ದರೂ ಜನತೆಯನ್ನು ನಿಯಂತ್ರಿಸಲು ರಾಜಕೀಯ ಅಧಿಕಾರವೊಂದೇ ಸಾಕಾಗುವುದಿಲ್ಲ. ಜನತೆಯ ಮನಸ್ಸಿನ ಮೇಲೆ ಹಿಡಿತವನ್ನು ಸಾಧಿಸಿ ತಮ್ಮ ಕಷ್ಟಪರಂಪರೆಗಳ ಜಗತ್ತು ಮಿಥ್ಯವೆಂದು ಹೇಳುವುದರ ಮೂಲಕ ಅವರನ್ನು ಸಾಮಾಜಿಕವಾಗಿ ವಿಮುಖಗೊಳಿಸಬೇಕಾಗಿತ್ತು. ತಮ್ಮ ಹೀನ ಸ್ಥಿತಿಗೂ ಕಷ್ಟಪರಂಪರೆಗೂ ತಮ್ಮ ವಿಧಿಯೇ ಕಾರಣ ಎಂದು ನಂಬುವಂತೆ ಮಾಡುವುದರಿಂದ ಆಳುವ ವರ್ಗವಾದ ಮೇಲ್ಜಾತಿಯವರ ಸವಲತ್ತು ಮತ್ತು ಅಧಿಕಾರ ಸುರಕ್ಷಿತವಾಗಿರುತ್ತದೆ. ನಿಜವಾಗಿಯೂ ಹೇಳಬೇಕಾದರೆ ಅರಿವನ್ನು ಹಾಳುಮಾಡುವಲ್ಲಿ ನಮ್ಮ ಭಾರತದ ಮೇಲ್ಜಾತಿಗಳಿಗೆ. ಅದರಲ್ಲೂ ರಾಜರು ಮತ್ತು ಪುರೋಹಿತರಿಗೆ. ಸ್ಟಾಲಿನ್ ಮತ್ತು ಮಾವೋರಿಗೆ ಕೂಡ ಗೊತ್ತಿರದ ವಿಧಾನಗಳು ತಿಳಿದಿದ್ದವು.

**ಆರ್ಯರು ಸಿಂಧೂ ಮತ್ತು ಗಂಗಾ ತೀರದ ಪ್ರದೇಶವನ್ನು ಆಕ್ರಮಿಸಿ ಕೊಂಡಿದ್ದರು. ಆಕ್ರಮಣಕ್ಕೊಳಗಾದವರಲ್ಲಿ ಅಳವಡಿಕೆಯ ಲಕ್ಷಣವನ್ನು ಹೊಂದಿದ್ದವರು ಶೂದ್ರರಾಗಿ ಸಮಾಜದ ಹೆಣಿಗೆಯಲ್ಲಿ ಸೇರಿಹೋದರು. ಈ ಅಳವಡಿಕೆಗೆ ಹೊಂದದವರು ಸಮಾಜದಂಚಿಗೆ ತಳ್ಳಲ್ಪಟ್ಟು ಚಾಂಡಾಲರೆಂದು ಕರೆಯಲ್ಪಟ್ಟರು.**

ಈಗಾಗಲೇ ನಾನು ಹೇಳಿರುವಂತೆ ಋಗ್ವೇದದಲ್ಲಿ ಪುನರ್ಜನ್ಮವನ್ನು ಕುರಿತಂತೆ ಯಾವ ಅಂಶವೂ ಕಂಡುಬರುವುದಿಲ್ಲ. ಅದು ನಂತರದಲ್ಲಿ ಉದ್ದಿಶ್ಯಪೂರ್ವಕವಾಗಿ ಕಲ್ಪಿಸಿದ ಕಟ್ಟುಕಥೆ. "ಪೂರ್ವಜನ್ಮದ ಕಲ್ಪನೆಯ ಚರ್ಚೆಯು ಎರಡು ಪ್ರಾಚೀನ ಉಪನಿಷತ್ತುಗಳಲ್ಲಿ ಮಾತ್ರ ಪ್ರಥಮ ಭಾರಿಗೆ ಕಾಣಿಸಿಕೊಳ್ಳುತ್ತದೆ. ಈ ಕಲ್ಪನೆಯನ್ನು ಪುರೋಹಿತ ಗುಂಪಿಗೆ ಸೇರಿದ ಬ್ರಾಹ್ಮಣನು ಉಪದೇಶಿಸದೆ ಆಳುವ ಸೈನಿಕ ವರ್ಗಕ್ಕೆ ಸೇರಿದ ಕ್ಷತ್ರಿಯನೊಬ್ಬನು ಉಪದೇಶಿಸುತ್ತಾನೆ." (27) ಎನ್ನುತ್ತಾನೆ ನಾರ್ಮನ್ ಬ್ರೌನ್. ಈ ಕ್ಷತ್ರಿಯ ರಾಜಕುಮಾರನ ಹೆಸರು ಪ್ರವಾಹನ ಜೈಬಾಲಿ. ಪುನರ್ಜನ್ಮದ ನಂಬಿಕೆಯು ಪ್ರಚಲಿತವಿದ್ದ ಸಂತಾಲರು ಮತ್ತು ಮುಂಡರು ಮುಂತಾದ ಬುಡಕಟ್ಟು ಜನಾಂಗಗಳಿಂದ ಈ ಕಟ್ಟುಕಥೆಗೆ ಸ್ಫೂರ್ತಿ ದೊರಕಿರಬೇಕು.

ಎ. ಇ. ಗಾಫ್ ಹೀಗೆ ಬರೆಯುತ್ತಾನೆ : "ಆತ್ಮವು ವೃಕ್ಷ. ಪ್ರಾಣಿ ಮತ್ತು ಹೊಸ ಮಾನವ ಶರೀರಕ್ಕೆ ಪ್ರವೇಶಿಸುವ ನಂಬಿಕೆಯು ಉಪನಿಷತ್ತುಗಳು ಮತ್ತು ಪ್ರಾಚೀನ ವೈದೀಕ ಸಾಹಿತ್ಯದಲ್ಲಿ ಕಾಣಬರುವುದಿಲ್ಲವಾದ್ದರಿಂದ ಹಿಂದೂಗಳಿಗೂ ಸ್ಥಳೀಯರಿಗೂ, ಏರ್ಪಟ್ಟ ರಕ್ತ ಸಂಬಂಧದ ಪ್ರಕ್ರಿಯೆಯಲ್ಲಿ ರೂಪುಗೊಂಡ ಸ್ಥಳೀಯ ನಂಬಿಕೆಗಳು ಎಂದು ಬಗೆಯುವುದು ಸೂಕ್ತವೆಂದು ಕಾಣುತ್ತದೆ." (28) ಅದಿರಲಿ ಪ್ರವಾಹನ ರಾಜಕುಮಾರನ ಹಿಂದೆಯೇ ಕರ್ಮ ಸಿದ್ಧಾಂತವನ್ನು ಕಟ್ಟುವ ಇಬ್ಬರು ಪುರೋಹಿತರು ನಮಗೆ ಕಂಡುಬರುತ್ತಾರೆ. ಬೃಹದಾರಣ್ಯಕವು ಈ ಕಟ್ಟುಕಥೆಯ ಪ್ರಕ್ರಿಯೆಯ ವಿವರವನ್ನು. ನೀಡುತ್ತದೆ.

ಬ್ರಹ್ಮನ ಸ್ವರೂಪವನ್ನು ಯಾರಾದರೂ ತಿಳಿಸಿಕೊಡುವುದಾದರೆ. ಪ್ರತಿ ಕೋಡಿಗೂ ಹತ್ತು ಪಾದಾ ಚಿನ್ನದಂತೆ ಕಟ್ಟಿದ ಒಂದು ಸಾವಿರ ಹಸುಗಳನ್ನು ಕೊಡುವುದಾಗಿ ವಿದೇಹದ ಜನಕ ಮಹಾರಾಜನು ಘೋಷಿಸುತ್ತಾನೆ. ಆಗ ಪುರೋಹಿತನ ನಡುವಿನಿಂದ ಧೈರ್ಯವಾಗಿ ಎದ್ದುನಿಂತ ಯಾಜ್ಞವಲ್ಕ್ಯನು. ಹಸುಗಳನ್ನು ಆಶ್ರಮಕ್ಕೆ ಅಟ್ಟಿಕೊಂಡು ಹೋಗುವಂತೆ ತನ್ನ ಶಿಷ್ಯನಿಗೆ ಆಜ್ಞಾಪಿಸುತ್ತಾನೆ. ಯಾಜ್ಞವಲ್ಕ್ಯನ ಈ ಉದ್ಧಟತನವನ್ನು ಕಂಡು ಕೋಪಗೊಂಡ ಜಾರತ್ಕಾರವ ಅರ್ತಭಾಗನು ಅವನನ್ನು ವಾದಕ್ಕೆ ಆಹ್ವಾನಿಸುತ್ತಾನೆ. ಆಗ ಯಾಜ್ಞವಲ್ಕ್ಯ ಹೇಳುವುದನ್ನು ನೋಡಿ : "ನನ್ನ ಪ್ರೀತಿಯ ಅರ್ತಭಾಗನೇ ನನ್ನ ಕೈಯನ್ನು ಹಿಡಿದುಕೋ. ಈ ರಹಸ್ಯ ತಿಳಿದಿರುವುದು ನಮ್ಮಿಬ್ಬರಿಗೆ ಮಾತ್ರ. ಸಾರ್ವಜನಿಕವಾಗಿ ನಾವು ಇಲ್ಲಿ ಮಾತನಾಡುವುದು ಸಲ್ಲದು." (ಯಾಜ್ಞವಲ್ಕ್ಯ ಸಂಹಿತೆ ಆರ್. ಇ. ಹ್ಯೂಮನ 'ಹದಿಮೂರು ಪ್ರಮುಖ ಉಪನಿಷತ್ತುಗಳು' ಎನ್ನುವ ಕೃತಿಯಿಂದ) ಇಬ್ಬರೂ ರಹಸ್ಯ ಮಾತುಕತೆಗಾಗಿ ಸಭೆಯಿಂದ ಹೊರಗೆ ನಡೆದರು. ಹಿಂತಿರುಗಿದಾಗ "ಅವರು ಹೇಳಿದ್ದು ಕರ್ಮ ; ಹೊಗಳಿದ್ದು ಕರ್ಮ. ಒಳ್ಳೆಯದನ್ನು ಮಾಡುವವನು ಒಳ್ಳೆಯವನಾಗುತ್ತಾನೆ. ಕೆಟ್ಟದ್ದನ್ನು ಮಾಡುವವನು ಕೆಟ್ಟವನಾಗುತ್ತಾನೆ ಎನ್ನುವುದರಲ್ಲಿ ಸಂಶಯವಿಲ್ಲ. ಇದನ್ನು ಕೇಳಿ ಅರ್ತಭಾಗನು ಶಾಂತನಾದನು." (29)

ಹೀಗೆ ಕರ್ಮನ್ನು ವಾದರಹಸ್ಯವಾಗಿ, ಕಟ್ಟುಕಥೆಯಾಗಿ ಹೆಣೆಯಲ್ಪಟ್ಟಿತು. ಮೂರು ಸಾವಿರ ವರ್ಷಗಳಿಂದ ಜಾರತ್ಕಾರದ ಅರ್ತಭಾಗನಂತೆ ನಾವೂ ಕೂಡ ನಮ್ಮ ಶಾಂತಿಯನ್ನು ಕಾಪಾಡಿಕೊಂಡು ಬಂದಿದ್ದೇವೆ. ಜಾರತ್ಕಾರವನು ಶಾಂತವಾಗಲು ಯಾಜ್ಞವಲ್ಕ್ಯನಿಗೂ ಅವನಿಗೂ ಯಾವುದೋ ರಹಸ್ಯ ಒಪ್ಪಂದದ ಕಾರಣವಿರಬಹುದು. ಆದರೆ ಕರ್ಮ ಮತ್ತು ಪುನರ್ಜನ್ಮದ ಸಿದ್ಧಾಂತವನ್ನು ಪ್ರಶ್ನಿಸುವ ಹಕ್ಕನ್ನು ಬಿಟ್ಟುಕೊಡಲು ನಮಗೆ ಯಾವ ಕಾರಣವೂ ಇಲ್ಲ.

ಸಂಪೂರ್ಣವಾಗಿ ತಳಪಾಯವೇ ಇಲ್ಲದಿದ್ದರೂ ಕರ್ಮ ಮತ್ತು ಪುನರ್ಜನ್ಮಗಳ ಸಿದ್ಧಾಂತವು ಹಿಂದೂ ಚಿಂತನೆ ಮತ್ತು ಜೀವನದ ತಳಹದಿಯಾಗಿದೆ. ಈ ಸಿದ್ಧಾಂತವನ್ನು ಮೂಲದಲ್ಲಿ ಪ್ರತಿಪಾದಿಸಿದ ರಾಜಕುಮಾರ ಪ್ರವಾಹನನಾಗಲಿ, ಪುರೋಹಿತ ಯಾಜ್ಞವಲ್ಕ್ಯನಾಗಲೀ ನೀಡಿದ ಅಪಕ್ವ ಪರಿಸ್ಥಿತಿಯಲ್ಲಿ ಅವು ಈಗಿಲ್ಲ. ಹಲವಾರು ಸೂಕ್ಷ್ಮತೆಗಳನ್ನು, ಸುಧಾರಣೆಗಳನ್ನು ಕೂಡಿಸಿಕೊಂಡು ತರ್ಕಬದ್ಧಗೊಳಿಸಿದ ಸಶಕ್ತ ಸಿದ್ಧಾಂತದ ರೂಪವನ್ನು ಅವು ಈಗ ಪಡೆದುಕೊಂಡಿವೆ. ಗೌತಮಬುದ್ಧ, ಮಹಾವೀರರಂತಹವರೂ ಸಹ ತಪ್ಪಿಸಿಕೊಳ್ಳಲು ಸಾಧ್ಯವಾಗದಂತಹ ರಾಕ್ಷಸಬಾಹುಗಳ ಈ ಸಿದ್ಧಾಂತದ ಶಕ್ತಿ ನಿಜವಾಗಿಯೂ ಆಶ್ಚರ್ಯಕರವಾದದ್ದು.

ಬುದ್ಧ ಮತ್ತು ಮಹಾವೀರರ ಪರಿಕಲ್ಪನೆಯಲ್ಲಿ ದೈವ ಅನಿವಾರ್ಯದ್ದಾಗಿ. ತೋರಲಿಲ್ಲ. ಆತ್ಮದ ಕಲ್ಪನೆಯನ್ನು ಬುದ್ಧನು ಅಲ್ಲಗಳೆದರೆ ಮಹಾವೀರ ಅದನ್ನು ಸಂಪೂರ್ಣವಾಗಿ ಒಪ್ಪಲೂ ಇಲ್ಲ. ಅಲ್ಲಗಳೆಯಲೂ ಇಲ್ಲ. ಇಬ್ಬರಿಗೂ ಕರ್ಮ ಮತ್ತು ಪುನರ್ಜನ್ಮದಲ್ಲಿ ನಂಬಿಕೆಯಿತ್ತು. ಬುದ್ಧ ಮತ್ತು ಮಹಾವೀರರ ಸೈದ್ಧಾಂತಿಕ ಚೌಕಟ್ಟಿನಲ್ಲಿ ಸ್ಪಷ್ಟವಾಗಿ ಕಾಣುವ ಈ ಅಸಂಗತತೆಗೆ ಕೂದಲನ್ನು ಸೀಳುವ ವಾದದ ಮೂಲಕ ವಿವರಣೆಯನ್ನು ಕೊಡಲು ಹಲವಾರು ಪ್ರಯತ್ನಗಳು ನಡೆದಿವೆ. ಬೌದ್ಧ ಮತ್ತು ಜೈನ ಮತವನ್ನು ಮೂಲೆಗುಂಪುಗೊಳಿಸಿ ಹಿಂದೂ

**ದೇವರಿಕಲಿ, ಇಲ್ಲದಿರಲಿ ಎಲ್ಲಿಯವರೆಗೆ ಕರ್ಮದಲ್ಲೂ ಅದರ ಪ್ರಮುಖ ಅಂಗವಾದ ಪುನರ್ಜನ್ಮದಲ್ಲೂ ನಂಬಿಕೆ ಇರುತ್ತದೋ ಅಲ್ಲಿಯವರೆಗೆ ಆಳುವ ವರ್ಗ ಜನಗಳ ಮನಸ್ಸನ್ನು ಕಬ್ಬಿಣದಷ್ಟು ಬಲವಾದ ತನ್ನ ಹಿಡಿತದಲ್ಲಿ ಇಟ್ಟುಕೊಳ್ಳಬಹುದು; ಸುರಕ್ಷಿತವಾಗಿರಬಲ್ಲದು.**

ಧರ್ಮವು ವಿಜೃಂಭಿಸಲು ಈ ವೈವಿಧ್ಯಗಳೇ ಕಾರಣ ಎಂಬುದರ ಬಗ್ಗೆ ನನಗೆ ಕಿಂಚಿತ್ತೂ ಸಂಶಯವಿಲ್ಲ. ಅಜೀವಕರಂತಹ ನಿರೀಶ್ವರವಾದಿಗಳೂ ಕೂಡ ಕರ್ಮ ಸಿದ್ಧಾಂತದಲ್ಲಿ ನಂಬಿಕೆ ಇಟ್ಟಿದ್ದರು ಎನ್ನುವುದನ್ನು ಮರೆಯುವಂತಿಲ್ಲ. "ಅಜೀವಕರ ಕಾಲದಿಂದ ಇದುವರೆವಿಗೂ ದೇವರ ಅಸ್ತಿತ್ವವನ್ನು ನಿರಾಕರಿಸುವುದಕ್ಕಿಂತ ಕರ್ಮ ಸಿದ್ಧಾಂತವನ್ನು ನಿರಾಕರಿಸುವುದು ಭಾರತದಲ್ಲಿ ಅತ್ಯಂತ ಅಪಾಯಕಾರಿ. ಮೊಗಲರ ಆಳ್ವಿಕೆಯವರೆಗಾದರೂ ಇದು ಸಾಧ್ಯವಿಲ್ಲದಂತಹ ಸ್ಥಿತಿಯಾಗಿತ್ತು" (30) ಎನ್ನುವ ರೀವೆಯ ಮಾತು ಸೂಕ್ತವಾದುದು.

ಇಸ್ಲಾಂ, ಕ್ರೈಸ್ತ ಮತ್ತು ಇತರ ಧರ್ಮಗಳಲ್ಲಿರುವಂತೆ ದೇವರ ಅಸ್ತಿತ್ವವನ್ನು ನಿರಾಕರಿಸುವುದು ಹಿಂದೂ ಧರ್ಮದಲ್ಲಿ ಏಕೆ ಅಪರಾಧವೆನಿಸುವುದಿಲ್ಲ ಎಂಬುದು ಸುಲಭವಾಗಿ ಅರ್ಥವಾಗುವಂತಹದ್ದು. ದೇವರಿರಲಿ, ಇಲ್ಲದಿರಲಿ ಎಲ್ಲಿಯವರೆಗೆ ಕರ್ಮದಲ್ಲೂ ಅದರ ಪ್ರಮುಖ ಅಂಗವಾದ ಪುನರ್ಜನ್ಮದಲ್ಲೂ ನಂಬಿಕೆ ಇರುತ್ತದೋ ಅಲ್ಲಿಯವರೆಗೆ ಆಳುವ ವರ್ಗ ಜನಗಳ ಮನಸ್ಸನ್ನು ಕಬ್ಬಿಣದಷ್ಟು ಬಲವಾದ ತನ್ನ ಹಿಡಿತದಲ್ಲಿ ಇಟ್ಟುಕೊಳ್ಳಬಹುದು; ಸುರಕ್ಷಿತವಾಗಿರಬಲ್ಲದು.

ಅಸ್ಪೃಶ್ಯತೆಯನ್ನೂ ಒಳಗೊಂಡಂತೆ ಮನುಷ್ಯನನ್ನು ಹೀನಾಯವಾಗಿ ಪರಿಗಣಿಸುವ ಯಾವುದೇ ಸಾಮಾಜಿಕ ಅನ್ಯಾಯವನ್ನು ಕರ್ಮ ಮತ್ತು ಪುನರ್ಜನ್ಮಗಳ ಆಧಾರದ ಮೇಲೆ ಸಮರ್ಥಿಸಬಹುದು. ಕಾರ್ಯಕಾರಣ ನಿಯತಿಯು ಪ್ರಕೃತಿ ನಿಯಮ ಎನ್ನುವುದು ನಿಸ್ಸಂದೇಹವಾದ್ದು. ಆದರೆ ಕರ್ಮ ಸಿದ್ಧಾಂತವಾದಿಗಳು ಹೇಳುವ ರೀತಿಯಲ್ಲಿ ಈ ಕಾರ್ಯ ಕಾರಣ ನಿಯತಿಯು ಸಾವಿನಾಚೆಗೂ ವ್ಯಾಪಿಸುತ್ತದೆ ಎನ್ನುವುದೂ ಒಂದು ಜನ್ಮದಲ್ಲಿ ಮಾಡಿದ ಪಾಪ ಪುಣ್ಯಗಳ ಪರಿಣಾಮವು ಮತ್ತೊಂದು ಜನ್ಮಕ್ಕೂ ವ್ಯಾಪಿಸುತ್ತದೆ ಎನ್ನುವುದೂ ಶುದ್ಧ ಸುಳ್ಳು. ಈ ಅಪಾಯಕಾರೀ ಸುಳ್ಳನ್ನು ಸ್ವಯಂ ಪ್ರಕಾಶಿತ ಸತ್ಯ ಎನ್ನುವಂತೆ ಹೇಳತೊಡಗಿದಾಗ ನಾವೂ ಕೂಡ ಕೆ.ವಿ. ರಂಗಸ್ವಾಮಿ ಅಯ್ಯಂಗಾರ್ ಅವರು ಹೇಳುವಂತೆ, "ಪ್ರಕೃತಿಯಲ್ಲಿ ನಮಗೆ ಕಾಣುವುದು ಸಮಾನತೆಯಲ್ಲ ಅಸಮಾನತೆ" ಎಂದು ತಲೆತಾಕಬೇಕಾಗುತ್ತದೆ. ಸನಾತನ ಸಂಸ್ಕೃತಿಯ ಪ್ರಮುಖ ವಕ್ತಾರರಾಗಿದ್ದ ಅವರು 1946ರಲ್ಲಿ ಲಖನೌ ವಿಶ್ವವಿದ್ಯಾನಿಲಯದ ಆಶ್ರಯದಲ್ಲಿ ನೀಡಿದ ಉಪನ್ಯಾಸದ ಕೆಲವು ಭಾಗಗಳನ್ನು ನಿಮ್ಮ ಅವಗಾಹನೆಗೆ ತರಲು ಇಚ್ಛಿಸುತ್ತೇನೆ.

(ಮುಂದುವರಿಯುವುದು)

## ಗ್ರಂಥಋಣ


23. ಕೊಸಾಂಬಿ ಡಿ. ಡಿ. : ದಿ ಕಲ್ಚರ್ ಎಂಡ್ ಸಿವಿಲಿಸೇಷನ್ ಆಫ್ ಏನ್‌ಷಿಯೆಂಟ್ ಇಂಡಿಯಾ ಇನ್ ಹಿಸ್ಟಾರಿಕಲ್ ಔಟ್‌ಲೈನ್, ಲಂಡನ್, 1965, ಪು 79
24. ದತ್ ಆರ್. ಸಿ. : ಸಿವಿಲಿಸೇಷನ್ ಇನ್ ಏನ್‌ಷಿಯೆಂಟ್ ಇಂಡಿಯಾ, ಸಂ. ಒಂದು, ಲಂಡನ್, 1893, ಪು 65.
25. ಸ್ವೀಜರ್ ಆಲ್ಬರ್ಟ್ : ಇಂಡಿಯನ್ ಥಾಟ್ ಎಂಡ್ ಇಟ್ಸ್ ಡೆವೆಲಪ್‌ಮೆಂಟ್, ಲಂಡನ್, 1951.
26. ಮೂರ್ತಿ, 1965, ಪು 41.
27. ಬ್ರೌನ್, ಡಬ್ಲ್ಯು ನಾರ್ಮನ್ : ಮಾಹೆನ್ ಇನ್ ದಿ ಯೂನಿವರ್ಸ್, ಕಲ್ಕತ್ತ, 1966, ಪು 110.
28. ಹ್ಯೂಂ, ಆರ್. ಇ. : ದಿ ಥರ್ಟೀನ್ ಪ್ರಿನ್ಸಿಪಲ್ ಉಪನಿಷದ್ಸ್, ಲಂಡನ್ 1954, ಪು. 110.
29. ಅದೇ ಪು 110.
30. ರೀವೆ, 1964, ಪು 43–44.



### ಮನವಿ

ಎಲ್ಲ ಚಂದಾದಾರರ ಅವಧಿ ಮೇ 85ಕ್ಕೆ ಮುಗಿದಿರುವುದರಿಂದ ಚಂದಾ ನವೀಕರಿಸಲು ವಿನಂತಿಸುತ್ತೇವೆ. ಮುಂದಿನ ಸಂಚಿಕೆಯಿಂದ ನವೀಕರಿಸಿದ ಚಂದಾದಾರರಿಗೆ ಮಾತ್ರ ಕಳಿಸಲಾಗುವುದು.

ಹಾಗೆಯೇ ಪ್ರತಿತಿಂಗಳು 5ನೇ ತಾರೀಖಿನ ಒಳಗೆ ಹಣ ಕಳಿಸದ ಮಾರಾಟಗಾರರಿಗೆ ಪತ್ರಿಕೆ ಕಳಿಸಲಾಗುವುದಿಲ್ಲ.

ಸಂಪಾದಕ

### ಚಂದಾ ವಿವರ

| | |
|---|---|
| ಬಿಡಿಪ್ರತಿ : | 1 ರೂ. |
| ವಾರ್ಷಿಕ ಚಂದಾ : | 25 ರೂ. |
| ಆಜೀವ ಚಂದಾ : | 250 ರೂ. |

ಡಿ. ಡಿ. ಅಥವಾ ಎಂ. ಓ. ಮೂಲಕ ಮಾತ್ರ ಚಂದಾ ಸ್ವೀಕರಿಸಲಾಗುವುದು.


ಸಂಪಾದಕ/ಪ್ರಕಾಶಕ/ಮುದ್ರಕ: ರಂಗಸ್ವಾಮಿ ಬೆಲ್ಲದಮಡು, 2ಬಿ, ಮಹದೇಶ್ವರ ನಿಲಯ, 2ನೇ ಕ್ರಾಸ್, 2ನೇ ಮೈನ್, ಎ.ಕೆ. ಕಾಲನಿ, ಹೊಸಳ್ಳಿ, ಬೆಂಗಳೂರು–40
ಮುದ್ರಣ : ಪೃಥ್ವಿ ಪ್ರಕಾಶನ ಲಿಮಿಟೆಡ್, ವಿಜಯನಗರ, ಬೆಂಗಳೂರು–40